ಕುಡುಬಿ ಸಮುದಾಯದ ಸಮಾಜೋ-ಆರ್ಥಿಕ ಅಧ್ಯಯನ
ಮಂಗಳೂರು ತಾಲೂಕನ್ನು ಅನುಲಕ್ಷಿಸಿ

ಎಂ.ಫಿಲ್. ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ಪದವಿ ಪ್ರಬಂಧ

ಸಂಶೋಧಕರು

ಜಯಾನಂದ

ನೋಂದಣಿ ಸಂಖ್ಯೆ: ೧೬೧/೧೧೦೩೦೦೪೮

ಮಾರ್ಗದರ್ಶಕರು

ಡಾ॥ ದುಗ್ಗಪ್ಪ ಕಜೆಕಾರ್

ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು

ಸಮಾಜಕಾರ್ಯ ಸ್ನಾತಕೋತ್ತರ ವಿಭಾಗ

ಸರಕಾರಿ ಪ್ರಥಮ ದರ್ಜೆ ಕಾಲೇಜು

ತೆಂಕನಿಡಿಯೂರು ಉಡುಪಿ ಜಿಲ್ಲೆ

ಕರ್ನಾಟಕ ಥಿಯಾಲಾಜಿಕಲ್ ಸಂಶೋಧನಾ ಕೇಂದ್ರ ಬಲ್ಮಠ,

ಮಂಗಳೂರು-೫೭೫೦೦೧

೨೦೧೨

ಕುಡುಬಿ ಸಮುದಾಯದ ಸಮಾಜೋ-ಆರ್ಥಿಕ ಅಧ್ಯಯನ

ಮಂಗಳೂರು ತಾಲೂಕನ್ನು ಅನುಲಕ್ಷಿಸಿ

ಎಂ.ಫಿಲ್, ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ಪದವಿ ಪ್ರಬಂಧ

ಸಂಶೋಧಕರು

ದಯಾನಂದ

ನೋಂದಾಣಿ ಸಂಖ್ಯೆ: 161111030048

ಮಾರ್ಗದರ್ಶಕರು

ಡಾ॥ ದುಗ್ಗಪ್ಪ ಕಜೆಕಾರ್

ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು
ಸಮಾಜಕಾರ್ಯ ಸ್ನಾತಕೋತ್ತರ ವಿಭಾಗ
ಸರಕಾರಿ ಪ್ರಥಮ ದರ್ಜೆ ಕಾಲೇಜು
ತೆಂಕನಿಡಿಯೂರು ಉಡುಪಿ ಜಿಲ್ಲೆ

ಕರ್ನಾಟಕ ಥಿಯಾಲಾಜಿಕಲ್ ಸಂಶೋಧನಾ ಕೇಂದ್ರ ಬಲ್ಮಠ,

ಮಂಗಳೂರು-575001

2017

ಅರ್ಹತಾ ಪತ್ರ

ಶ್ರೀ ದಯಾನಂದ ಇವರ **"ಕುಡುಬಿ ಸಮುದಾಯದ ಸಮಾಜೋ–ಆರ್ಥಿಕ ಅಧ್ಯಯನ ಮಂಗಳೂರು ತಾಲೂಕನ್ನು ಅನುಲಕ್ಷಿಸಿ"** ಎಂಬ ಶೀರ್ಷಿಕೆಯಲ್ಲಿ ಪ್ರಬಂಧವನ್ನು ಎಂ.ಫಿಲ್ ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಈ ಪ್ರಬಂಧವು ಸಂಶೋಧಕರ ಸ್ವಂತ ಸಂಶೋಧನೆಯ ಮೂಲಕ ರೂಪುಗೊಂಡಿದೆ. ಈ ಪ್ರಬಂಧ ವಿಷಯವನ್ನು ಅಥವಾ ಇದರ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಪದವಿಗಾಗಲಿ, ಉದ್ದೇಶಕ್ಕಾಗಲಿ ಒಪ್ಪಿಸಿಲ್ಲ.


ದಿನಾಂಕ: 31/07/2017

ಸ್ಥಳ: ಉಡುಪಿ

ಮಾರ್ಗದರ್ಶಕರು

ಡಾ॥ ದುಗ್ಗಪ್ಪ ಕಜೆಕಾರ್

Dr. DUGGAPPA KAJEKAR
Co-ordinator
Department of P.G. Studies in Social Work
Govt. First Grade College
Thenkanidiyur, Udupi - 576 106



ಪ್ರಮಾಣ ಪತ್ರ

"ಕುಡುಬಿ ಸಮುದಾಯದ ಸಮಾಜೋ-ಆರ್ಥಿಕ ಅಧ್ಯಯನ ಮಂಗಳೂರು ತಾಲೂಕನ್ನು ಅನುಲಕ್ಷಿಸಿ" ಎಂಬ ಶೀರ್ಷಿಕೆಯಲ್ಲಿ ಪ್ರಬಂಧವನ್ನು ಎಂ.ಫಿಲ್, ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಲು ಡಾ॥ ದುಗ್ಗಪ್ಪ ಕಜೆಕಾರ್, ಪ್ರಾಧ್ಯಾಪಕರು, ಸರಕಾರಿ ಪ್ರಥಮ ದರ್ಜೆ ಕಾಲೇಜು ತೆಂಕ ನಿಡಿಯೂರು ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ. ಈ ಪ್ರಬಂಧ ವಿಷಯವನ್ನು ಅಥವಾ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಲಿ ಉದ್ದೇಶಕ್ಕಾಗಲಿ ಬಳಸಿಕೊಂಡಿಲ್ಲ ಎಂದು ಘೋಷಿಸುತ್ತೇನೆ.

ದಿನಾಂಕ: 31/07/2017

ಸ್ಥಳ: ಮಂಗಳೂರು

ದಯಾನಂದ

ವಿಷಯಾನುಕ್ರಮ

ಕೋಷ್ಟಕಗಳ ವಿವರ

ಅಧ್ಯಾಯನ ೦೧

ಅಧ್ಯಯನದ ಪೀಠಿಕೆ, ಸಮಸ್ಯೀಕರಣ, ಉದ್ದೇಶ, ವಿಧಾನ, ಊಹೆಗಳು, ಇತಿಮಿತಿಗಳು, ರೂಪುರೇಷೆ ಮತ್ತು ಗ್ರಂಥ ಪರಾಮರ್ಶೆ

ಅಧ್ಯಾಯ-1

1.1 ಪೀಠಿಕೆ: ಕಾಲ ಚಕ್ರದ ತಿರುಗಾಟದಲ್ಲಿ ಬದಲಾವಣೆಗೆ ಒಳಗಾದವುಗಳು ಉಳಿಯುತ್ತದೆ ಮತ್ತು ಬೆಳೆಯುತ್ತದೆ. ಬದಲಾವಣೆಗೆ ಒಗ್ಗದವು ಅಳಿಯುತ್ತದೆ. ಇದು ಕಾಲದ ನಿಯಮ. ಪ್ರಕೃತಿಯ ಋತು ಚಕ್ರಕ್ಕೆ ತಕ್ಕಂತೆ ಇಲ್ಲಿ ಪ್ರಾಣಿಗಳು, ಪಕ್ಷಿಗಳು ಮತ್ತು ಗಿಡಮರಗಳು ಹೊಂದಾಣಿಕೆಯನ್ನು ಮಾಡಿಕೊಂಡಿದೆ. "ಸ್ಥಾವರಕ್ಕೆ ಅಳಿವಿದೆ ಜಂಗಮಕ್ಕಲ್ಲ" ಎಂಬ ಮಾತು ಮಹತ್ವವಾದದ್ದು. ಮಾನವನ ಉಗಮದಿಂದ ಆತನು ಅಲೆಮಾರಿ ಜೀವನ ನಡೆಸುತ್ತಿದ್ದ ಎಂಬುದನ್ನು ಇತಿಹಾಸದಿಂದ ತಿಳಿಯುತ್ತೇವೆ. ಭಾರತದಲ್ಲಿ ಅನೇಕ ಬುಡಕಟ್ಟು ಜನಾಂಗದವರು ಕಂಡು ಬರುತ್ತಾರೆ. ಇಲ್ಲಿ ಅನೇಕರು ಆಧುನಿಕರಣಕ್ಕೆ ಒಳಗಾಗಿ ಬದಲಾವಣೆಯಾಗಿದ್ದಾರೆ. ಇವರನ್ನು ಪರಿಶಿಷ್ಟ ವರ್ಗ ಎಂದು ಸಂವಿಧಾನದಲ್ಲಿಯೆ ಘೋಷಿಸಲಾಗಿದೆ. ಬುಡಕಟ್ಟು ಜನಾಂಗದ ಗುಣಲಕ್ಷಣಗಳನ್ನು ಹೊಂದಿರುವ ಮತ್ತು ಪರಿಶಿಷ್ಟ ವರ್ಗಕ್ಕೆ ಸೇರದ ಸಮುದಾಯವೇ ಕುಡುಬಿ ಸಮುದಾಯ.

ಅಧ್ಯಯನ ಪ್ರದೇಶದ ಕುರಿತು: ಮಂಗಳೂರು ನಗರವು ಕರ್ನಾಟಕದಲ್ಲಿ ಪ್ರಮುಖ ಸ್ಥಳವಾಗಿದ್ದು ಪಶ್ಚಿಮ ಕರಾವಳಿಯಲ್ಲಿ ನೆಲೆ ನಿಂತಿದೆ. ಮಂಗಳೂರು ತಾಲೂಕು ದಕ್ಷಿಣಕನ್ನಡ ಜಿಲ್ಲೆಯ ಕೇಂದ್ರ ಸ್ಥಳವಾಗಿದೆ. ಇಲ್ಲಿ ಜಿಲ್ಲಾಧಿಕಾರಿ ಕಛೇರಿ, ಪೋಲಿಸ್ ವರಿಷ್ಠಾಧಿಕಾರಿಗಳ ಕಛೇರಿ ಮತ್ತು ಪ್ರಮುಖ ಸರಕಾರಿ ಆಸ್ಪತ್ರೆಗಳನ್ನು ಹೊಂದಿದೆ. ಮಂಗಳೂರು ನಗರವು $12-52^{o}$ ಉ ಅಕ್ಷಾಂಶ ಮತ್ತು $74^{o}-49^{o}$ ಪೂ ರೇಖಾಂಶಗಳ ನಡುವಿದೆ. ಈ ಪ್ರದೇಶವು ನೇತ್ರಾವತಿ ಮತ್ತು ಗುರುಪುರ ನದಿಗಳ ಸಂಗಮ ಸ್ಥಳವಾಗಿದೆ. ಪೂರ್ವದಲ್ಲಿ ಪಶ್ಚಿಮ ಘಟ್ಟ ಪ್ರದೇಶ ಮತ್ತು ಪಶ್ಚಿಮದಲ್ಲಿ ಅರಬ್ಬಿ ಸಮುದ್ರದಿಂದ ಅವೃತವಾಗಿದೆ.

ಸ್ಥಳ ನಾಮದ ಕುರಿತು: ಮಂಗಳೂರು ಎಂಬ ಹೆಸರು ಬರಲು ಪ್ರಮುಖ ಕಾರಣ ಮಂಗಳಾದೇವಿ ದೇವಸ್ಥಾನ ಎಂಬ ವಾದವಿದೆ. (ಮಂಗಳಾಂಭಿಕೆ
ನೆಲೆ ನಿಂತ ಸ್ಥಳ ಮಂಗಳೂರು). ಸ್ಥಳೀಯವಾಗಿ ಈ ಪ್ರದೇಶದಲ್ಲಿ ಬಹುಸಂಖ್ಯಾತರಾಗಿರುವ ತುಳುವರು ಈ ಪ್ರದೇಶವನ್ನು ಕುಡ್ಲ ಎಂದು ಕರೆಯುತ್ತಾರೆ. ಅದರ ಅರ್ಥ ಕೂಡುವ (ಸಂಧಿಸುವ) ಸ್ಥಳ ಎಂದು ಇದು ನೇತ್ರಾವತಿ ಮತ್ತು ಗುರುಪುರ ನದಿಗಳು ಸೇರುವ ಪ್ರದೇಶವಾಗಿದೆ. ಇಲ್ಲಿಯೆ ಅವು ಅರಬ್ಬಿ ಸಮುದ್ರವನ್ನು ಸೇರುತ್ತದೆ. ಅದೇ ರೀತಿ ಕೊಂಕಣಿಯಲ್ಲಿ ಕೋಡ್ಯಾಲ್ ಎಂದೂ, ಮುಸ್ಲಿಮರು ಮೈಕಲ್ ಎಂದೂ ಕರೆಯುತ್ತಾರೆ. ನೆರೆಯ ಕೇರಳಿಗರು ಈಗಲೂ ಈ ಪ್ರದೇಶವನ್ನು ಮಂಗಳಾಪುರಂ ಎಂದೇ ಕರೆಯುತ್ತಾರೆ. "ಮಂಗಳ" ಎಂದರೆ ಕೋಟೆ ಎಂದೂ ಪುರ ಎಂದರೆ ನಗರ ಎಂದೂ ಅರ್ಥ.

ಪುರಾಣಗಳ ಪ್ರಕಾರ ಈ ಪ್ರದೇಶವು ಆರಂಭದಲ್ಲಿ ಸಮುದ್ರದ ನೀರಿನಿಂದ ಅವೃತವಾಗಿದ್ದು ನಂತರ ಪರಶುರಾಮರ ಕೃಪೆಯಿಂದ ಸಾಗರ ಸರಿದು ಭೂ ಪ್ರದೇಶವು ಸೃಷ್ಠಿಯಾಯಿತು ಎಂದು ಹೇಳುತ್ತದೆ. ಇನ್ನೊಂದು ವಾದದ ಪ್ರಕಾರ ಈ ಪ್ರದೇಶವು ದಟ್ಟವಾದ ಅಭಯಾರಣ್ಯವಾಗಿತ್ತು. ಪಶ್ಚಿಮ

ಘಟ್ಟ ಪ್ರದೇಶದಿಂದ ವಲಸೆ ಬಂದ ಜನರು ಕಾಡು ಕಡಿದು ಕೃಷಿಭೂಮಿಯಾಗಿಸಿ ಇಲ್ಲಿಯೇ ನೆಲೆ ನಿಂತರು ಎಂದು ಹೇಳಲಾಗುತ್ತದೆ.

ಆಧುನಿಕವಾಗಿ ಮಂಗಳೂರು ಮೂರು ರಾಷ್ಟ್ರೀಯ ಹೆದ್ದಾರಿಗಳು ಅಂದರೆ ಪನ್ವೇಲ್ ಮತ್ತು ಕನ್ಯಾಕುಮಾರಿಯನ್ನು ಕೂಡಿಸುವ ಎನ್-ಎಚ್-17 ಮಂಗಳೂರು-ಬೆಂಗಳೂರು ಕೂಡಿಸುವ ಎನ್-ಎಚ್-48 ಮತ್ತು ಮಂಗಳೂರು-ಸೋಲಾಪುರ್ ಕೂಡಿಸುವ ಎನ್-ಎಚ್-13 ಈ ನಗರದ ಮೂಲಕ ಹಾದು ಹೋಗುತ್ತದೆ. ಮಂಗಳೂರು, ಬೆಂಗಳೂರು ಮಧ್ಯ ಪ್ರಾಚ್ಯ ರಾಷ್ಟ್ರಗಳನ್ನು ಸೇರಿಸುವ ಅಂತರಾಷ್ಟ್ರೀಯ ವಿಮಾನ ನಿಲ್ದಾಣವು ನಗರದ ಬಜ್ಪೆ ಕೆಂಜಾರಿನಲ್ಲಿದೆ.

ಐತಿಹಾಸಿಕ ಹಿನ್ನಲೆಯನ್ನು ನೋಡುವುದಾದರೆ ಅಳಪರ ವಿಜಯನಗರ ಸಾಮ್ರಾಜ್ಯ, ಕೆಳದಿಯ ನಾಯಕರು, ಬಂಗರು, ಪೋರ್ಚುಗೀಸರು, ಹೈದರಾಲಿ ಮತ್ತು ಟಿಪ್ಪು ಸುಲ್ತಾನ್ ಹಾಗೂ ಬ್ರಿಟಿಷರು 1947ರ ವರೆಗೆ ಮಂಗಳೂರು ನಗರವನ್ನು ತಮ್ಮ ಕೇಂದ್ರವನ್ನಾಗಿ ಆಳಿದ್ದಾರೆ. ಈ ಪ್ರದೇಶದಲ್ಲಿ ಮಹಾತ್ಮಾಗಾಂಧಿಜೀ ರವೀಂದ್ರನಾಥ ಟಾಗೂರ್ ರಂಥಹ ಮಹಾನ್ ವ್ಯಕ್ತಿಗಳ ಹೆಜ್ಜೆಗುರುತುಗಳಿವೆ. ಎಲ್ಲಾ ಧರ್ಮಕ್ಕೆ ಸೇರಿದ ಪವಿತ್ರ ಸ್ಥಳಗಳು ಇಲ್ಲಿವೆ.

ಬುಡಕಟ್ಟು ಪರಿಕಲ್ಪನೆ:

ಕುಡುಬಿಯರ ಬಗ್ಗೆ ಈ ಹಿಂದೆ ನಡೆದ ಎಲ್ಲಾ ಗ್ರಂಥಗಳಲ್ಲಿ ಬುಡಕಟ್ಟು ಜನಾಂಗದ ನೆಲೆಯಲ್ಲಿ ಅಧ್ಯಾಯನ ನಡೆಸಲಾಗಿದೆ. ನಾಗರಿಕ ಸಮಾಜಗಳಿಂದ ದೂರವಾಗಿ ತಮ್ಮನ್ನು ಇರಿಸಿಕೊಂಡು ಅವರಿಗಿಂತ ಪ್ರತ್ಯೇಕವಾದ ಜೀವನ ಕ್ರಮವನ್ನು ರೂಪಿಸಿಕೊಂಡು ತಮ್ಮ ವಿಶಿಷ್ಟವಾದ ಸಾಂಸ್ಕೃತಿಕ ಮೌಲ್ಯಗಳನ್ನು ಇಂದಿನವರೆಗೂ ಜೀವಂತವಾಗಿ ಉಳಿಸಿಕೊಂಡು ಬಂದಿರುವ ಒಂದು ಗುಂಪಿನ ಅಥವಾ ಸಮುದಾಯದ ಜನರನ್ನು ಬುಡಕಟ್ಟು ಎಂದು ಸಾಮಾನ್ಯವಾಗಿ ಗುರುತಿಸಲಾಗುತ್ತದೆ. ಈ ಬುಡಕಟ್ಟು ಜನರಲ್ಲಿ ಪ್ರತ್ಯೇಕ ಭಾಷೆ, ಆಚಾರ, ವಿಚಾರ, ದೈವ, ಮೂಲ ಪುರುಷ, ಸಂಪ್ರದಾಯ, ನಂಬಿಕೆ, ಉಡುಗೆ-ತೊಡುಗೆ, ಹಾಡು, ಆಟ-ಮಾಡು, ವಿಧಿ-ನಿಷೇಧ, ಮಾಟ-ಮಂತ್ರ ಸಾಮಾಜಿಕ ಕಟ್ಟುಪಾಡುಗಳಿಂದು ನಾಗರಿಕ ಸಮಾಜಕ್ಕೆ ವಿನೂತನವಾಗಿ ಕಂಡು ಬರುವವರು ಇವರು ಬುಡಕಟ್ಟು ಎಂಬ ಪದವನ್ನು ಇಂಗ್ಲೀಷಿನ 'TRIBE' ಎಂಬ ಪದಕ್ಕೆ ಸಮಾನವಾಗಿ ಬಳಸಲಾಗುತ್ತದೆ. ಈ ಪದದ ಬಗ್ಗೆ ತಿಳಿಯಲು ಕೆಲವೊಂದು ವ್ಯಾಖ್ಯೆಗಳ ಮೂಲಕ ತಿಳಿಯೋಣ.

"ನಾಡಿನ ಕಾನೂನಿಗಿಂತ ಭಿನ್ನವಾದ ಸಾಂಪ್ರದಾಯಗಳನ್ನು ಇಂದಿಗೂ ಪರಿಪಾಲಿಸಿಕೊಂಡು ಬರುತ್ತಿರುವ ಜನರನ್ನು ಸೂಚಿಸಲು ಬಳಸಲಾಗುತ್ತಿರುವ ಪದ"

ಅಮೆರಿಕಾದ ವಿಶ್ವಕೋಶ

1952 ಪರಿಶಿಷ್ಟ ಜಾತಿ ಮತ್ತು ಬುಡಕಟ್ಟುಗಳ ಅಯೋಗವು ಬುಡಕಟ್ಟುಗಳ 8 ಲಕ್ಷಣಗಳನ್ನು ಈ ರೀತಿ ಪಟ್ಟಿ ಮಾಡಿವೆ.

1. ನಾಗರಿಕ ಸಮುದಾಯದಿಂದ ದೂರವಿದ್ದು ಕಾಡು ಮತ್ತು ಬೆಟ್ಟಗಳಲ್ಲಿ ಬದುಕುವವರು.
2. ಬೀಗ್ರೋಯಿಡ್, ಅಸ್ಟ್ರೋಯಿಡ್ ಮತ್ತು ಮಂಗೋಲಾಯಿಡ್ ಈ ಮೂರು ಜನಾಂಗಗಳಲ್ಲಿ ಯಾವುದಾದರೂ ಒಂದಕ್ಕೆ ಸೇರಿರಬೇಕು.
3. ಪ್ರತ್ಯೇಕವಾದ ಬುಡಕಟ್ಟು ಭಾಷೆಯನ್ನು ಒಳಗೊಂಡಿರಬೇಕು.
4. ಪಿತೃಪೂಜೆ, ದೈವಗಳ ಆರಾಧನೆಯನ್ನು ಮಾಡುವ ಪ್ರಾಚೀನ ಧಾರ್ಮಿಕ ಆಚರಣೆಗಳನ್ನು ಹೊಂದಿರಬೇಕು.
5. ಪ್ರಾಚೀನ ವೃತ್ತಿಗಳಾದ ಬೇಟೆ, ಬೇಸಾಯ ಮತ್ತು ಕಾಡು ಉತ್ಪನ್ನಗಳ ಸಂಗ್ರಹ ಕಾರ್ಯ ಮಾಡುತ್ತಿರಬೇಕು.
6. ಬುಡಕಟ್ಟುಗಳು ಮಾಂಸ ಮತ್ತು ನರಮಾಂಸ ಭಕ್ಷಣೆಯನ್ನು ಮಾಡುತ್ತಾರೆ.
7. ಬುಡಕಟ್ಟುಗಳು ಸಾಮಾನ್ಯವಾಗಿ ನಗ್ನ ಅಥವಾ ಅರೆ ನಗ್ನ, ಮರದ ತೊಗಟೆ, ಎಲೆಗಳನ್ನು ಬಟ್ಟೆಯಾಗಿ ಬಳಸುತ್ತಾರೆ.
8. ವಲಸೆ ಸಂಸ್ಕೃತಿಯನ್ನು ಹೊಂದಿದ್ದು, ಕುಡಿತ ಮತ್ತು ಕುಣಿತಗಳಲ್ಲಿ ವಿಶೇಷ ಆಸಕ್ತಿಯನ್ನು ತಳೆಯುತ್ತಾರೆ.

ಬುಡಕಟ್ಟು ಎಂಬ ಪದವನ್ನು ಅದರ ಸ್ವರೂಪದ ಬಗ್ಗೆ ಸ್ಪಷ್ಟವಾಗಿ ವಿವರಿಸಲ್ಲದಿದ್ದರೂ ಸಂವಿಧಾನದ 342ನೇ ವಿಧಿಯಡಿ ರಾಷ್ಟ್ರಪತಿಗಳು ರಾಜ್ಯಪಾಲರ ಸಮ್ಮತಿಯನ್ನು ಪಡೆದು ಬುಡಕಟ್ಟು ಲಕ್ಷಣವುಳ್ಳ ಯಾವುದೇ ಒಂದು ಸಮುದಾಯವನ್ನು ಪರಿಶಿಷ್ಟ ಬುಡಕಟ್ಟು ಪಟ್ಟಿಯಲ್ಲಿ ಸೇರಿಸುವ ಅಥವಾ ಅ ಪಟ್ಟಿಯಿಂದ ತೆಗೆದು ಹಾಕುವ ಅಧಿಕಾರವನ್ನು ಪಡೆದಿದ್ದಾರೆ. 2007ರ ಡಿಸೆಂಬರ್ ಅಂತ್ಯದವರೆಗೆ 700 ಬುಡಕಟ್ಟು ಸಮುದಾಯಗಳನ್ನು ಪರಿಶಿಷ್ಟ ಬುಡಕಟ್ಟುಗಳ ಪಟ್ಟಿಯಲ್ಲಿ ಸೇರಿಸಿದ್ದು ಅದರಲ್ಲಿ ಕರ್ನಾಟಕದ 50 ಸಮುದಾಯಗಳು ಈ ಪಟ್ಟಿಯಲ್ಲಿ ಸೇರಿವೆ. 1991 ರವರ ಜನಗಣತಿಯ ಪ್ರಕಾರ ಕರ್ನಾಟಕದ ಪರಿಶಿಷ್ಟ ಬುಡಕಟ್ಟುಗಳ ಜನಸಂಖ್ಯೆಯ 19,15,691 ರಷ್ಟಿದ್ದು ಒಟ್ಟು ಜನ ಸಂಖ್ಯೆಯ 4.6 ರಷ್ಟಿತ್ತು. 2001ರ ಜನಗಣತಿಯ ಪ್ರಕಾರ 34,63,956ರಷ್ಟಿದ್ದು ಒಟ್ಟು ಜನ ಸಂಖ್ಯೆಯ ಶೇ. 6.55ರಷ್ಟಾಯಿತು. ಈ ಪಟ್ಟಿಗೆ ಮತ್ತು ಬೇಡ, ಬೇಡರ್, ವಾಲ್ಮೀಕಿ ಪದಗಳನ್ನು ಸೇರಿಸಲಾಗಿದೆ.

ಭಾರತದಲ್ಲಿ ಸುಮಾರು 700 ಪರಿಶಿಷ್ಟ ಬುಡಕಟ್ಟು ಸಮುದಾಯಗಳಿದ್ದು ಒಟ್ಟು ಜನಸಂಖ್ಯೆಯ ಶೇ. 8 ರಷ್ಟು ಬುಡಕಟ್ಟು ಜನರಿದ್ದಾರೆ. ಅತ್ಯಂತ ಹಿಂದುಳಿದಿರುವ 75 ಸಮುದಾಯಗಳನ್ನು ಮೂಲನಿವಾಸಿ ಬುಡಕಟ್ಟುಗಳೆಂದು ಭಾರತ ಸರಕಾರವು ಗುರ್ತಿಸಿದೆ. ಭಾರತದಲ್ಲಿ ಪ್ರಮುಖ ಬುಡಕಟ್ಟು ಸಮುದಾಯಗಳು ಈ ಕೆಳಗಿನಂತಿವೆ.

1. ಹಲಸರು
2. ಸಿದ್ಧಿಯರು
3. ಗೌಳಿಗರು
4. ಗೊಂಡರು
5. ಕೊರಗರು
6. ಸೋಲಿಗರು
7. ಹಾಲಕ್ಕಿ ಒಕ್ಕಲಿಗರು
8. ಕರೆ ಒಕ್ಕಲರು
9. ಗಾಮೊಕ್ಕಲು
10. ಮುಕ್ರಿಯರು
11. ಗೌಡಲು
12. ಮಲೆಕುಡಿಯರು
13. ಯರವರು
14. ಮನ್ಸರು
15. ಫಣಿಯರು
16. ಜೇನು ಕುರುಬರು
17. ಕಾಡು ಕುರುಬರು
18. ಮ್ಯಾಸಬೇಡರು
19. ಕಾಡುಗೊಲ್ಲರು

ಅನೇಕ ತಲೆಮಾರುಗಳಿಂದ ತಮ್ಮದೇ ಆದ ಸಂಸ್ಕೃತಿ, ಆಚಾರ-ವಿಚಾರ ನಂಬಿಕೆಗಳನ್ನು ರೂಢಿಸಿಕೊಂಡಿರುವ ಬುಡಕಟ್ಟು ಸಮುದಾಯಗಳು ಹೊರ ಸಮಾಜದ ಸಂಸ್ಕೃತಿಯ ಒತ್ತಡಕ್ಕೆ ಒಳಗಾಗಿ ತಮ್ಮ ಸ್ವಂತಿಕೆಯನ್ನು ಕಳೆದುಕೊಳ್ಳುತ್ತಾ ಅದರಲ್ಲಿಯೇ ವಿಲೀನವಾಗುತ್ತಿರುವುದು ಲಕ್ಷಣಗಳು ಕಂಡು ಬರುತ್ತಿವೆ. ಬುಡಕಟ್ಟುಗಳ ಮೂಲ ನೆಲೆ ಕಾಡು. ಅವರ ಮೂಲ ವೃತ್ತಿ ಬೇಟೆ. ಸ್ವಾತಂತ್ರ್ಯ ನಂತರ ಈ ಬುಡಕಟ್ಟು ಸಮುದಾಯವನ್ನು ಅಭಿವೃದ್ಧಿಯ ಹೆಸರಿನಲ್ಲಿ ಮೂಲ ನೆಲೆಯಿಂದ ಹೊರ ಹಾಕಲಾಗಿದೆ. ಈ ಪರಿಸ್ಥಿತಿಯಲ್ಲಿ ಅನೇಕ ಬುಡಕಟ್ಟುಗಳು ತಮ್ಮ ಮೂಲ ವೃತ್ತಿಯನ್ನು ತೊರೆದು ಒಗ್ಗದ ಆಧುನಿಕರಣದ ಮಾಯೆಗೆ ಸಿಲುಕಿಕೊಳ್ಳುತ್ತಿದ್ದಾರೆ. ಪ್ರಸ್ತುತ ಈ ಅಧ್ಯಾಯನದಲ್ಲಿ ಕುಡುಬಿಯರ ಬಗ್ಗೆ ಅವರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳ ಬಗ್ಗೆ ಸತ್ಯದ ಹುಡುಕಾಟ ಮಾಡುವ ಪ್ರಯತ್ನ ಮಾಡಲಾಗಿದೆ.

ಕರ್ನಾಟಕದ ಹಿಂದುಳಿದ ಜಾತಿಗಳ ಆಯೋಗಗಳು:

ಕುಡುಬಿ ಸಮುದಾಯವನ್ನು ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಸೇರಿಸಲಾಗಿದೆ. ಈ ಹಿನ್ನಲೆಯಲ್ಲಿ ಕರ್ನಾಟಕದಲ್ಲಿ ರಚನೆಯಾದ ಹಿಂದುಳಿದ ಜಾತಿಗಳ ಆಯೋಗಗಳು ಮತ್ತು ಅವರ ವರದಿಯ ಪ್ರಮುಖ ಅಂಶಗಳ ಬಗ್ಗೆ ವಿವರಿಸುವ ಸಣ್ಣ ಪ್ರಯತ್ನವಾಗಿದೆ. ಸಂವಿಧಾನದ 340ನೇ ವಿಧಿಯ ಅನುಷ್ಠಾನಕ್ಕಾಗಿ ಕೇಂದ್ರ ಸರ್ಕಾರ ಆಯೋಜಿಸಿದ ಕಾಕಲಾಲೇಲ್ಕರ್ ಸಮಿತಿಯು ಜಾತಿಯ ಆಧಾರದ ಮೇಲೆ ಹಿಂದುಳಿದ ಜಾತಿಗಳಿಗೆ ಪ್ರಾತಿನಿಧ್ಯ ನೀಡುವುದನ್ನು ನಿರಾಕರಿಸಿತು. ಆದರೆ ಕೇಂದ್ರ ಸರಕಾರ ಭಾರತದ ಒಕ್ಕೂಟದ ಎಲ್ಲಾ ರಾಜ್ಯಗಳಿಗೂ ಒಂದು ಆದೇಶವನ್ನು ಹೊರಡಿಸಿತ್ತು. ಈ ಆದೇಶದ ಪ್ರಕಾರ ರಾಜ್ಯ ಸರ್ಕಾರಗಳು ತಮ್ಮ ರಾಜ್ಯಗಳ ವ್ಯಾಪ್ತಿಯಲ್ಲಿ ಹಿಂದುಳಿದ ಜಾತಿಗಳಿಗೆ ಆಯೋಗವನ್ನು ರಚಿಸುವುದು ಮತ್ತು ತಮ್ಮ ರಾಜ್ಯಗಳ ಶೋಷಿತ ಸಮುದಾಯಗಳಿಗೆ ಸೂಕ್ತವಾದ ಮೀಸಲಾತಿ ಜಾರಿಗೊಳಿಸಿಕೊಳ್ಳಲು ಅಧಿಕಾರ ನೀಡಿತು. ಈ ಆದೇಶದಂತೆ ಕರ್ನಾಟಕ ರಾಜ್ಯದಲ್ಲಿ ರಚನೆಯಾದ ಅಯೋಗಗಳು ಮತ್ತು ಅದರ ಕಾರ್ಯಗಳ ಕೆಳಗಿನಂತಿವೆ.

ನಾಗನ ಗೌಡ ಸಮಿತಿ:

1960ರಲ್ಲಿ ಮೈಸೂರು ಸರ್ಕಾರವು ಮೈಸೂರು ರಾಜ್ಯದಲ್ಲಿ ಹಿಂದುಳಿದ ಜಾತಿಗಳಿಗೆ ಶಿಕ್ಷಣ ಮತ್ತು ಸರ್ಕಾರಿ ಸೇವೆಗಳಲ್ಲಿ ಮಿಸಲಾತಿ ನೀಡುವ ಸಲುವಾಗಿ ನಾಗನ ಗೌಡ ಮುಖಂಡತ್ವದಲ್ಲಿ ಸಮಿತಿಯೊಂದು ರಚನೆಯಾಯಿತು. ಈ ಸಮಿತಿ 1961ರಲ್ಲಿ ತನ್ನ ವರದಿಯನ್ನು ನೀಡಿತು. ಈ ಸಮಿತಿಯು ರಾಜ್ಯದಲ್ಲಿ ಒಟ್ಟು 214 ಜಾತಿಗಳನ್ನು ಹಿಂದುಳಿದ ಜಾತಿಗಳಾಗಿ ಗುರುತಿಸಿತು. ಅದರಲ್ಲಿ ಎರಡು ವಿಂಗಡನೆಯನ್ನು ಮಾಡಿತು.

1. ಹಿಂದುಳಿದ ಜಾತಿಗಳಲ್ಲಿ 19 ಜಾತಿಗಳನ್ನು ಹಿಂದುಳಿದ ಜಾತಿಗಳೆಂದು
2. 1305 ಜಾತಿಗಳನ್ನು ತೀರಾ ಹಿಂದುಳಿದ ಜಾತಿಗಳೆಂದು ವಿಂಗಡಿಸಿತು. ಲಿಂಗಾಯುತರನ್ನು ಒಟ್ಟು ಉಳಿದ ಒಕ್ಕಲಿಗರಿಂದ ಹಿಡಿದು ಇನ್ನುಳಿದ ಎಲ್ಲ ಜನಾಂಗವನ್ನು ಹಿಂದುಳಿದ ಜಾತಿಗಳ ಗುಂಪಿಗೆ ಸೇರಿಸಿತು.

ಈ ಸಮಿತಿಯು ಹಿಂದುಳಿದ ಜಾತಿಗಳಿಗೆ ನಿಗದಿ ಪಡಿಸಿದ ಮೀಸಲಾತಿಯು

ಪರಿಶಿಷ್ಟ ಜಾತಿಗಳು ಶೇ. 15

ಪರಿಶಿಷ್ಟ ಪಂಗಡದ ಜಾತಿಗಳು ಶೇ. 03

ಇತರ ಹಿಂದುಳಿದ ಜಾತಿಗಳಿಗೆ ಶೇ. 50

ಒಟ್ಟು ಶೇಕಡಾ 68 ಮೀಸಲಾತಿಗೆ ಶಿಫಾರಸ್ಸು ಮಾಡಿತು. ನ್ಯಾಯಾಲಯದಲ್ಲಿ ವಿಚಾನೆಗೆ ಬಂದು ಈ ಸಮಿತಿಯ ಸಲಹೆಯನ್ನು ಅಸಿಂಧುಗೊಳಿಸಿ, ಕೆಲವೊಂದು ನಿರ್ದೇಶನಗಳನ್ನು ಸರ್ಕಾರಕ್ಕೆ ನೀಡಿತು. ಈ ಸಲಹೆ ಮೇರೆಗೆ ಸರಕಾರವು ಇತರೆ ಅಂಶಗಳ ಜೊತೆಗೆ ವಾರ್ಷಿಕ 1200 ರೂಪಾಯಿಗಿಂತ ಕಡಿಮೆ

ಆದಾಯವನ್ನು ಆಧರಿಸಿ 1963ರಲ್ಲಿ ಆದೇಶವೊಂದನ್ನು ಹೊರಡಿಸಿತು. ಇಲ್ಲಿ ಶೇ 30ರಷ್ಟು ಮಾತು ಮಿಸಲಾತಿಯನ್ನು ನಿಗದಿಪಡಿಸಿತು. ಇದರಿಂದ ಮೀಸಲಾತಿ ಪ್ರಮಾಣ ಶೇ 68ರಿಂದ 48ಕ್ಕೆ ಇಳಿಯಿತು.

ಎಲ್.ಜಿ. ಹಾವನೂರ್ ಆಯೋಗ 1972.

1972ರ ವೇಳೆಗೆ ದೇಶದ ರಾಜಕಾರಣದಲ್ಲಿ ಮಹತ್ತರ ಬದಲಾವಣೆಗಳು ನಡೆಯಲಾರಂಭಿಸಿತ್ತು. ದೇಶದ ಸ್ಥಿತಿಗತಿಗಳನ್ನು ಅರಿತ ಅಂದಿನ ಪ್ರಧಾನಿ ಇಂದಿರಾಗಾಂಧಿಯವರು ಅನೇಕ ಜನಹಿತ ಕಾರ್ಯಕ್ರಮಗಳನ್ನು ರೂಪಿಸಿದರು. ಈ ಹಿನ್ನಲೆಯಲ್ಲಿ ಕರ್ನಾಟಕದಲ್ಲಿ ಜಮೀನ್ದಾರಿ ಜಾತಿಗಳನ್ನು ಹದ್ದು ಬಸ್ತಿನಲ್ಲಿಡುವ ಸಲುವಾಗಿ ಹೈಕಮಾಂಡ್‌ನ ಆದೇಶದಂತೆ ಡಿ. ದೇವರಾಜ ಅರಸುರವರು ಹಾವನೂರ್ ಆಯೋಗವನ್ನು ರಚಿಸಿದರು.

ಹಾವನೂರ ಆಯೋಗವು ಸಲ್ಲಿಸಬೇಕಾಗಿದ್ದ ವರದಿಯ ಪ್ರಮುಖ ಅಂಶಗಳು ಎಂದರೆ.

1. ಹಿಂದುಳಿದ ಜಾತಿಗಳನ್ನು ಯಾವ ಮಾನದಂಡದ ಆಧಾರದ ಮೇಲೆ ನಿರ್ಧರಿಸಬೇಕು.
2. ಹಿಂದುಳಿದ ವರ್ಗಗಳ ಪಟ್ಟಿ ತಯಾರಿಸುವುದು.
3. ಶೈಕ್ಷಣಿಕ ಮತ್ತು ಸರ್ಕಾರಿ ನೌಕರಿಯಲ್ಲಿ ನಿಗದಿಪಡಿಸಬೇಕಾದ ಮೀಸಲಾತಿ
4. ಹಿಂದುಳಿದಿರುವಿಕೆಯನ್ನು ಕೊನೆಗಾಣಿಸಲು ಕೈಗೊಳ್ಳಬೇಕಾದ ಯೋಜನೆಗಳ ವಿವರ

- ಹಾವನೂರ್ ಆಯೋಗದ ಮುಖ್ಯ ಅಂಶಗಳು.
- ಶೈಕ್ಷಣಿಕವಾಗಿ ಹಿಂದುಳಿದಿರುವಿಕೆ
- ಸಾಮಾಜಿಕವಾಗಿ ಹಿಂದುಳಿದಿರುವಿಕೆ
- ಔದ್ಯೋಗಿಕ ಹಿಂದುಳಿದಿರುವಿಕೆ

ವರ್ಗೀಕರಣ ಮತ್ತು ಶಿಫಾರಸ್ಸು

ಹಾವನೂರ್ ಆಯೋಗ ಹಿಂದುಳಿದ ಜಾತಿಗಳನ್ನು ಮೇಲಿನಂತೆ ನಿರ್ಧರಿಸಿ ಇದರಲ್ಲಿ 2 ಗುಂಪುಗಳಾಗಿ ವಿಂಗಡಿಸಿತು. ಇದರಲ್ಲಿ ಎಲ್ಲಾ ಹಿಂದುಳಿದ ಜಾತಿಗಳನ್ನು ಸೇರಿಸಲಾಯಿತು.

1. ಹಿಂದುಳಿದ ಸುಮುದಾಯಗಳು
2. ಹಿಂದುಳಿದ ಜಾತಿಗಳು
3. ಹಿಂದುಳಿದ ಬುಡಕಟ್ಟುಗಳು

ಮೀಸಲಾತಿ ವರ್ಗೀಕರಣ

ಕ್ರ.ಸಂ	ಜನಾಂಗ	ಜನಸಂಖ್ಯೆ	ಮೀಸಲಾತಿ
1	ಹಿಂದುಳಿದ ಸಮುದಾಯಗಳು	ಶೇ.22.05	ಶೇ.16
2	ಹಿಂದುಳಿದ ಜಾತಿಗಳು	ಶೇ.04.45	ಶೇ.10
3	ಹಿಂದುಳಿದ ಬುಡಕಟ್ಟುಗಳು	ಶೇ.08.00	ಶೇ.06
4	ಪರಿಶಿಷ್ಟ ಜಾತಿಗಳು		ಶೇ.15
5	ಪರಿಶಿಷ್ಟ ಬುಡಕಟ್ಟುಗಳು		ಶೇ.03

1975 ರಲಲಿ ಅಯೋಗವು ವರಧಿ ನೀಡಿದರೂ ಸರ್ಕಾರ ಇದನ್ನು ಅಂಗೀಕರಿಸಿದ್ದು 1977ರಲ್ಲಿ ಇಲ್ಲಿ ಅನೇಕ ಮಾರ್ಪಾಡುಗಳನ್ನು ಮಾದಲಾಯಿತು. ಮುಸ್ಲೀಂರನ್ನು ಹಿಂದುಳಿದ ಪಂಗಡಗಳಿಗೆ ವ್ಯಾಪ್ತಿಗೆ ಸೇರಿಸಲಾಯಿತು.

ಟಿ ವೆಂಕಟಸ್ವಾಮಿ ಆಯೋಗ:–

1983ರಲ್ಲಿ ಪ್ರಥಮ ಬಾರಿಗೆ ಕರ್ನಾಟಕದಲ್ಲಿ ಜನತಾ ಪಕ್ಷ ಅಧಿಕಾರಕ್ಕೆ ಬಂತು. ಕರ್ನಾಟಕದಲ್ಲಿ ನಾಗಗೌಡ ಸಮಿತಿಯು ಲಿಂಗಾಯುತ ಮತ್ತು ಒಕ್ಕಲಿಗ ಸಮುದಾಯವನ್ನು ಹಿಂದುಳಿದ ಜಾತಿಗಳ ಪಟ್ಟಿಯಿಂದ ಹೊರಗಿಟ್ಟರೆ ಹಾಮನೂರ್ ಆಯೋಗ ವೀರಶೈವ ಸಮುದಾಯವನ್ನು ಹಿಂದುಳಿದ ಜಾತಿಗಳ ಪಟ್ಟಿಯಿಂದ ಹೊರಗಿಟ್ಟಿತು. ಹಿಂದುಳಿದ ಜಾತಿಗಳ ಪಟ್ಟಿಗಳಲ್ಲಿ ಸೇರಲು ಎಲ್ಲಾ ಸಮುದಾಯಗಳಿಂದ ತಿವ್ರ ಒತ್ತಡ ಇದ್ದಿತು. ಆನತಆ ಸರ್ಕಾರ 1983ರಲ್ಲಿ ವೆಂಕಟ ಸ್ವಾಮಿಯವರು ನೇತೃತ್ವದಲ್ಲಿ ಹಿಂದುಳಿದ ಜಾತಿಗಳ ಆಯೋಗವನ್ನು ರಚಿಸಿತು. ಈ ಆಯೋಗವು 1986 ಮಾರ್ಚ್ ತಿಂಗಳಲ್ಲಿ ಸರ್ಕಾರಲ್ಲೆ ತನ್ನ ವರದಿಯನ್ನು ಸಲ್ಲಿಸಿತು.

ಸರ್ಕಾರವು ಈ ಆಯೋಗದ ಶಿಫಾರಸ್ಸನ್ನು ಬದಲಾವಣೆ ಮಾಡಿ ತನ್ನದೇ ಒಂದು ಹೊಸ ನೀತಿಯನ್ನು ಪ್ರಕಟಿಸಿತು.

ಓ. ಚೆನ್ನಪ್ಪರೆಡ್ಡಿ ಆಯೋಗ:–

ಸುಪ್ರಿಂ ಕೋರ್ಟಿನ ನಿವೃತ್ತ ನ್ಯಾಯಧಿಶರಾದ ಓ. ಚೆನ್ನಪ್ಪ ರೆಡ್ಡಿ ಯವರು ಮರ್ಗದರ್ಶನದಲ್ಲಿ ಹಿಂದುಳಿದ ವರ್ಗಗಳ ಆಯೋಗವೊಂದನ್ನು ರಚಿಸಲಾಯಿತು. ಇದು 1990ರಲ್ಲಿ ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿತು. ಕರ್ನಾಟಕ ಸರಕಾರವು ಸಂವಿದಆನದ 15/4 ಮತ್ತು 16/4 ವಿಧಿಗಳನ್ನು ಸಂವಿಧಾನತ್ಮಾಕವಾಗಿ ಮುಂದುವರೆಸಲು ಹಾಗೂ ಕೆಲವು ಹಿಂದುಳಿದ ಜಾತಿಗಳಿಗೆ ಮೀಸಲಾತಿ ಕಲ್ಪಿಸಲು ಅನುವಾಗುವಂತೆ ಹಲವು ಕ್ರಮಗಳನ್ನು ಕೈಗೊಂಡಿತು.

ಅವುಗಳೆಂದರೆ:–

1. ಹಿಂದುಳಿದ ಜಾತಿಗಳನ್ನು ಮೂರು ವರ್ಗಗಳಾಗಿ ವಿಂಗಡಿಸಿತು ಮೊದಲನೆ ವರ್ಗವನ್ನು ಪ್ರವರ್ಗ–1 ಎಂದು ಕರೆದು ಈ ವರ್ಗದಲ್ಲಿ ಅಗಮುಡಿ, ಅಂಬಾಲಕರ್ಮ, ಬಲವಂದಿ, ಬವಜಿ, ಬೆಸ್ತ, ಪರಿವಾರ, ದೇವದಾಸಿ, ಹಾವಾಡಿಗ, ಜೋಗಿ ಮುಂತಾದ ಜಾತಿಗಳನ್ನು ಒಳಗೊಂಡಿತು ಇವರ ಒಟ್ಟು ಸಂಖ್ಯೆ 52 ಇವರಿಗೆ ಮುಸಲಾತಿ ಪ್ರಮಾಣ ಶೇ 5 ರಷ್ಟು..
2. 2ನೇ ವರ್ಗದಲ್ಲಿ ಅಗಸ, ಮಡಿವಾಳ, ಬೇಡ ದೇವಾಂಗ, ಗೊಲ್ಲ, ಈಡಿಗ, ಕುರುಬ, ವಿಶ್ವಕರ್ಮ,ಮುಸ್ಲಂ, ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಂಡ ಪರಿಶಿಷ್ಟ ಜಾತಿ ಮತ್ತು ಬುಡಕಟ್ಟುಗಳು. ಮಿಸಲಾತಿ ಪ್ರಮಾಣ ಶೇ 28ರಷ್ಟು.
3. ಮೂರನೇ ವರ್ಗದಲ್ಲಿ ಕೃಷಿ ಕಾರ್ಮಿಕರು, ಕೆಲಸಗಾರರು, ಕೂಲಿಕಾರರು, ಚಾಲಕರು, ನಿರ್ವಾಹಕರು, ಕ್ಲೀನರುಗಳು, ಬಡಗಿಗಳು, ಕಾರ್ಖಾನೆಗಳ ನೌಕರರು ಮುಂತಾದ ಕಡಿಮೆ ಅದಾಯದ ಉದ್ಯೋಗದಲ್ಲಿರುವವರಿಗೆ 3ನೇ ಗುಂಪಿನಲ್ಲಿ ಸೇರಿಸಿ ಇವರಿಗೆ ಶೇ 5 ರಷ್ಟು ಮಿಸಲಾತಿ ಕುಡಬೇಕೆಂದಿತು.

ಚನ್ನಪ್ಪ ರೆಡ್ಡಿ ಆಯೋಗವು ಕೆಳಕಂಡವರಿಗೆ ಮಿಸಲಾತಿಯನ್ನು ವಿರೋದಿಸಿತ್ತು. ಅವುಗಳೆಂದರೆ.

1. ಉನ್ನತ ಹುದ್ದೆಯಲ್ಲಿರುವವರ ಮಕ್ಕಳಿಗೆ,
2. ವೈದ್ಯರು, ವಕೀಲರು, ಚಾರ್ಟರ್ಡ್ ಅಕೌಂಟೆಂಟ್, ಇನ್‌ಕಮ್ ಮತ್ತು ಇಂಜಿನಿಯರ್ ಇವರ ಮಕ್ಕಳು.
3. ಪದವಿದರ ತಂದೆ ತಾಯಿಗಳ ಮಕ್ಕಳು
4. ಆದಾಯ ತೆರಿಗೆ ಸಂದಾಯ ಮಾಡುವ ತಂದೆ ತಾಯಿಯರ ಮಕ್ಕಳು
5. ವ್ಯಾಪಾರ ತೆರಿಗೆ ಸಂದಾಯ ಮಾಡುವ ತಂದೆ ತಾಯಿಯರ ಮಕ್ಕಳು
6. ಎಂಟು ಹೆಕ್ಟರ್‌ಗಿಂತ ಹೆಚ್ಚು ಕೃಷಿ ಭೂಮಿಯನ್ನು ಹೊಂದಿರುವರ ಮಕ್ಕಳು

ಚೆನ್ನಪ್ಪ ರೆಡ್ಡಿಯವರ ವರದಿಯಂತೆ ಕರ್ನಾಟಕ ಸರ್ಕಾರವು ಮೀಸಲಾತಿಯನ್ನು ಜಾರಿಗೊಳಿಸಿತು ಆದರೆ ಸುಪ್ರಿಂಕೊರ್ಟು ಹಿಂದುಳಿದ ವರ್ಗ ಪರಿಶಿಷ್ಟ ಜಾತಿ ಮತ್ತು ಬುಡಕಟ್ಟುಗಳ ಒಟ್ಟು ಮಿಸಲಾತಿ ಒಟ್ಟಿ ಶೇ 50 ಇರಬೇಕು ಎಂದು ತೀರ್ಪಿತ್ತಿತ್ತು. ಇದಕ್ಕೆ ಅನುಗುಣವಾಗಿ ಮಿಸಲಾತಿ ಪ್ರಮಾಣ ನಿಗದಿ ಪಡಿಸಲಾಯಿತು

ಪ್ರವರ್ಗ	– 1	04%
ಪ್ರವರ್ಗ	– 2ಎ	15%
ಪ್ರವರ್ಗ	– 2ಬಿ	04%
ಪ್ರವರ್ಗ	– 3ಎ	05%
ಪ್ರವರ್ಗ	– 3ಬಿ	05%
ಪರಿಶಿಷ್ಟ ಜಾತಿ		15%
ಪರಿಶಿಷ್ಟ ಪಂಗಡ		03%
	ಒಟ್ಟು	50%

ಈ ರೀತಿಯಲ್ಲಿ ಕರ್ನಾಟಕದಲ್ಲಿ ಮಿಸಲಾತಿ ಪ್ರಮಾಣವಿದೆ.

(ಹಿಂದುಳಿದ ವರ್ಗಗಳಿಗೆ ಡಾ. ಬಿ. ಆರ್ ಅಂಬೇಡ್ಕರರ ಕೊಡುಗೆ – ಎಚ್.ಎಸ್. ಬೇನಾಳ: ಪ್ರಕಾಶಕರು ಸಹನಾ ಪ್ರಕಾಶನ, ಗುಲಬರ್ಗ, ವರ್ಷ: 2014)

ಅಧ್ಯಾಯ 1:2 ಸಮಸ್ಯೀಕರಣ:

ಯಾವುದೇ ಸಮುದಾಯವು ತನ್ನ ಮೂಲ ನೆಲೆಗಟ್ಟಿನಿಂದ ಕಾಲದ ಹೊಡೆತಕ್ಕೆ ಸಿಲುಕಿ, ಪರಿವರ್ತನೆಯನ್ನು ಹೊಂದಿರುತ್ತದೆ. ಈ ರೀತಿಯ ಪರಿವರ್ತನೆಯು ಅ ಸಮುದಾಯದ ಅವಶ್ಯಕತೆಯೂ ಆಗಿರುತ್ತದೆ. ಒಂದು ಸಮುದಾಯವು ಅನೇಕ ಕಾರಣಗಳಿಗೆ ತನ್ನ ಮೂಲ ನೆಲೆಯನ್ನು ಬಿಟ್ಟು ಮತ್ತೊಂದು ಪ್ರದೇಶಕ್ಕೆ ವಲಸೆ ಬಂದಾಗ ತನ್ನ ಮೂಲ ಸಂಸ್ಕೃತಿಯ ಜೊತೆಗೆ ಸ್ಥಳೀಯ ಸಂಸ್ಕೃತಿಯ ಪ್ರಭಾವಕ್ಕೆ ಒಳಗಾಗುವುದು ಸಾಮಾನ್ಯವಾಗಿದೆ. ಇದು ಸಹಜ ಕೊಡವಾಗಿದೆ. ಈ ರೀತಿಯಾಗಿ ವಲಸೆಯಾಗಿ ಮಂಗಳೂರು ತಾಲೂಕಿನಲ್ಲಿ ನೆಲೆಸಿರುವ ಅನೇಕ ಸಮುದಾಯದಲ್ಲಿ ಕುಡುಬಿಯರು ಒಬ್ಬರು.

ಕುಡುಬಿಯರ ಬಗ್ಗೆ ಅನೇಕ ಅಧ್ಯಯನಗಳು ನಡೆದಿವೆ. ಈ ಹಿಂದೆ ನಡೆದ ಕುಡುಬಿ ಸಮುದಾಯದ ಅಧ್ಯಯನದಲ್ಲಿ ಅವರ ಮೂಲ ನೆಲೆ, ಅಚರಣೆಗಳು ಆಹಾರ–ಉಡುಗೆ ತೊಡುಗೆಗಳ ಬಗ್ಗೆ ವಿಶ್ಲೇಷಣೆ ನಡೆದಿದೆ. ಆಧುನೀಕರಣ ಮತ್ತು ಶಿಕ್ಷಣದ ಪ್ರಭಾವದಿಂದಾಗಿ ಕುಡುಬಿಯರ ಮೇಲೆ ಉಂಟಾದ ಪ್ರಭಾವ ಅರಿಯಲು ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಕುಡುಬಿ ಸಮುದಾಯದ ಶಿಕ್ಷಣದ ಸಾಮಾನ್ಯ ಲಕ್ಷಣಗಳು.

1. ಕುಡುಬಿ ಸಮುದಾಯದಲ್ಲಿ ಪೋಷಕರಿಗೆ ಶಿಕ್ಷಣವಿರುವುದು ತೀರಾ ಕಡಿಮೆ.
2. ಕುಡುಬಿ ಸಮುದಾಯದಲ್ಲಿ ಸಮಾನ ಶಿಕ್ಷಣದ ಅವಕಾಶ ಕಡಿಮೆ.
3. ಈ ಸಮುದಾಯವು ಹೆಚ್ಚಾಗಿ ಗ್ರಾಮೀಣ ಪ್ರದೇಶದಲ್ಲಿ ವಾಸವಾಗಿದ್ದು ಶಿಕ್ಷಣದ ಮಹತ್ವ ಕಡಿಮೆ.
4. ತೀರಾ ಕಡಿಮೆ ಪ್ರಮಾಣದಲ್ಲಿ ಪದವಿ, ಸ್ನಾತಕೋತ್ತರ ವಿದ್ಯಾರ್ಥಿಗಳನ್ನು ಹೊಂದಿದ್ದಾರೆ.

5. ಕುಡುಬಿ ಸಮುದಾಯದಲ್ಲಿ ಶಾಲೆಯಿಂದ ಹೊರಗೆ ಉಳಿದ ಮಕ್ಕಳ ಪ್ರಮಾಣ ಅಧಿಕವಾಗಿದೆ.
6. ಈ ಸಮುದಾಯದಲ್ಲಿ ಶಿಕ್ಷಣ ಮತ್ತು ದೂರದೃಷ್ಟಿಯ ಕೊರತೆ ಇದೆ.
7. ಗಂಡು ಮಕ್ಕಳಿಗಿಂತ ಹೆಣ್ಣು ಮಕ್ಕಳ ಶಿಕ್ಷಣದ ಪ್ರಮಾಣ ಕಡಿಮೆ.
8. ಈ ಸಮುದಾಯ ಬೆರಳೆಣಿಕೆಯಷ್ಟು ಮಂದಿ ತಾಂತ್ರಿಕ ಮತ್ತು ಅದರಲ್ಲಿ ಉನ್ನತ ವ್ಯಾಸಾಂಗ ಮಾಡಿರುವರು ಸಿಗುತ್ತಾರೆ.
9. ಕುಡುಬಿ ಸಮುದಾಯದಲ್ಲಿ 10ನೇ ತರಗತಿಗಿಂತ ಮೊದಲೇ ಶಾಲೆ ಬಿಡುವವರ ಸಂಖ್ಯೆ (ವಿದ್ಯಾರ್ಥಿಗಳ ಸಂಖ್ಯೆ) ಅಧಿಕವಾಗಿದೆ.

ಅಧ್ಯಾಯ 1.3 ಅಧ್ಯಯನದ ಉದ್ದೇಶಗಳು

ಈ ಕೆಳಗಿನವುಗಳು ಪ್ರಸ್ತುತ ಸಂಶೋಧನೆಯ ನಿರ್ದಿಷ್ಟ ಉದ್ದೇಶಗಳು

1. ಕುಡುಬಿ ಸಮುದಾಯದ ಹಿನ್ನಲೆ, ಸಂಸ್ಕೃತಿ ಮತ್ತು ಆಚಾರ ವಿಚಾರಗಳ ವಾಸ್ತವಿಕತೆಯ ಬಗ್ಗೆ ತಿಳಿಯುವುದು.
2. ಕುಡುಬಿಯರ ಧಾರ್ಮಿಕ ಆಚರಣೆಗಳ ಬಗ್ಗೆ ಅಧ್ಯಯನ ನಡೆಸುವುದು.
3. ಕುಡುಬಿಯರ ಸಾಮಾಜಿಕ ಸ್ಥಿತಿಗತಿಗಳ ಬಗ್ಗೆ ಅಧ್ಯಯನ ಮಾಡುವುದು.
4. ಕುಡುಬಿ ಸಮುದಾಯದ ಆರ್ಥಿಕ ಸ್ಥಿತಿಗತಿಗಳ ಬಗ್ಗೆ ಅಧ್ಯಯನ ನಡೆಸುವುದು.
5. ಆಧುನೀಕರಣ ಮತ್ತು ಶಿಕ್ಷಣದ ಪ್ರಭಾವದಿಂದಾಗಿ ಕುಡುಬಿ ಸಮುದಾಯದಲ್ಲಿ ಉಂಟಾದ ಬದಲಾವಣೆಯನ್ನು ವಿಶ್ಲೇಷಿಸುವುದು.

ಅಧ್ಯಾಯ 1:4 ಅಧ್ಯಯನದ ವಿಧಾನ:

ಅಧ್ಯಾಯನದಲ್ಲಿ ಮಾಹಿತಿ ಸಂಗ್ರಹ ಪೂರ್ವದಲ್ಲಿ ವಿಷಯ ಆಯ್ಕೆಯನ್ನು ಮಾಡುವಾಗ ಮೂರು ಅಂಶಗಳನ್ನು ಗಮನದಲ್ಲಿಟ್ಟು ಆಯ್ಕೆ ಮಾಡಲಾಗಿದೆ. ಅದರಲ್ಲಿ ಪ್ರಮುಖವಾಗಿ ಕಾಲವಧಿ ಮತ್ತು ವಿಷಯದ ವ್ಯಾಪ್ತಿ ಮತ್ತು ಆರ್ಥಿಕ ಅಂಶಗಳು ಪ್ರಮುಖವಾದುವು.

ಮಾಹಿತಿ ಸಂಗ್ರಹಣೆಯ ಉದ್ದೇಶವನ್ನು ಮೊದಲು ನಿರ್ದಿಷ್ಟವಾಗಿಟ್ಟುಕೊಂಡು ಅದಕ್ಕೆ ಪೂರ್ವಕವಾಗಿ ಪ್ರಶ್ನಾವಳಿಯ ರಚನೆಯ ಮಾಡಿ ನಂತರ ಅಧ್ಯಯನ ಪ್ರದೇಶವನ್ನು ಗುರುತು ಮಾಡಲಾಯಿತು. ಪ್ರಸ್ತುತ ಈ ಅಧ್ಯಯನದಲ್ಲಿ ಕುಡುಬಿ ಸಮುದಾಯದ ಬಗ್ಗೆ ಅಧ್ಯಯನವಾದ್ದರಿಂದ ಗ್ರಾಮೀಣ ಪ್ರದೇಶವನ್ನು ಆಯ್ಕೆ ಮಾಡಲಾಗಿದೆ. ಅಧ್ಯಯನ ಕೈಗೊಂಡ ಪ್ರಮುಖ ಪ್ರದೇಶಗಳಾದ ಕುತಾರು ಪ್ರದೇಶ ಕೃಷ್ಣಕೂಡಿ, ಬೊಳ್ಮ ದೇರಳಕಟ್ಟೆಯ ಬಡಕಬೈಲ್-ಕಿರಿಚಾಡಿ ಪ್ರದೇಶ, ಎಡಪದವು ಪ್ರದೇಶ, ಮೂಚ್ಚೂರು ನಿಡ್ಡೋಡಿ ಪ್ರದೇಶ ಮತ್ತು ಕೊಂಪದವು ಪ್ರದೇಶದಲ್ಲಿ ಮಾಹಿತಿ ಸಂಗ್ರಹಿಸಲಾಗಿದೆ. ಮಾಹಿತಿ ಸಂಗ್ರಹಣೆಯನ್ನು ಈ ಕೆಳಗಿನಂತೆ ಮಾಡಲಾಯಿತು.

1) ಪ್ರಶ್ನಾವಳಿಯ ಸಹಾಯದಿಂದ ಮನೆ ಮನೆ ಭೇಟಿ ಮಾಡಿ ಮಾಹಿತಿ ಸಂಗ್ರಹಣೆ ಮಾಡಲಾಗಿದೆ.

2) ಗ್ರಾಮಾಂತರಚಾಯುಗಳಿಗೆ ಭೇಟಿ ನೀಡಿ ಅಗತ್ಯ ಮಾಹಿತಿಗಳ ಸಂಗ್ರಹಣೆ ಮಾಡಲಾಗಿದೆ.
3) ಸ್ಥಳೀಯ ಕುಡುಬಿ ಸಮುದಾಯದ ಪ್ರಮುಖರ ಸಂದರ್ಶನದ ಮೂಲಕ ಅಗತ್ಯ ಮಾಹಿತಿಗಳನ್ನು ಸಂಗ್ರಹಿಸಲಾಗಿದೆ.
4) ಲಭ್ಯ ಸಾಹಿತ್ಯ ಆಕರಗಳ ಅಧ್ಯಯನ
5) ಏಕ ವ್ಯಕ್ತಿಯ ಸಂದರ್ಶನ
6) ಚಾರಿತ್ರಿಕ ವಿಧಾನ:

ಚಾರಿತ್ರಿಕ ವಿಧಾನದಲ್ಲಿ ಕುಡುಬಿಯರ ಐತಿಹಾಸಿಕ ಪರಂಪರೆ, ಆಚರಣೆಯ ಬಗ್ಗೆ ಸಾಹಿತ್ಯ ಸಂಶೋಧನೆ ಗ್ರಂಥಗಳ ಮೂಲಕ ಪಡೆಯುವುದು ಮತ್ತು ಸಮುದಾಯದ ಅತೀ ಹಿರಿಯರಲ್ಲಿ ಐತಿಹಾಸಿಕ ಕಥೆಗಳ ಮೂಲಕ ತಿಳಿದುಕೊಳ್ಳವುದು.

ಅಧ್ಯಾಯ 1.5 ಅಧ್ಯಯನದ ಊಹೆಗಳು:

1. ಆಧುನಿಕರಣ ಪ್ರಭಾವದಿಂದಾಗಿ ಸಾಮಾಜಿಕ ಮತ್ತು ಧಾರ್ಮಿಕ ಕ್ಷೇತ್ರದಲ್ಲಿ ಕುಡುಬಿಯರಲ್ಲಿ ಅನೇಕ ಬದಲಾವಣೆಗಳಾಗಿವೆ.
2. ಕುಡುಬಿ ಸಮುದಾಯದಲ್ಲಿ ಹೆಚ್ಚಿನ ಸದಸ್ಯರಲ್ಲಿ ಶೈಕ್ಷಣಿಕ ಅರಿವು ಮೂಡಿದೆ.
3. ಕುಡುಬಿಯರಲ್ಲಿ ಆರ್ಥಿಕವಾಗಿಯೂ ಪ್ರಬಲರಾಗುತ್ತಿದ್ದಾರೆ.

ಅಧ್ಯಾಯ 1.6 ಅಧ್ಯಯನದ ಇತಿಮಿತಿಗಳು:

1. ಪುಸ್ತಕ ಕುಡುಬಿ ಸಮುದಾಯದ ಸಮಜೋ ಅರ್ಥಿಕ ಸ್ಥಿತಿಗಳ ಅಧ್ಯಯನವು ದಕ್ಷಿಣಕನ್ನಡ ಜಿಲ್ಲೆಯ ಮಂಗಳೂರು ತಾಲೂಕಿನಲ್ಲಿರುವ ಕುಡುಬಿ ಸಮುದಾಯಕ್ಕೆ ಅನ್ವಯವಾಗುವುದು ಮತ್ತು ಬೇರೆ ತಾಲೂಕುಗಳ ಕುಡುಬಿ ಸಮುದಾಯದ ಬಗ್ಗೆ ಮಾಹಿತಿ ನೀಡುವುದಿಲ್ಲ.
2. ಅಧ್ಯಯನದಲ್ಲಿ ಅಳವಡಿಸಿದ ನಮೂನೆಗಾತ್ರ ಚಿಕ್ಕದು ಆಗಿದ್ದು ಇದರಿಂದಾಗಿ ಅಧ್ಯಯನದ ವ್ಯಾಪ್ತಿಯನ್ನು ಮಿತಿಗೊಳಿಸಲಾಗಿದೆ. ಆದ್ದುದರಿಂದ ವಿಷಯದ ಸಮಗ್ರ ವಿಶ್ಲೇಷಣೆಗೆ ಅವಕಾಶವಿರುವುದಿಲ್ಲ.
3. ಪ್ರಸ್ತುತ ಅಧ್ಯಯನದಲ್ಲಿ ಕೊಡಿಯಾಲ್ ಕುಡುಬಿಯರ ಸಮುದಾಯ ಅಧ್ಯಯನಕ್ಕೆ ಸಿಮಿತವಾದುದರಿಂದ ಬೇರೆ ಕುಡುಬಿ ಪಂಗಡದವರನ್ನು ಅಧ್ಯಯನಕ್ಕೆ ಒಳಪಡಿಸಿಲ್ಲ.

ಅಧ್ಯಾಯ 1.7 ಅಧ್ಯಯನದ ರೂಪುರೇಷೆ:

ಒಂದನೇ ಅಧ್ಯಾಯನವು ಪೀಠಿಕೆ, ಸಮಸ್ಸಿಕರಣ, ಸಾಹಿತ್ಯ ಪರಾಮರ್ಶನ ಸಂಶೋಧನೆಯ ಉದ್ದೇಶಗಳು, ಅಧ್ಯಾಯನದ ವಿಧಾನ, ಅಧ್ಯಯನದ ಊಹೆಗಳು ಇತಿಮಿತಿಗಳನ್ನು ಒಳಗೊಂಡಿದೆ.

ಎರಡನೇಯ ಅಧ್ಯಾಯನವು ಕುಡುಬಿ ಸಮುದಾಯದ ಸಾಮಾಜಿಕ ಸ್ಥಿತಿಗಳ ಬಗ್ಗೆ ವಿವರಣೆ ನೀಡುತ್ತದೆ.

ಮೂರನೇಯ ಅಧ್ಯಾಯನವು ಕುಡುಬಿಯ ಆರ್ಥಿಕ ಸ್ಥಿತಿಗತಿಗಳ ಬಗ್ಗೆ ಮಾಹಿತಿಯನ್ನು ನೀಡುತ್ತದೆ.

ನಾಲ್ಕನೇಯ ಅಧ್ಯಯನವು ಕ್ಷೇತ್ರ ಕಾರ್ಯದ ಮಾಹಿತಿ ವಿಶ್ಲೇಷಣೆಯನ್ನು ನೀಡಲಾಗಿದೆ.

ಐದನೇ ಅಧ್ಯಾಯನದಲ್ಲಿ ಸಾರಾಂಶ, ಉಪಸಂಹಾರ ಮತ್ತು ಕೆಲವು ಸಲಹೆಗಳನ್ನು ನೀಡಲಾಗಿದೆ.

ಈ ಮೇಲಿನ ಅಧ್ಯಾಯನಗಳಲ್ಲದೆ ಕುಡುಬಿಯರ ಕುರಿತು ಅನುಬಂಧವನ್ನು ನೀಡಲಾಗಿದೆ. ಹಾಗೆಯೇ ಪ್ರಶ್ನಾವಳಿ, ಪದಕೋಶ, ಮತ್ತು ಅಕರಗ್ರಂಥಗಳ ಪಟ್ಟಿಯನ್ನು ನೀಡಲಾಗಿದೆ

ಅಧ್ಯಾಯ 1.8 ಗ್ರಂಥ ಪರಾಮರ್ಶೆ

ಕುಡುಬಿಯರ ಬಗ್ಗೆ ಕೆಲವು ಅಧ್ಯಾಯನಗಳ ನಡೆದಿವೆ. "Forest and Hill Tribes" ಎಂಬ ಅಧ್ಯಾಯನದಲ್ಲಿ ಕುಡುಬಿಯರ ಪರಿಚಯವನ್ನು ಮಾಡಿಕೊಡುತ್ತಾನೆ ನಂತರ ದಿನಗಳಲ್ಲಿ ಕೃಷ್ಣ ಅಯ್ಯರ್ (1928) ಅವರು ಕುಡುಬಿಯರ ಪ್ರಮುಖ ಅಂಶಗಳ ಬಗ್ಗೆ ಗಮನ ಸೆಳೆಯುತ್ತಾರೆ. ಇಲ್ಲಿ ಅವರ ಸಾಮಾಜಿಕ ಮತ್ತು ಧಾರ್ಮಿಕ ನಂಬಿಕೆಗಳ ಬಗ್ಗೆ ವಿವರಣೆ ನೀಡುತ್ತಾರೆ. ಈ ಹಿಂದೆ ನಡೆದ ಎಲ್ಲಾ ಅಧ್ಯಾಯನಗಳಲ್ಲಿಯೂ ಕುಡುಬಿಯರನ್ನು ಬುಡಕಟ್ಟು ನೆಲೆಗಟ್ಟಿನಲ್ಲಿ ಅಧ್ಯಾಯನ ನಡೆಸಲಾಗಿದೆ.

"ಕರ್ನಾಟಕ ಬುಡಕಟ್ಟುಗಳು" ಎಂಬ ಕೃತಿಯು ಪ್ರೊ.ಎಚ್.ಜೆ. ಲಕ್ಕಪ್ಪಗೌಡರವರ ಸಂಪಾದಕಿಯಲ್ಲಿ ಪ್ರಕಟಗೊಂಡಿದೆ. ಇಲ್ಲಿ ಬೇರೆ ಎಲ್ಲಾ ಬುಡಕಟ್ಟುಗಳ ಅಧ್ಯಾಯನದ ಜೊತೆಯಲ್ಲಿ ಕುಡುಬಿಯ ಅಧ್ಯಾಯನವು ನಡೆಯುತ್ತಾರೆ. ಇಲ್ಲಿ "ಕುಡುಬಿಯರ" ಎಂಬ ಅಧ್ಯಾಯನದಲ್ಲಿ ಡಾ|| ಅಭಯ್ ಕುಮಾರ್ ಕೌಕ್ರಾಡಿಯವರು ತಮ್ಮ ಅಧ್ಯಯನ ಪೂರ್ವದಲ್ಲಿ ನಡೆದ ಅಧ್ಯಾಯನಗಳ ಬಗ್ಗೆ ಈ ರೀತಿಯಾಗಿ ಪಟ್ಟಿ ಮಾಡುತ್ತಾರೆ. ಥರ್ಸ್ಟನ್ ರವರ ಕೃತಿ "Forest and Hill Tribes" ಇಲ್ಲಿನ ಪ್ರಮುಖ ಅಂಶಗಳು ಕುಡುಬಿಯರ ಬಗ್ಗೆ ಪರಿಚಯ ಮಾಡಿಕೊಡುತ್ತಾನೆ. ಕುಡುಬಿಯರನ್ನು ಬುಡಕಟ್ಟೆಂದು ಗುರುತಿಸಿ ಅವರಲ್ಲಿರುವ ಆಚರಣೆ ಕೆಲವು ಸಾಮಾಜಿಕ ಕಟ್ಟುಪಾಡುಗಳು ಮತ್ತು ವಿಧಿವಿಧಾನಗಳನ್ನು ಪರಿಚಯಿಸಿದ್ದಾನೆ. ಕೃಷ್ಣ, ಅಯ್ಯರ್ (1928) ಅವರು ಅರೆ ಕುಡುಬಿಯರ ಪರಿಚಯವನ್ನು ಮಾಡಿಕೊಡುತ್ತಾರೆ.

ಕರ್ನಾಟಕದ ಬುಡಕಟ್ಟುಗಳು ಈ ಕೃತಿಯಲ್ಲಿನ "ಕುಡುಬಿಯರು" ಎಂಬ ಹೆಸರಿನಲ್ಲಿ ಡಾ. ಅಭಯ್ ಕುಮಾರ್ ಕೌಕ್ರಾಡಿಯವರು ಕುಡುಬಿಯರ ಒಳ ಪಂಗಡಗಳನ್ನು ಈ ಕೆಳಗಿನಂತೆ ವಿಂಗಡಿಸಿದ್ದಾರೆ.

1. ಗೋವಾ ಕುಡುಬಿ
2. ಕೊಡಿಯಾಲ ಕುಡುಬಿ
3. ಅರೆ ಕುಡುಬಿ
4. ಜೋಗಿ ಕುಡುಬಿ
5. ನಾಡ ಕುಡುಬಿ
6. ಕಾಡ ಕುಡುಬಿ
7. ಕುಮ್ರಿ ಕುಡುಬಿ

ಅವರ ಪ್ರಕಾರ ಕುಡುಬಿಯರಲ್ಲಿ ಒಳ ಪಂಗಡವಿಲ್ಲ ಎಂದಿದ್ದಾರೆ. ಕುಡುಬಿಯರಲ್ಲಿ ಈ ಒಳ ಪಂಗಡಗಳು ಕುಡುಬಿಯರ ವೃತ್ತಿ, ಅವರು ವಾಸಿಸುವ ಪ್ರದೇಶ, ಆಧುನಿಕತೆಗೆ ತೆರೆದುಕಕೊಂಡ ರೀತಿ ಇವುಗಳ ಆಧಾರದಲ್ಲಿದೆ ಎಂದು ಅವರ ವಾದವಾಗಿದೆ. ಈ ಅಧ್ಯಯನದಲ್ಲಿ ಡಾ. ಅಭಯ್ ಕುಮಾರ್ ರವರು ಗೋವಾ ಕುಡುಬಿಯರ ಬಗ್ಗೆ ವಿಶ್ಲೇಷಣೆ ನೀಡಿದ್ದಾರೆ. ಮೇಲಿನ ವಿಂಗಡನೆಯಲ್ಲಿನ ಗೋವಾ ಕುಡುಬಿ, ಕಾಡು ಕುಡುಬಿ ಮತ್ತು ಕುಮ್ರಿ ಕುಡುಬಿಯರು ಒಂದೇ ಒಳಕರಿ ಪಂಗಡ ಎಂಬುವುದು ಅವರ ವಾದವಾಗಿದೆ.

ಈ ರೀತಿಯಾಗಿ ವಿಶ್ಲೇಷಣೆ ಮಾಡುತ್ತಾ ಲೇಖಕರು ಮುಂದುವರಿದು ಗೋವಾ ಕುಡುಬಿಯರು, ಕೊಡಿಯಾಲ ಕುಡುಬಿಯರು ಮತ್ತು ಜೋಗಿ ಕುಡುಬಿಯರು ಎಂದು ವರ್ಗೀಕರಿಸುತ್ತಾರೆ. ಲೇಖನದಲ್ಲಿ ಕುಡುಬಿಯರು ಮೂಲ ಗೋವಾದವರು ಎಂದು ಉಲ್ಲೇಖವಿದೆ. ಕುಡುಬಿಯರ ವಲಸೆಗೆ ಇಲ್ಲಿ ಎರಡು ರೀತಿಯ ಕಾರಣ ಸಿಗುತ್ತದೆ.

1. ಗೋವಾಕ್ಕೆ ಪೋರ್ಚುಗೀಸರ ಆಗಮನ ಮತ್ತು ಅವರ ದಬ್ಬಾಳಿಕೆ ಹಾಗೂ ಬಲವಂತದ ಮಂತಾಂತರಕ್ಕೆ ಬೇಸತ್ತು ಕುಡುಬಿಯರು ಗೋವಾವನ್ನು ಬಿಟ್ಟರು.
2. ಕುಡುಬಿಯರು ತಮ್ಮ ಮೂಲ ನೆಲೆಯಾದ ಗೋವಾದಲ್ಲಿ ಆಂಗ್ಲರು ಬಲತ್ಕಾರದಿಂದ ದನದ ಮಾಂಸವನ್ನು ತಿನಿಸುತ್ತಿದ್ದರು. ಅದಕ್ಕೆ ಹೆದರಿದ ಈ ಜನಾಂಗವು ವಲಸೆ ಹೊರಟಿತು. ಕುಡುಬಿಯರ ಒಳ ಪಂಗಡವು ಒಂದೇ ಪ್ರದೇಶದಿಂದ ಬಂದ ಕುಡುಬಿಯರು ಬಂದು ನೆಲೆಸಿದ ಪ್ರದೇಶಕ್ಕೆ ಅನುಸಾರವಾಗಿ ಉಂಟಾಗಿದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಕುಡುಬಿಯರ ಭಾಷೆಯನ್ನು ಇಂಡೋ ಆರ್ಯನ್ ಭಾಷಾ ಸಮುದಾಯಕ್ಕೆ ಸೇರುವ ಕೊಂಕಣಿ ಎಂದಿದ್ದಾರೆ.

ಗೋವಾ ಕುಡುಬಿಯರ ನೆಲೆಗಳು ಉಡುಪಿ ತಾಲೂಕು ಮತ್ತು ಕುಂದಾಪುರ ತಾಲೂಕಿನ ಹಲವು ಪ್ರದೇಶಗಳನ್ನು ಇಲ್ಲಿ ಗುರುತಿಸಲಾಗಿದೆ. ಕುಡುಬಿಯರ ವೇಷಭೂಷಣದ ಬಗ್ಗೆ ಗಂಡಸರು ಸೊಂಟಕ್ಕೆ ಒಂದು ತುಂಡು ಬಟ್ಟೆ, ತಲೆಗೆ ಅಡಿಕೆ ಹಾಳೆಯಿಂದ ಮಾಡಿದ ಮುಟ್ಟಾಳೆಯನ್ನು ಮಾತ್ರ ಧರಿಸುತ್ತಾರೆ. ಬಿಡುವಿನ ಸಮಯದಲ್ಲಿ ಬಿಳಿ ಪಂಚೆ ಅಥವಾ ಬಣ್ಣದ ಲುಂಗಿ ಮತ್ತು ಅಂಗಿ ತೊಡುತ್ತಾರೆ. ಕುಡುಬಿಯರಲ್ಲಿ ಜುಟ್ಟು ಸಾಮಾನ್ಯವಾಗಿತ್ತು ಅದನ್ನು ಕತ್ತರಿಸಿದರೆ ಜಾತಿಯ ಪಂಚಾಯತಿ ದಂಡ ವಿಧಿಸುತ್ತಿದ್ದರು. ಹೆಂಗಸರು ಭೂಮಿಯಲ್ಲಿ ದುಡಿಯುವವರು ಆದ್ದರಿಂದ ದುಡಿಮೆಗೆ ಅನುಕೂಲವಾದ ಬಟ್ಟೆ ಬರೆಗಳನ್ನೇ ಅವರು ತೊಡುತ್ತಿದ್ದರು. ಹೆಂಗಸರು ಸೀರೆಯನ್ನು ಎದೆಯ ಮಟ್ಟದವರೆಗೆ ಸುತ್ತಿ ಗೇಂಟಿ ಹಾಕುತ್ತಾರೆ ರವಿಕೆ ಧರಿಸುವ ಪದ್ಧತಿ ಇದರಲ್ಲಿ ಇರಲಿಲ್ಲ.

ಗೋವಾ ಕುಡುಬಿಯರ ಕಾಡಿನ ಮಧ್ಯ ವಾಸಮಾಡುತ್ತಿದ್ದರು. ಕೃಷಿ ಮೂಲ ಕಸುಬಾಗಿತ್ತು. ಕೃಷಿಗೆ ದಾಳಿ ಮಾಡುವ ಪ್ರಾಣಿಗಳನ್ನು ಕುಡುಬಿಯರು ಬೇಟೆಯಾಡುತ್ತಿದ್ದರು ಎಂದಿದ್ದಾರೆ. ಗೋವಾ ಕುಡುಬಿಯರ ಸಾಕು ಪ್ರಾಣಿಗಳನ್ನು ತಿನ್ನುವುದು ನಿಷೇಧವಾಗಿದೆ. ಗೋವಾ ಕುಡುಬಿಯರು ಹಾವು, ಕರಡಿ, ರಣಹದ್ದು, ಗರುಡ, ಮಂಗ, ಕಾಡುಬೆಕ್ಕು, ಇಲಿ, ಕಾಡುಕೋಣ, ನವಿಲು ಮತ್ತು ಗಿಳಿಯನ್ನು ತಿನ್ನುವುದಿಲ್ಲ. ನವಿಲು ತಮ್ಮ ಬೇಟೆಯ ಸಂದರ್ಭದಲ್ಲಿ ಆಕಸ್ಮಿಕವಾಗಿ ಸತ್ತರೆ ತಿನ್ನುತ್ತಿದ್ದರು ಆದರೆ ನವಿಲಿನ ಬೇಟೆ ನಿಷೇಧವಾಗಿದೆ.

ಗೋವಾ ಕುಡುಬಿಯರ ಮನೆಯ ರಚನೆಯ ಬಗ್ಗೆ

1. ಸಂರಕ್ಷಣೆ 2. ಗೌಪ್ಯತೆ ಕಾಪಾಡುವುದು
3. ಕುಟುಂಬದ ನಿಯಂತ್ರಣ ಮತ್ತು ಏಕತೆಯನ್ನು ಕಾಪಾಡುವುದು
4. ಕುಟುಂಬದ ವಿಘಟನೆಯನ್ನು ತಪ್ಪಿಸುವುದು
5. ಧಾರ್ಮಿಕ ಪಾವಿತ್ರ್ಯತೆಯನ್ನು ಉಳಿಸುವುದು

ಅದರ ಹಿಂದಿನ ಉದ್ದೇಶ ಎಂದು ಗುರುತಿಸಿದ್ದಾರೆ ಅದು ಅಲ್ಲದೆ ಈ ಕೃತಿಯಲ್ಲಿ ಕಿವಿ ಚುಚ್ಚುವುದು, ಋತುಮತಿ, ಮದುವೆ ಪದ್ಧತಿಯ ಬಗ್ಗೆ, ಸಾವು ಮತ್ತು ಗೋವಾ ಕುಡುಬಿಯರ ಬಳಿ ಪದ್ಧತಿ, ಆರಾಧನಾ ಪದ್ಧತಿ, ಆಚರಣೆಗಳು ಹೋಳಿ ಕುಣಿತ ಅದರ ಕಟ್ಟು ಪಾಡುಗಳು, ವಿಧಿ ನಿಷೇಧ ಇಲ್ಲಿ ಪ್ರಾಣಿ, ಪಕ್ಷಿ, ವೃಕ್ಷ ಬಳಿ ಸಂಬಂಧಿ ನಿಷೇಧಗಳು ಬಗ್ಗೆ ಕುಡುಬಿಯರ ನ್ಯಾಯ ಪದ್ಧತಿ ಮತ್ತು ವೈದ್ಯ ಪದ್ಧತಿಯ ಬಗ್ಗೆ ವಿವರಣೆ ನೀಡಿದ್ದಾರೆ.

ಎ.ವಿ. ನಾವಡ ರವರ "ಕುಡುಬಿಯರು" ಜಾನಪದ ಮಾಲೆ:10 ಇದು ವಯಸ್ಕರ ಶಿಕ್ಷಣಾಕ್ಕಾಗಿ ರಚಿತ ಕೃತಿಯಾಗಿದೆ. ಈ ಕೃತಿಯಲ್ಲಿ ಪ್ರಮುಖವಾದ ಅಂಶಗಳು ಈ ಕೆಳಗಿನಂತೆ ಇವೆ.

ಕುಡುಬಿಯರ ನೆಲೆಗಳು ಕುಂದಾಪುರ, ಉಡುಪಿ ಮತ್ತು ಮಂಗಳೂರು ತಾಲೂಕು ಬಾರ್ಕೂರು, ಮಂದರ್ತಿ, ಕೊಕ್ಕರ್ಣೆ, ಸುರಾಲು, ಬಿಲ್ಲಾಡಿ, ಹೆಸ್ಕುಂದ, ಹಾಲಾಡಿ, ಸಿರಿಯಾರ ನೆಡೂರು, ಕೊಲ್ಲೂರು, ಬಜಪೆ ಕುಡುಬಿಯರು ನೆಲೆನಿಂತ ಪ್ರಮುಖ ಪ್ರದೇಶಗಳು.

ವಲಸೆಗೆ ಕಾರಣ: ಇಲ್ಲಿ ಕುಡುಬಿಯರ ವಲಸೆ ಕಾರಣ ಪೋರ್ಚುಗೀಸರ ದಬ್ಬಾಳಿಕೆಗೆ ಬೇಸತ್ತು ಕರಾವಳಿ ಕರ್ನಾಟಕ್ಕೆ ವಲಸೆ ಬಂದರು. ಆರಂಭದಲ್ಲಿ ನೆಲೆ ಕೊಟ್ಟವರು ಸುರಾಲಿನ ಜೈನ ಅರಸರು ಎಂದು ಹೇಳುತ್ತಾರೆ.

ಇಲ್ಲಿ ಕುಡುಬಿಯರನ್ನು ಕುಮರಿ ಬೇಸಾಯಗಾರರು ಎಂದಿದ್ದಾರೆ ಕುಮರಿ ಬೇಸಾಯವೆಂದರೆ ಬೆಟ್ಟ–ಗುಡ್ಡಗಳ ಮರಗಿಡ ಪೊದೆ ಸವರಿ ಸುಟ್ಟು ಬೀಜ ಹಾಕುವುದು. ಇವರು ಮಳೆಯನ್ನು ಅವಲಂಬಿಸಿ ಬೇಸಾಯ ಮಾಡುತ್ತಿದ್ದರು. ನೀರಿನ ಅಭಾವ ಕಂಡು ಬಂದರೆ ಬೇರೆ ಪ್ರದೇಶಕ್ಕೆ ವಲಸೆ ಹೋಗುತ್ತಾರೆ. ಕುಡುಬಿಯ ಅವಿಭಕ್ತ ಕುಟುಂಬ ವ್ಯವಸ್ಥೆ ಮತ್ತು ಸಮೂಹವಾಗಿ ಜೀವನ ನಡೆಸುತ್ತಾರೆ. ಈ ಕೃತಿಯಲ್ಲಿ ಕುಡುಬಿ ಮಹಿಳೆಯರು ಆಭರಣ ಪ್ರಿಯರು ಎಂದು ಉಲ್ಲೇಖಿಸಿದ್ದಾರೆ. ಮಹಿಳೆಯರಿಗೆ ಪ್ರಿಯವಾದ ಹೂ ಅಬ್ಬಲ್ಲಿಗೆ (ಕನಕಾಂಬರ) ಆಭರಣಗಳ ಬಗ್ಗೆ ಇಲ್ಲಿ ಕೈಗೆ ಗಾಜಿನ ಬಳೆ, ಕಾಲಿಗೆ ಉಂಗುರ ಕೊರಳಿಗೆ ವಿವಿಧ ಬಗೆಯ ಮಣಿ ಸರಕಿನ ಸರಗಳನ್ನು ಧರಿಸುತ್ತಿದ್ದ ಉಲ್ಲೇಖವಿದೆ. ವಿವಿಧ ರೀತಿಯ ತರಕಾರಿಯ ಮಾದರಿಯ ಸರವನ್ನು 'ಹಿತ್ತಲಕಾಯಿ ಸರ' ಎನ್ನುತ್ತಾರೆ. ಇದು ವಿಶೇಷ ಸಂದರ್ಭದಲ್ಲಿ ಧರಿಸುವ ಅಭರಣಗಳು ಕಿವಿಗೆ ಮುಗುಳು ಸರಪಳಿ, ಲವಂಗದ ಬೆಂಡೋಲೆ ಹಾಕಿಕೊಳ್ಳುತ್ತಾರೆ. ಇನ್ನು ಗಂಡಸರು ಜುಟ್ಟು ಕಟ್ಟುತ್ತಿದ್ದರು. ಕಿವಿಗೆ ಬಂಗಾರದ ಒಂಟಿ ಮುರ ಗಂಡಸರ ಸಾಮಾನ್ಯ ಆಭರಣ.

ಕುಡುಬಿಯರಲ್ಲಿ ಗಂಡಸಿಗೆ ಮುಖ್ಯಸ್ಥ, ಅಸ್ತಿ ಹಕ್ಕು, ಅಧಿಕಾರ ಎಲ್ಲವೂ ತಂದೆಯಿಂದ ಗಂಡು ಮಕ್ಕಳಿಗೆ ಇಳಿದು ಬರುತ್ತದೆ. ಇವರಲ್ಲಿ ಕೊಟ್ಟ ಹೆಣ್ಣು ಕುಲದಿಂದ ಹೊರಗೆ ತವರಿನ ಯಾವುದೇ ಸಂಬಂಧವಿಲ್ಲ. ಆಕೆಗೆ ಗಂಡನ ಮನೆಯಲ್ಲೂ ಯಾವುದೇ ಸ್ಥಾನಮಾನವಿಲ್ಲ ಕುಡುಬಿಯರ ಗುಂಪು ಗುಂಪಾಗಿ ಜೀವನ ನಡೆಸುತ್ತಿದ್ದರು. ವಿಶೇಷ ಸಂದರ್ಭದಲ್ಲಿ ಒಂದೇ ಪಾತ್ರೆಯ ಅನ್ನ ಉಣ್ಣುತ್ತಾರೆ.

ಆಹಾರ ಪದ್ಧತಿ: ಈ ಕೃತಿಯಲ್ಲಿ ಕುಡುಬಿಯರು ಮಾಂಸಹಾರಿಗಳೆಂದು ಉಲ್ಲೇಖವಿದೆ. ಬೇಟೆಯಿಂದ ತಂದ ಮೊಲ, ಕಾಡುಕೋಣ, ಕಾಡು ಹಂದಿಯ ಮಾಂಸ, ನದಿ ತೋಡುಗಳಲ್ಲಿ ದೊರೆವ ಸಿಹಿ ನೀರಿನ ಮೀನು ಇವರ ಆಹಾರ. ಗೋವೆ ಕೆಸು, ಬಸಳೆ, ಅಲಸಂಡೆ ಕೋಡು ಇವರ ಪ್ರಮುಖ ವಾಣಿಜ್ಯ ಬೆಳೆಗಳು ಕುಡುಬಿಯರಿಗೆ ಕಂಬಳದ ವಿಶೇಷ ಆಸಕ್ತಿ.

ಈ ಕೃತಿಯಲ್ಲಿ ಕುಡುಬಿ ಸಮುದಾಯದಲ್ಲಿ ಸಿಂಗಾರಗೊಂಡ ಹೆಣ್ಣನ್ನು ಮನೆಯ ಹೊಸ್ತಿಲ ಒಳಗೆ, ಹುಡುಗನ ತಂದೆಯನ್ನು ಹೊಸ್ತಿಲ ಹೊರಗೆ ನಿಲ್ಲಿಸುತ್ತಾರೆ. ಹೊಸ್ತಿಲಲ್ಲಿ ಕಾಲುದೀಪವನ್ನು ಹೊತ್ತಿಸಿ ಇಡುತ್ತಾರೆ. ಹುಡುಗನ ತಂದೆ ಮದುಮಗಳ ಕೈಬಳೆಯೊಂದನ್ನು ಒಡೆಯುತ್ತಾನೆ. ಆಕೆಯ ಒಂದು ತಲೆಗೂದಲನ್ನು ಕೀಳುತ್ತಾನೆ. ಒಂದು ವೀಳೆದೆಲೆಯನ್ನು ಸೀಳುತ್ತಾನೆ. ಹೊಸ್ತಿಲಲ್ಲಿ ಬೆಳಗುತ್ತಿರುವ

ದೀಪವನ್ನು ನಂದಿಸಿ ಮದುಮಗಳು ಹೊರ ಬರುತ್ತಾಳೆ. ಉಳಿದವರಲ್ಲಿ ಇವೆಲ್ಲ ಅಮಂಗಳವಾದರೆ ಕುಡುಬಿಯರಲ್ಲಿ ಇದು ಬಳಿ ಕಡಿಯುವ ಸಂಕೇತ ಎಂಬ ಉಲ್ಲೇಖವಿದೆ.

ಇಷ್ಟು ಅಲ್ಲದೆ ಈ ಕೃತಿಯಲ್ಲಿ ಮದುವೆಯ ಬಗ್ಗೆ, ವಿವಿಧ ಆಭರಣಗಳ ಬಗ್ಗೆ, ಬೇಟೆಯಲ್ಲಿ ಬಳಸುವ ಸಲಕರಣೆಗಳ ಬಗ್ಗೆ, ಕಂಬಳ ಪ್ರಾಮುಖ್ಯತೆಯ ಬಗ್ಗೆ, ಬದುಕಿನ ವಿವಿಧ ಹಂತಗಳ ಬಗ್ಗೆ ಧಾರ್ಮಿಕ ಕ್ರಿಯಾವಿಧಾನದ ಬಗ್ಗೆ ಕುಡುಬಿಯರ ಹೋಳಿ ಹಬ್ಬದ ಬಗ್ಗೆ, ಅಲ್ಲಿ ಬಳಸುವ ವಿವಿಧ ಪರಿಕರಗಳ ಬಗ್ಗೆ, ಕುಡುಬಿಯರ ವೇಷ ಭೂಷಣದ ಬಗ್ಗೆ, ಕುಣಿತದ ಬಗ್ಗೆ, ಕುಡುಬಿಯರಲ್ಲಿ ಭೂತಾರಾಧನೆಯ ಬಗ್ಗೆ, ಸತ್ತವರಿಗೆ ಹಬ್ಬ-ಕೊಲೆ ಬಗ್ಗೆ, ಕುಡುಬಿಯರ ನಂಬಿಕೆಗಳ ಬಗ್ಗೆ, ಆಹಾರ ಬೆಳೆಗಳ ಬಗ್ಗೆ, ವೃತ್ತಿಯ ಬಗ್ಗೆ ಈ ಕೃತಿಯಲ್ಲಿ ಮಾಹಿತಿ ಲಭ್ಯವಿದೆ.

ಜಾನಪದ ಸಾಹಿತ್ಯ ದರ್ಶನ-17 (ದಾಂಡೇಲಿ: ಅಖಿಲ ಕರ್ನಾಟಕ 17ನೇಯ ಜಾನಪದ ಸಮ್ಮೇಳನ ಸ್ಮರಣ ಸಂಪುಟ) ಈ ಸಂಪುಟ ಹಿ.ಚಿ.ಬೋರ ಲಿಂಗಯ್ಯರವರ ಲೇಖನ "ಕುಡುಬಿಯರು-ಕುಣಬಿಯರು" ರಲ್ಲಿ ಕುಡುಬಿಯರ ಬಗ್ಗೆ ಸಿಗುವ ಮಾಹಿತಿಗಳು ಈ ಕೆಳಗಿನಂತಿವೆ.

ಈ ಲೇಖಕನದ ಆರಂಭದಲ್ಲಿ ಕುಣಬಿಯರ ನೆಲೆಗಳ ವೈಶಿಷ್ಟತೆಯನ್ನು ವಿವರಿಸುತ್ತಾ ಅಧ್ಯಾಯನಕಾರರು ಕರ್ನಾಟಕದ ಬೇರೆ ಬೇರೆ ಬುಡಕಟ್ಟು ಜನಾಂಗದವರೊಡನೆ ಕುಡುಬಿಯರ ಬಗ್ಗೆ ಉಲ್ಲೇಖ ಮಾಡುತ್ತಾರೆ.

ಅಧ್ಯಯನಕಾರರಾಗಿ ಲೇಖಕರು ಕುಡುಬಿರ ಮೂರು ವಿಧಗಳ ಬಗ್ಗೆ ಈ ಕೆಳಗಿನಂತೆ ವಿವರಿಸುತ್ತಾರೆ.

1. ಕರಾವಳಿಯ ಅದರಲ್ಲಿಯೂ ದಕ್ಷಿಣ ಕನ್ನಡ ಕುಂದಾಪುರ ಹಾಗೂ ಉಡುಪಿ ತಾಲೂಕಿನ ಮಂದರ್ತಿ, ಕೊಕ್ಕರ್ಣೆ, ಬಿಲ್ಲಾಡಿ, ಹೇಗ್ಗುಂಜೆ, ಮೆತ್ತಗೋಳಿ, ಸುರಾಲು ಗೋಳಿಯಂಗಡಿ, ಹಿಲಿಯಾಣ ವಂಡಾರು ಮುಂತಾದ ಸ್ಥಳಗಳಲ್ಲಿ ಕಂಡು ಬರುವ ಕುಡುಬಿಯರು.
2. ಅರೆ ಮಲೆನಾಡು ಮತ್ತು ತೀರಾ ದಟ್ಟಾರಣ್ಯಗಳನ್ನೊಳಗೊಂಡಂತೆ ಶಿವಮೊಗ್ಗ ಜಿಲ್ಲೆಯ ಸಾಗರ ಮತ್ತು ಉತ್ತರ ಕನ್ನಡದ ಭಟ್ಕಳದ ನಡುವಿನ ಗೋವರ್ಧಗಿರಿ ಹಾಗೂ ಮೆಘಾನೆ ಬೆಟ್ಟ ಸಾಲುಗಳಲ್ಲಿ ಕಂಡು ಬರುವ ಕುಣಬಿಯರು ಅಥವಾ ಅಟ್ಟೆ ಕುಣಬಿಯರು.
3. ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಯ ಇದೇ ಕುಡುಬಿಯರು ಮತ್ತು ಕುಣಬಿಯರಿಗೆ ಹತ್ತಿರ ಹತ್ತಿರದಲ್ಲಿಯೇ ವಾಸಿಸುವ ಮರಾಠಿ ನಾಯ್ಕರು ಕುಡುಬಿಯರು ಮತ್ತು ಮರಾಠಿನಾಯ್ಕರು ಒಂದೇ ಜನಾಂಗ ಎಂಬುದು ಲೇಖಕರ ವಾದವಾಗಿದೆ.

ಈ ಕೃತಿಯಲ್ಲಿ ವಲಸೆಗೆ ಕಾರಣಗಳನ್ನು ಎರಡು ರೀತಿಯಲ್ಲಿ ನೀಡುತ್ತಾರೆ.

1. ಧಾರ್ಮಿಕ ಕಾರಣ
2. ಆರ್ಥಿಕ ಕಾರಣ

ಧಾರ್ಮಿಕ ಕಾರಣವೆಂದರೆ ಗೋವಾವನ್ನು ಅಕ್ರಮಿಸಿದ ಪೋರ್ಚುಗೀಸರು ಇವರನ್ನು ಮಂತಾಂತರಕ್ಕೆ ಪ್ರೇರೇಪಿಸಿದಾಗ ಅಥವಾ ಬಲವಂತ ಮಾಡಿದಾಗ ಅದಕ್ಕೆ ವಿರುದ್ಧವಾಗಿ ನಾಡನ್ನು ಬಿಟ್ಟರು. ಆರ್ಥಿಕವಾಗಿ ಕುಡುಬಿಯರು ತೀರಾ ಕಷ್ಟಕ್ಕೆ ಸಿಲುಕಿದರು. ಇಡೀ ಗೋವಾವನ್ನು ವ್ಯಾಪಾರ ಕೇಂದ್ರವಾಗಿಸಿದ ಪೋರ್ಚುಗೀಸರು ಕುಡುಬಿಯರ ಸಾಂಪ್ರದಾಯಿಕ ವೃತ್ತಿಗೆ ದೊಡ್ಡ ಹೊಡೆತವನ್ನೇ ಕೊಟ್ಟರು ಆರ್ಥಿಕವಾಗಿ ಸಂಕಷ್ಟಕ್ಕೆ ಸಿಲುಕಿದ ಈ ಸಮುದಾಯಕ್ಕೆ ವಲಸೆಯೇ ದಾರಿಯಾಗಿ ಕಂಡಿತು.

ಹೀಗೆ ವಲಸೆ ಬಂದ ಕುಡುಬಿಯರು ಘಟ್ಟ ಪ್ರದೇಶ ಮೇಲಕ್ಕೆ ಮತ್ತು ಘಟ್ಟದ ಕೆಳಕ್ಕೂ ಎರಡು ವಿಭಾಗವಾಗಿ ಹಂಚಿ ಹೋದರು. ಈ ರೀತಿಯಾಗಿ ಕುಡುಬಿಯರು ಮತ್ತು ಕುಣಬಿಯರು ಎಂದು ವಿಂಗಡನೆಯಾಯಿತು. ತಾವು ನೆಲೆನಿಂತ ಭೌಗೋಳಿಕ ಪ್ರದೇಶ ಅಲ್ಲಿನ ಭಾಷೆ, ಜೀವನ ಶೈಲಿ, ಉಡುಗೆ ತೊಡುಗೆಗೆ ಅನುಸಾರವಾಗಿ ಪರಿವರ್ತನೆಗೊಂಡರು.

ಕೃತಿಯಲ್ಲಿ ಅಧ್ಯಾಯನಕಾರರು ಮಾನವ ಚರಿತ್ರೆಯಲ್ಲಿ ಐದು ಹಂತಗಳನ್ನು ಈ ರೀತಿ ಪಟ್ಟಿಮಾಡುತ್ತಾರೆ.

1. ಬೇಟೆಯ ಹಂತ
2. ಪಶು ಸಂಗೋಪನೆಯ ಹಂತ
3. ಆಹಾರ ಸಂಗ್ರಹಣೆ ಹಂತ
4. ಕೃಷಿ ಹಂತ
5. ವಿಜ್ಞಾನ ಹಂತ

ಈ ಹಂತಗಳಲ್ಲಿ ಕುಡುಬಿಯರು ಇತ್ತೀಚಿಗಿನವರೆಗೂ ಬೇಟೆಯ ಹಂತದಲ್ಲೇ ಇದ್ದರು ಎಂದು ವಾದಿಸುತ್ತಾ ಅದಕ್ಕೆ ಕೆಲವು ಆಚರಣೆಗಳನ್ನು ಈ ಕೆಳಗಿನಂತೆ ಉಲ್ಲೇಖಿಸುತ್ತಾರೆ.

1. ಕುಡುಬಿಯರ ಮದುವೆಯ ನಂತರ ಮಾವನಾದವನು ಅಳಿಯನಿಗೆ ಒನಕೆ, ಕತ್ತಿ, ಹಗ್ಗ, ಗರಸೆ, ಮಣ್ಣಿನ ಮಡಿಕೆ, ಈಟ್ಟಿ ಮತ್ತು ಬೇಟೆಯ ಬಲೆಯನ್ನು ಬಳುವಳಿಯಾಗಿ ಕೊಡುತ್ತಾನೆ.
2. ಹೋಳಿ ಹಬ್ಬದ ಬಳಿಕ ಒಂದು ನಿಗದಿತ ದಿನ ಎಲ್ಲರೂ ಬೇಟೆಗೆ ಹೊರಡುತ್ತಾರೆ. ಸಿಕ್ಕಿದ ಪ್ರಾಣಿಗಳನ್ನು ಕೊಂದು ಅಡುಗೆ ಮಾಡಿ ಎಲ್ಲರೂ ಜೊತೆಯಾಗಿ ಉಣ್ಣುತ್ತಾರೆ.
3. ಬೇಟೆಯ ನಂತರ ಸತ್ತ ಪ್ರಾಣಿಯ ರಕ್ತವನ್ನು ಈಟಿಗೆ ಮತ್ತು ಇತರ ಆಯುಧಗಳಿಗೆ ಸವರಲಾಗುತ್ತದೆ. ಆಯುಧಗಳಲ್ಲಿ ನೆಲೆಸಿದ ಭೂತಕ್ಕೆ ತೃಪ್ತಿಯಾಗಲು ಹೀಗೆ ಮಾಡಲಾಗುತ್ತದೆ. ನಂತರ ಪ್ರಾಣಿಯನ್ನು ಹೊತ್ತು ಬೇಟೆಯ ಗುರ್ಕಾರನ ಮನೆಗೆ ತಂದು, ಮಾಂಸವನ್ನು ಸಮವಾಗಿ ಹಂಚಲಾಗುತ್ತದೆ. ನಂತರದಲ್ಲಿ ಕುಡುಬಿಯರ ವೃತ್ತಿ, ಅವರ ಕಂಬಳದ ಬಗೆಗಿನ ಪ್ರೇಮ, ಹೋಳಿಗಳ ಬಗ್ಗೆ ಸಂಕ್ಷಿಪ್ತವಾದ ಮಾಹಿತಿ ನೀಡಲಾಗಿದೆ.

'ಕೊಂಕಣದ ಕುಡುಬಿಯರು" ಇದು ಪ್ರೊ.ಎ.ವಿ. ನಾವಡರವರ ಕೃತಿ. ಈ ಕೃತಿಯ ಆರಂಭದಲ್ಲಿ ಕುಡುಬಿಯರ ಬಗ್ಗೆ ಪರಿಚಯವಿದೆ. ನಂತರ ಈ ಹಿಂದೆ ನಡೆದ ಅಧ್ಯಯನಗಳ ಬಗ್ಗೆ ಮಾಹಿತಿ ನೀಡಲಾಗಿದೆ. ನಂತರ ಕುಡುಬಿಯರ ಬುಡಕಟ್ಟು ಹಿನ್ನಲೆ, ಭೌಗೋಳಿಕ ಪರಿಸರ–ಒಳ ವಿಭಾಗಗಳು, ಒಳ ವಿಭಜನೆಗಳು, ಬಳಿಗಳು ಅದರ ಹೆಸರಿನ ಹಿನ್ನಲೆ, ಕುಡುಬಿಯವರ ಮೂಲ, ಅವರ ನೆಲೆಗಳು, ಆಹಾರ ಪದ್ಧತಿ, ವೃತ್ತಿ, ಕಾಚು ತಯಾರಿ, ಅವರ ಉಡುಗೆ, ತೊಡುಗೆ, ವಸತಿ–ಮನೆ–ವಾಸಸ್ಥಾನ ಕುಟುಂಬ ವ್ಯವಸ್ಥೆ, ಒಳಾಡಳಿತ ವ್ಯವಸ್ಥೆ, ಧಾರ್ಮಿಕ ವ್ಯವಸ್ಥೆ, ಕೊಡಿಯಾಲ್ ಕುಡುಬಿಯರ ಸಾಮೂಹಿಕ ಹೋಳಿ ಆಚರಣೆ, ಭೂತಾರಾಧರಾಗಿ ಕುಡುಬಿಯರು, ಬೇಟೆ ಜೀವನಾವರ್ತನದ ಆಚರಣೆಗಳು, ಕೊಲೆ ಹಬ್ಬ ಮತ್ತು ಕುಡುಬಿಯರ ಜನಪದ ಸಾಹಿತ್ಯ ಬಗ್ಗೆ ಮಾಹಿತಿಯನ್ನು ಹೊಂದಿದೆ.

ಈ ಕೃತಿಯಲ್ಲಿ ಕುಡುಬಿಯರ ಒಳಾಡಳಿತ ವ್ಯವಸ್ಥೆ ಬಗ್ಗೆ ಕುಡುಬಿಯರಲ್ಲಿ ಅವರದೇ ಆದ ಒಳಾಡಳಿತ ವ್ಯವಸ್ಥೆ ಇದೆ. ಸ್ವತಂತ್ರ ಭಾರತದ ಸಾಮಾಜಿಕ ಪರಿವರ್ತನೆಗೆ ಒಳಗಾದರು ಒಳಾಡಳಿರದಲ್ಲಿ ಬದಲಾವಣೆಯಾಗಿಲ್ಲ ಮನೆಯಲ್ಲಿ ಗೊಂದಲ ಉಂಟಾದಾಗ ಮನೆಯ ಹಿರಿಯರು ಪರಿಹಾರ ತಿಳಿಸುತ್ತಾರೆ. ಅವರಿಗೆ ಸಾಧ್ಯವಾಗದೆ ಇದ್ದಾಗ ವಾದೆಯ ಬುದ್ಯಂತ ತಿರ್ಮಾನ ನೀಡುತ್ತಾರೆ. ಹಿಂದೆ ಈ ಅಧಿಕಾರ ಗುರುಗಳಿಗೆ ಇತ್ತು.

ಗುರುಗಳು

↓

ವಾಡೆಯ ಬುದ್ಯಂತ

↓

ಕುಟುಂಬದ ಹಿರಿಯ

↓

ಕುಟುಂಬದ ವಿವಿಧ ಕವಲುಗಳ ಹಿರಿಯ

↓

ಸದಸ್ಯರು

ಹಿಂದೆ ಸಾಮಾಜಿಕ ಬಹಿಷ್ಕಾರ, ಶುದ್ಧೀಕರಣಕ್ಕೆ ಸೀಮೆಯ ಗುರುಗಳೇ ಇರಬೇಕು, ಗುರುಗಳನ್ನು ವಂಪರಂಪರ್ಯವಾಗಿ ಆಯ್ಕೆ ಮಾಡಲಾಗಿತ್ತಿತ್ತು. ಕುಟುಂಬದ ಸದಸ್ಯರ ನಡುವೆ ಅಹಿತಕರ ಘಟನೆ ನಡೆದಾಗ ಗುರುಗಳಿಗೆ ದೂರು ಹೊಗುತ್ತದೆ. ಇಲ್ಲಿ ವಿಚಾರಣೆ ನಡೆದು ಶಿಕ್ಷೆ ಪ್ರಕಟಿಸಲಾಗುತ್ತದೆ. ಇದಕ್ಕೆ ಎಲ್ಲರೂ ಬದ್ಧರಾಗಬೇಕಿತ್ತು. ಇಲ್ಲಿ ಜಾತಿ ಬಹಿಷ್ಕಾರದಂತ ಶಿಕ್ಷೆ ನೀಡಲಾಗುತ್ತಿತ್ತು. ತಲೆ ಕೂದಲು ಬೋಳಿಸುವ ಶಿಕ್ಷೆಯನ್ನು ನೀಡಲಾಗುತ್ತಿತು. ಈ ರೀತಿ ಶಿಕ್ಷೆಗೆ ಒಳಗಾದ ಗಂಡನನ್ನು / ಗಂಡಸರನ್ನು ಗುರುಗಳು ತೀರ್ಥ ಹಾಕಿ ಶುದ್ಧ ಮಾಡಿ ಒಲಗೆ ಸೇರಿಸಿಕೊಳ್ಳುತ್ತಾರೆ. (ಇದು ಬಹಿಷ್ಕಾರಕ್ಕೆ ಸಂಬಂಧಿಸಿದು) ಆದರೆ ಬದಲಾವಣೆಗೊಳಗಾದ ಕುಡುಬಿಯರಲ್ಲಿ ಈ ರೀತಿಯ ಶಿಕ್ಷೆಯನ್ನು ನೀಡಲಾಗುತ್ತಿಲ್ಲ.

ಧಾರ್ಮಿಕ ವ್ಯವಸ್ಥೆ:–

ಕುಡುಬಿಯರಿಗೆ ಅವರದೇ ಆದ ಧಾರ್ಮಿಕ ವ್ಯವಸ್ಥೆಯಿದೆ. ಧಾರ್ಮಿಕ ವ್ಯವಸ್ಥೆಯಲ್ಲಿ ಕೆಲವು ಕುಟುಂಬಕ್ಕೆ ಸೀಮಿತವಾದರೆ ಇನ್ನು ಕೆಲವು ಕುಟುಂಬಗಳ ಗುಂಪು– ವಾಡೆಗೆ ಸಂಬಂಧಿಸಿರುತ್ತದೆ. ಈ ಕೃತಿಯಲ್ಲಿ ಧಾರ್ಮಿಕ ವ್ಯವಸ್ಥೆಯ ಬಗ್ಗೆ

ಧಾಮಿಕ ವ್ಯವಸ್ಥೆ

ಕುಟುಂಬದ ನೆಲೆ
(ತುಳಸಿ ಹಬ್ಬ, ಶೊಲೆ ಹಬ್ಬ –
–ಅಸಾಡಿ ಹಬ್ಬ, ಹೊಸ್ತ್ ಹಬ್ಬ,)

ಸಮುದಾಯದ ನೆಲೆ
(ಹೋಳಿ, ಬೇಟೆ)

ಈ ರೀತಿಯ ಮಾಹಿತಿ ಸಿಗುತ್ತದೆ. ಕುಡುಬಿಯರ ಕುಲ ದೈವ ಮಲ್ಲಿಕಾರ್ಜುನ. ಆ ದೈವವನ್ನು ಅವರು ಕರೆಯುವುದು ಗೋಂಯ್ ದೇವರು ಎಂದು. ಈ ಕೃತಿಯಲ್ಲಿ ಲೇಖಕರು ಕುಡುಬಿಯರಲಲಿ ಯಾವುದೇ ಆಚರಣೆವಿರಬಹುದು (ವಿವಾಹವನ್ನು ಹೊರತುಪಡಿಸಿ) ಧಾರ್ಮಿಕ ವಿಧಿ ವಿಧಾನಗಳಿರಬಹುದು ಮತ್ತು ಯಾವುದೇ ಆರಾಧನೆಯಲ್ಲೂ ಸ್ತ್ರೀಯರಿಗೆ ಯಾವುದೇ ಪ್ರಾಮುಖ್ಯತೆ ಇಲ್ಲ ಎಂದು ಉಲ್ಲೇಖಿಸಿದ್ದಾರೆ.

ಹೋಳಿ ಹಬ್ಬ ಕುಡುಬಿಯರಲ್ಲಿ ಪ್ರಮುಖವಾದ ಹಬ್ಬ ಈ ಬಗ್ಗೆ ಕೃತಿಯಲಲಿ ಹೋಳಿ ಆಚಾರಣೆಯ ಕಕುಣಿತರ ಗುಂಪನ್ನು ಮೇಳ ಎಂದು ಕರೆಯಲಾಗುತ್ತದೆ. ಮೇಳದಲ್ಲಿ ನೂರರಿಂದ ಮೂನ್ನೂರು ಜನರು ಭಾಗವಹಿಸುವುದು ಉಂಟು. ಇಲ್ಲಿ ವಯಸ್ಸಿನ ಮಿತಿ ಇಲ್ಲ ಹೋಳಿ ಆಚರಣೆಯಲ್ಲಿನ ಪ್ರಮುಖ ಕ್ರಮಗಳು. ಇಲ್ಲಿ ಮೀನು ಮಾಂಸ ಸೇವನೆ ನಿಷಿದ್ದ. ಹೋಳಿ ಹಬ್ಬದ ಆವರಣೆಯನ್ನು ನಿಯಂತ್ರಿಸುವುದಕ್ಕೆ ನಾಲ್ಕು ಪದಾಧಿಕಾರಿಗಳಿರುತ್ತಾರೆ.

1. ಮಂಡ್ಕಾರ (ಬುದ್ಯಂತ)	–	ಇಡಿಯ ಆಚರಣೆಯ ನಿಯಂತ್ರಳ.
2. ಗುಮ್ಮೆ ಯಜಮಾನ	–	ಗುಮ್ಮೆ ಕುಣಿತವನ್ನು ನಿಯಂತಿಸುವವನು ಮಿದಲ ಹಾಗೂ ಕೊನೆಯ ಗುಮ್ಮೆ ನುಡಿತ ಇವನಿಂದಲೇ ಆಗಬೇಕು.
3. ಕೋಲ್ ಗುರ್ಕಾರ	–	ಕೋಲಾವವನ್ನು ನಇಯಂತ್ರಿಸುವವನು.
4. ಖೇಲ್ತ ಗುರು	–	ಹಾಡು, ಕುಣಿತವನ್ನು ನಿಯಂತ್ರಿಸುವವನು ಹಾಡಿನ ಮೊದಲ ಸಾಲನ್ನು ಇವನೇ ಹೇಳಬೇಕು. ಆ ಬಳಿಕ ಉಳಿದವರು ಪುನರಾವರ್ತಿಸುತ್ತಾರೆ.ಈ ರೀತಿಯ ಪ್ರಮುಖ ಮಾಹಿತಿಗಳು ಕೃತಿಯಲ್ಲಿ ಲಭ್ಯವಿದೆ.

ಅಧ್ಯಾಯನ ೦೨

ಕುಡುಬಿ ಸಮುದಾಯದ

ಸಾಮಾಜಿಕ ಸ್ಥಿತಿಗತಿಗಳು

ಅಧ್ಯಾಯ–2

ಅಧ್ಯಾಯ 2.1 ಕುಡುಬಿ ಸಮುದಾಯದ ಸಾಮಾಜಿಕ ಸ್ಥಿತಿಗತಿಗಳು:

ಸಂಕ್ಷಿಪ್ತ ಮಾಹಿತಿ: ಕುಡುಬಿ ಸಮುದಾಯವು ಒಂದು ಬುಡಕಟ್ಟು ಹಿನ್ನಲೆಯನ್ನು ಹೊಂದಿರುವ ಸಮಾಜವಾಗಿದೆ. ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇವರ ವಾಸಸ್ಥಳವನ್ನು ಗುರುತಿಸಬಹುದು. ಇವರ ಆಡುವ ಭಾಷೆ ಕೊಂಕಣಿ ಕುಡುಬಿಯ ಮೂಲ ಉದ್ಯೋಗ ಕೃಷಿಯಾಗಿದೆ. ಇವರ ನೆಲೆಗಳು ಕೂಡ ನದಿಯ ತೀರ ಪ್ರದೇಶದಲ್ಲಿ ಗುಡ್ಡಕಾಡು ಪ್ರದೇಶದ ತಪ್ಪಲಿನಲ್ಲಿ ಕಾಣಬಹುದು ಪ್ರಸ್ತುತ ಈ ಸಮುದಾಯವು ರಾಜಕೀಯ ನೆಲೆಯನ್ನು ಕಂಡುಕೊಂಡಿವೆ. ಮಿಸಲಾತಿ ವರ್ಗಕ್ಕೆ ಸೇರುವುದು ಈ ಸಮುದಾಯದ ನಾಯಕರ ಪ್ರಮುಖ ಬೇಡಿಕೆಗಳಲ್ಲಿ ಒಂದು. ಕುಡುಬಿ ವಾಹಿನಿ ಮತ್ತು ಜ್ಞಾನ ದೀಪ್ತಿ ಕುಡುಬಿ ಸಮುದಾಯದ ಪ್ರಮುಖ ಪತ್ರಿಕೆಯಾಗಿದೆ.

ಕುಡುಬಿಯರ ಮೂಲ: ಕುಡುಬಿಯರು ಮೂಲತ: ಗೋವದವರು ಅಲ್ಲಿ ನಡೆದ ಅಹಿತಕರ ಘಟನೆಯಿಂದ ಕರಾವಳಿ ಕರ್ನಾಟಕಕ್ಕೆ ವಲಸೆ ಬಂದವರೆಂದು ತಿಳಿಯುತ್ತದೆ. ದೋಣಿಯ ಮೂಲಕ ಒಂದು ಸೀತಾನದಿ ನೇತ್ರಾವತಿ ದಡಗಳಲ್ಲಿ ಮೊದಲು ನೆಲೆಯಾದೆವೆಂದು ಕುಡುಬಿಯರು ಹೇಳುತ್ತಾರೆ(1). ಗೋವಾದಲ್ಲಿ ಪೋರ್ಚುಗೀಸರ ಬಲವಂತಿಕೆಗೆ ನೊಂದು ಓಡಿ ಬಂದ ಕುಡುಬಿಯರಿಗೆ ರಾಣಿ ಅಬ್ಬಕ್ಕ ದೇವಿ ಆಶ್ರಯವಿತ್ತಳು ಮುಂದೆ ರಾಣಿಯ ಸೈನ್ಯ ಸೇರಿದ ಕುಡುಬಿಯರನ್ನು ಆಕೆಯು ಆತ್ಮೀಯವಾಗಿ ನೋಡಿಕೊಂಡಳು. ಉಂಬಳಿ ಗದ್ದೆ ನೀಡಿ ಕೃಷಿ ಮಾಡುವಂತೆ ಪ್ರೋತ್ಸಾಹಿಸಿದಳು. ಹೀಗಾಗಿ ಇಂದಿಗೂ ನೇತ್ರಾವತಿಯ ತೀರದಲ್ಲಿ ನೆಲೆನಿಂತ ಕುಡುಬಿಯರನ್ನು ಕಾಣಬಹುದು(2).

ಕುಡುಬಿ ಪದದ ಅರ್ಥ:

ಗೋವಾದಿಂದ ವಲಸೆ ಬಂದ ಆರಂಭದಲ್ಲಿಯೆ ಕಾಡಿನ ಸಂಪರ್ಕವನ್ನು ಬಿಟ್ಟು ತುಳುನಾಡಿನ ಸಮುದ್ರ ಕರೆಯಲ್ಲಿ ನೆಲೆನಿಂತವರನ್ನು ಕರೆ ಕುಡಿಬಿಯರೆಂದು ಕರೆದರು. ವ್ಯವಸಾಯ ಇವರ ಪ್ರಧಾನ ವೃತ್ತಿಯಲ್ಲಿ ಇವರನ್ನು ಕೊಡಿಯಾಲ ಕುಡುಬಿಯರೆಂದು ಕರೆಯುತ್ತಾರೆ(3).

ಕುಡುಬಿ ಪದದ ಅರ್ಥ

ಸಾಮಾನ್ಯ ಜನರಿಗೆ ಈ ಬಗ್ಗೆ ಯಾವುದೇ ಮಾಹಿತಿ ಇಲ್ಲ. ಎ.ಎ.ಡಿ ಲೂವಿಸ್ ರವರ ಪ್ರಕಾರ ಮುಳುಹಂದಿಯ ಬೇಟೆಯಲ್ಲಿ ವಿಶೇಷ ಪರಿಣತರಾಗಿರುವುದರಿಂದ ಕುಡುಬಿ ಎಂಬ ನಾಮಧೇಯ ಬಂದಿದೆ(4).

ಕುಡುಬಿಯರ ನೆಲೆಗಳು:

ಕರ್ನಾಟಕದ ಪ್ರಾಕೃತಿಕ ವೈವಿಧ್ಯತೆಯನ್ನು ಪಶ್ಚಿಮ ಘಟ್ಟಗಳು ಮತ್ತು ಭೋರ್ಗರೆವ ಕಡಲಿನ ನಡುವೆ ಸಾವಿರ ವರ್ಷಗಳಿಂದ ಜೀವನ ಸಾಗಿಸುತ್ತಿರುವ ಮಾನವ ಜನಾಂಗ ತನ್ನದೇ ಆದ ಮನುಕುಲ ಚರಿತ್ರೆಯನ್ನು ಹೊಂದಿದೆ. ಕನ್ನಡ, ತುಳು, ಕೊಂಕಣಿ, ಮರಾಠಿ ಭಾಷೆಯ ಜನಾಂಗದವರು ಈ ಪ್ರದೇಶದಲ್ಲಿ ವಾಸಿಸುತ್ತಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯ, ಉಡುಪಿ, ಶಿವಮೊಗ್ಗ ಜಿಲ್ಲೆಯಲ್ಲಿ ಕುಡುಬಿ ಜನಾಂಗದವರನ್ನು ಕಾಣಬಹುದು. ದಕ್ಷಿಣ ಕನ್ನಡದಲ್ಲಿ ಇವರನ್ನು ಕುಡುಬಿಯರು ಎಂದೂ ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿ ಕುಣಬಿಯರಂದೂ ಕರೆಯುತ್ತಾರೆ. ಕುಡುಬಿಯರು ನೆಲೆಸಿರುವ ಪ್ರದೇಶಗಳು, ಕುಂದಾಪುರ, ಮಂದರ್ತಿ, ಕೊಕರ್ಣೆ, ಬಿಲ್ಲಾಡಿ, ಹೇಗ್ಗುಂಜಿ, ಮೆತ್ತಗೋಳಿ, ಸುರಾಲು, ಗೂಳಿಯಂಗಡಿ, ಹಿಲಿಯಾರು ಮತತು ವಂಡಾರು.

ಶಿವಮೊಗ್ಗ ಜಿಲ್ಲೆಯ ಅರೆಮಲೆನಾಡು ಮತ್ತು ತೀರಾ ದಟ್ಟರಾಣ್ಯಗಳನ್ನು ಒಳಗೊಂಡಂತೆ, ಸಾಗರ ಮತ್ತು ಉತ್ತರ ಕನ್ನಡ ಭಟ್ಕಳದ ನಡುವಿನ ಗೋವರ್ಧಗಿರಿ ಹಾಗೂ ಮೆಘಾನಿ ಬೆಟ್ಟ ಸಾಲುಗಳಲ್ಲಿ ಕಂಡು ಬರುತ್ತಾರೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಮುಖವಾಗಿ ಮಂಗಳೂರು ತಾಲೂಕು, ಕಾರ್ಕಳ, ಬಂಟ್ವಾಳ ತಾಲೂಕುಗಳಲ್ಲಿ ಇವರ ನೆಲೆಗಳಿವೆ. ಇಲ್ಲಿ ಹರೇಕಳ, ಕುತ್ತಾರು, ದೇರಳಕಟ್ಟೆ, ಕಾನಡ್ಕ, ಬಜಪೆ, ಕೊಂಪದವು, ಕುಪ್ಪೆಪದವು, ಎಡಪದವು, ಮೂಡು ಪೆರಾರು, ಕಾರ್ಕಳ, ಕಡಂದಲೆ ಪ್ರಮುಖವಾದ ಕುಡುಬಿಯರ ವಾಸಸ್ಥಳಗಳಾಗಿವೆ.

ಕುಡುಬಿಯರ ಸಾಮಾಜಿಕ ಹಿನ್ನಲೆ:

ಕುಡುಬಿಯರನ್ನು ಕರ್ನಾಟಕದಲ್ಲಿ ಪ್ರವರ್ಗ-1 ಹಿಂದುಳಿದ ವರ್ಗ ಪಟ್ಟಿಯಲ್ಲಿ ಸೇರಿಸಲಾಗಿದೆ ಪ್ರಸ್ತುತ ಆ ವರ್ಗಕ್ಕೆ ಸಿಗಬಹುದಾದ ಪ್ರಯೋಜನವನ್ನು ಪಡೆಯುತ್ತಿದ್ದಾರೆ. ಈ ವರ್ಗವನ್ನು ಮಿಸಲಾತಿಯ ಪಟ್ಟಿಯಲ್ಲಿ ಸೇರಿಸಬೇಕು ಎಂಬ ವಾದ ಈ ಸಮುದಾಯದ ಮುಖಂಡರಲ್ಲಿ ಇದೆ ಕಾರಣ ಇವರು ಶೈಕ್ಷಣಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದ ಸಮುದಾಯವಾಗಿದೆ.

ಕುಡುಬಿಯರಲ್ಲಿನ ವರ್ಗೀಕರಣ

ಕುಡುಬಿಯರನ್ನು ಪ್ರಮುಖವಾಗಿ ಮೂರು ಪ್ರಧಾನ ಪಂಗಡವಾಗಿ ಗುರುತಿಸಲಾಗಿದೆ.

1. ಗೋವಾ ಕುಡುಬಿಯರು
2. ಜೋಗಿ ಕುಡುಬಿಯರು

ಗೋವಾ ಕುಡುಬಿಯರು: ಕುಡುಬಿ ಸಮುದಾಯದಲ್ಲಿ ಗೋವಾ ಕುಡುಬಿಯರು ಕಟ್ಟಾ ಸಂಪ್ರದಾಯವಾದಿಗಳು. ಕುಡುಬಿಯರು ಹದಿನಾರನೇ ಶತಮಾನದಲ್ಲಿ ಗೋವಾದಿಂದ ಬಂದು ಕರಾವಳಿ ಪ್ರದೇಶದಲ್ಲಿ ನೆಲೆ ನಿಂತಿದಾರೆ. ಇವರು ಗೋವಾವನ್ನು ತೊರೆಯಲು ಕಾರಣಗಳು ಪ್ರಮುಖವಾಗಿ ತಮ್ಮ ಮೂಲ ನೆಲೆಯಲ್ಲಿ ವಿದೇಶಿಗರ ಅಕ್ರಮಣ (ಪೋರ್ಚುಗೀಸರು ಮತ್ತು ಇಂಗ್ಲೀಷರು) ಮತ್ತು ಬಲವಂತದ ಮಂತಾತರ ಗೋವಾ ಕುಡುಬಿಯ ಇಷ್ಟ ದೇವರು ಮಲ್ಲಿಕಾರ್ಜುನ[5].

ಕುಡುಬಿ ಸಮುದಾಯದ ಹಿರಿಯರ ಪ್ರಕಾರ ಗೋವಾಕ್ಕೆ ಅಕ್ರಮಣ ಮಾಡಿದ ವಿದೇಶಿಗರು ತಮ್ಮಗೆ ನಿಷೇಧವಾದ ಆಹಾರ ಪದ್ಧತಿಯನ್ನು ರೂಢಿಸಿಕೊಂಡಿದರು ಇದಕ್ಕೆ ಹೆದರಿದ ಅವರ ಪೂರ್ವಜರು ಬಾಳೆ ಎಲೆಯಲ್ಲಿ ಕುಳಿತು ತಮ್ಮ ಕುಲದೈವದ ಸಹಾಯದಿಂದ ಕಡಲಿನಲ್ಲಿ ಹೀಗೆ ಬಂದು ಸಮುದ್ರದ ಕರೆಯಲ್ಲಿ ಇಳಿದು ನೆಲೆ ನಿಂತವರೇ ಕರೆ ಕುಡುಬಿ, ಕೊಡಿಯಾಲ ಕುಡುಬಿ ಎಂದು ಕರೆಸಿಕೊಂಡರು.

ಜೋಗಿ ಕುಡುಬಿಯರು ತುಳುನಾಡಿನಲ್ಲಿ ಪ್ರಚಲಿತವಿದ್ದ ಜೋಗಿ ಪಂಥವನ್ನು ಸ್ವೀಕರಿಸಿದವರು ಎಂದು ಕಂಡು ಬರುತ್ತದೆ.

ಕರಾವಳಿಯಲ್ಲಿ ನೆಲೆ ನಿಂತ ಕುಡುಬಿಯರಲ್ಲಿ ಮೂರು ಪ್ರಧಾನ ಪಂಗಡಗಳೆಂದು ಗುರುತಿಸಿದರು. ಅವರ ಆಚಾರ-ವಿಚಾರ, ಸಂಸ್ಕೃತಿ ಮತ್ತು ಧಾರ್ಮಿಕ ಕಟ್ಟುಪಾಡುಗಳು ಭಿನ್ನವಾಗಿಲ್ಲ. ಒಂದೇ ಮೂಲ ನೆಲೆಯಿಂದ ಬಂದರೂ ಬೇರೆ ಬೇರೆ ಭೌಗೋಳಿಕ ಪ್ರದೇಶದಲ್ಲಿ ನೆಲೆಸಿದ ಕಾರಣ ಸ್ವಲ್ಪ ಪ್ರಮಾಣದ ಭಿನ್ನತೆ ಕಾಣಬಹುದು. ಇವರ ಭಾಷೆ ಇಂಡೋ ಆರ್ಯನ್ ಭಾಷಾ ಸಮುದಾಯಕ್ಕೆ ಸೇರುವ ಕೊಂಕಣಿ ಕುಡುಬಿಯರಲ್ಲಿ ಪ್ರಾದೇಶಿಕ ಅಥವಾಅ ಸ್ಥಳೀಯ ಭಾಷೆಗಳ ಪ್ರಭಾವದಿಂದು ಬೇರೆ ಬೇರೆ ಪ್ರದೇಶಗಳಲ್ಲಿ ನೆಲೆಸಿರುವ ಸಮುದಾಯದ ಜನರ ಭಾಷೆಯಲ್ಲಿ ಸ್ವಲ್ಪ ಭಿನ್ನತೆ ಇದೆ.

ಗೋವಾ ಕುಡುಬಿಯರಲ್ಲಿ ಬಿಳಿ ವ್ಯವಸ್ಥೆ:

ಗೋವಾ ಕುಡುಬಿಯರಲ್ಲಿ ಪಿತೃಪ್ರಧಾನ ಕುಟುಂಬ ವ್ಯವಸ್ಥೆ ಇದೆ. ಗೋವೆ ಕುಡುಬಿಯರಲ್ಲಿ

1.	ಕುಕ್ತರ್	12.	ಕಡ್ಕಾರ್	23.	ತೊಡ್ಕಾರ್
2.	ಉಣ್ಸಕಾರ್	13.	ಮಾಕ್ಕಾರ್	24.	ಭರ್ಮ್‌ಕಾರ್
3.	ಮತ್ಕಾರ್	14.	ಪತ್ಕಾರ್	25.	ಸಂಸಕಾರ್
4.	ಕದ್ಕರ್	15.	ಶಶ್ವಕಾರ್	26.	ಆಮ್ ಕಾರ್
5.	ಮೊಲ್ಕಾರ್	16.	ದುತ್ಕಾರ್	27.	ಗುಳ್ ಕಾರ್
6.	ವಗ್ನಕಾರ್	17.	ಬಸ್ಕಾರ್	28.	ದೆಕ್ಕಾರ್
7.	ಸಂತಬಗಿ	18.	ಮೊರ್ಕಾರ್	29.	ಭಳ್ಕಾರ್
8.	ಜನಕಾರ್	19.	ನೆವಕಾರ್	30.	ವೈಕರ್
9.	ಗಣಕಾರ್	20.	ವ್ಯೊಸ್ಕಾರ್	31.	ಪೊಲ್ನಾರ್
10.	ಶೈಕಾರ್	21.	ಪಲ್ಕಾರ್	32.	ವಾಗ್ಲೇಕರ್
11.	ಒಣಕ್ಕರ್	22.	ಮನಿಶೀಕರ್		

ಇನ್ನುಳಿದ ಮೂರು ಬಳಿಗಳ ಬಗ್ಗೆ ವಿದ್ವಾಂಸರಲ್ಲಿ ಸ್ಪಷ್ಟತೆ ಇಲ್ಲ. ಇಲ್ಲಿ ಅನೇಕ ಬಳಿಗಳ ಹೆಸರು ಪುನಾರಾವರ್ತನೆಯಾಗಿರಬಹುದು ಎಂದು ಅನೇಕರು ಅಭಿಪ್ರಾಯ ಪಟ್ಟಿದ್ದಾರೆ ಈ ಬಳಿಗಳನ್ನು ಪ್ರಮುಖವಾಗಿ ನಾಲ್ಕು ಕಾರಣಗಳಿಂದ ಉಂಟಾದವು

1. ಕುಲದೇವತೆಗಳಿಗೆ ಸಂಬಂಧಿಸಿದುದು
2. ಪ್ರದೇಶಕ್ಕೆ ಸಂಬಂಧಿಸಿದುದು
3. ವೃತ್ತಿಗೆ ಸಂಬಂಧಿಸಿದ್ದು
4. ಕುಟುಂಬದ ಪೂರ್ವಜರಿಗೆ ಸಂಬಂಧಿಸಿದ್ದು(6).

ಪ್ರೊ.ಎ.ವಿ ನಾವಡರವರು "ಕೊಂಕಣದ ಕುಡುಬಿಯರು" ಎಂಬ ತಮ್ಮ ಕೃತಿಯಲ್ಲಿ ಬಳಿಗಳ ಹೆಸರಿನ ಹಿನ್ನಲೆಯನ್ನು ಈ ಕೆಳಗಿನ ರೀತಿಯಲ್ಲಿ ವಿವರಿಸಿದ್ದಾರೆ(7).

ಬಳಿ	ಹೆಸರಿನ ಹಿನ್ನಲೆ
ಕೊಚ್ಚಿಕಾರು	ಕೊಚ್ಚಿಯಿಂದ ಬಂದವರು
ಪನೇಲ್‌ಕಾರು	ಪನೇಲ್ ಪ್ರದೇಶದಿಂದ ಬಂದವರು
ಕೇಳ್ಕಾರ್	ಬಾಳೆ ಗಿಡಕ್ಕೆ ಸಂಬಂಧಿಸಿದವರು
ಕೊಂದೊಡಿಕಾರ್	ಕೊಂದೂಡಿ ಎಂಬ ಪ್ರದೇಶದಿಂದ ಬಂದವರು
ಸಾಂಪ್ಲಕಾರ್	ಚಿಕ್ಕವರು ಎನ್ನುವ ಭಾವದಿಂದ ಬಂದಿರಬೇಕು
ಮೇಸ್ತಾಲೆ	ಮೆಸ್ತಿ ವೃತ್ತಿಯ ಸಂಬಂಧ
ಅಳಿಕೆಗಾರ್	ಅಳಿಕೆ ಎಂಬ ಪ್ರದೇಶದ ದೇವರನ್ನು ನಂಬಿದವರು
ಮೊಟ್ಕಾರ್	ಮರಕ್ಕೆ ಸಂಬಂಧಿಸಿದವರು
ಗಾಡಿಯಲೆ	ಗಾಡಿಗನ ಸಂತತಿಯವರು
ಜುಂವಾಕಾರ್	ನೇಗಿಲಿನ ಕೆಲಸಕ್ಕೆ ಸಂಬಂಧಿಸಿದವರು

ಈ ರೀತಿಯಲ್ಲಿ ನಾವು ಕುಡುಬಿಯರ ಬಳಿಯ ಹೆಸರು ಬರಲು ಮುಖ್ಯವಾಗಿ

1. ವಾಸಿಸುವ ಪ್ರದೇಶ ಹೆಸರು
2. ಅವರು ಬೆಳೆಯುತ್ತಿದ್ದ ಬೆಳೆಯ ಹೆಸರು
3. ಅವರ ವೃತಿಗೆ ಸಂಬಂಧಿಸಿದ ಹೆಸರು
4. ಹಿರಿಯರಿಗೆ ಸಂಬಂಧ ಪಟ್ಟ ಹೆಸರಿಂದ ಗುರುತಿಸಿ ಹುಟ್ಟಿಕೊಂಡಿದೆ ಎಂಬುದು ತಿಳಿಯುತ್ತದೆ(8).

ಕುಡುಬಿಯರ ಕುಟುಂಬ ವ್ಯವಸ್ಥೆ: ಕುಡುಬಿಯರಲ್ಲಿ ಪಿತೃ ಪ್ರಧಾನ ಕುಟುಂಬ ವ್ಯವಸ್ಥೆ ಇದೆ. ತಂದೆಯ ನಂತರ ಮಗನಿಗೆ ಬಳಿಯು ಮುಂದುವರಿಯುತ್ತದೆ. ಹಿಂದಿನ ಕಾಲದಲ್ಲಿ ಮಹಿಳೆಯರಿಗೆ ಪ್ರಾಮುಖ್ಯತೆ

ಇರಲಿಲ್ಲ. ಮದುವೆಯಾದ ನಂತರ ಆಕೆ ತವರು ಮನೆಯ ಯಾವುದೇ ಸಂಚನ್ನು ಹೊಂದುವ ಅವಕಾಶವಿರಲಿಲ್ಲ.

ಕುಡುಬಿಯರ ವಿವಾಹ ಪದ್ಧತಿ: ಕುಡುಬಿಯರ ಮದುವೆಯಲ್ಲಿ ಪೂರ್ವದಲ್ಲಿ ಪೂರೋಹಿತ ಪಾತ್ರವಿರಲ್ಲ ಕಾಲ ಬದಲಾದಂತೆ ನಂತರದ ಕಾಲದಲ್ಲಿ ಅದು ಒಂದು ಪ್ರಮುಖ ಭಾಗವಾಗಿತು ವಿವಾಹದ ವಯಸ್ಸು ಕೂಡ ಹಿಂದೆಗಿಂತ ಈಗ ಬಹುಬೇಗನೇ ಮಾಡುವುದಿಲ್ಲ. ಇಲ್ಲಿ ಶಿಕ್ಷಣ ಮತ್ತು ಆಧುನೀಕರಣದ ಪ್ರಭಾವವಿದೆ.

ಆಹಾರ ಪದ್ಧತಿ: ಕುಡುಬಿಯರ ಮೂಲದಲ್ಲಿ ಬೇಟೆಯಾಡಿ ಆಹಾರವಾಗಿ ಸೇವಿಸುತ್ತಿದ್ದರು. ಕಾಡು ಪ್ರಾಣಿಗಳನ್ನು ಕೇವಲ ಆಹಾರಕ್ಕಾಗಿ ಮಾತ್ರ ಬೇಟೆಯಾಡುತ್ತಿದ್ದಾರೆ. ಮೋಜಿಗಾಗಿ ಬೇಟೆಯಾಡುವುದು ಕುಡುಬಿಯರಲ್ಲಿ ನಿಷ್ಟಿದ್ಧ. ಕುಡುಬಿಯರು ಸಾಕುಪ್ರಾಣಿಗಳನ್ನು ಆಹಾರವಾಗಿ ಬಳಸುವುದಿಲ್ಲ ಇದಕ್ಕೆ ಕಾರಣ ನಿಗೂಢವಾಗಿದೆ.

ಕುಡುಬಿಯರ ಆರಾಧನಾ ಪದ್ಧತಿ:

ಕುಡುಬಿಯರ ಮೂಲದಲ್ಲಿಯೇ ಮಲ್ಲಿಕಾರ್ಜುನ ದೇವರ ಆರಾಧಕರು ಪೂರ್ವದಲ್ಲಿ ತುಳಸಿಕಟ್ಟೆಯು ಕೇವಲ ಗುರಿಕಾರರ ಮನೆಯಲ್ಲಿ ಇರುತ್ತಿತ್ತು. ಈಗ ಎಲ್ಲರ ಮನೆಯಲ್ಲೂ ತುಳಸಿ ಆರಾಧನೆ ಇದೆ. ಕುಡುಬಿಯರು ತಮ್ಮ ಮೂಲ ದೇವರ ಆರಾಧನೆಯ ಜೊತೆಗೆ ತಾವು ಬಂದು ನೆಲೆ ನಿಂತ ಪ್ರದೇಶದ ದೈವ ದೇವರ ಆರಾಧನೆಯನ್ನು ಮಾಡಿಕೊಂಡು ಬಂದಿರುತ್ತಾರೆ[(9)].

ಕೊಂಪದವು ನಿವಾಸಿ ಶ್ರೀ ಸುದರ್ಶನ್ ಗೌಡರವರ ಪ್ರಕಾರ "ನಮ್ಮ ಸಮಾಜದವರು ಪ್ರಧಾನವಾಗಿ ಮಲ್ಲಿಕಾರ್ಜುನ ಆರಾಧನೆ ಮಾಡುತ್ತಾರೆ. ದೈವರಾಧನೆಗೆ ಸಂಬಂಧಿಸಿದಂತೆ ನಾವು ಯಾವ ಪ್ರದೇಶದಲ್ಲಿ ವಾಸಿಸುತ್ತೇವೆಯಾ ಆ ಪ್ರದೇಶ ದೈವದೇವರ ಆರಾಧನೆ ಮಾಡುತ್ತೇವೆ. ನಮ್ಮಲ್ಲಿ ದೈವರಾಧನೆ ಸಂಬಂಧಿಸಿದ ಹಾಗೆ ಸತ್ಯದೇವತಾ ಆರಾಧನೆ ಪ್ರಧಾನವಾಗಿದೆ".

ಕುಡುಬಿಯರ ಆರಾಧನೆಯಲ್ಲಿ ಗಡಿಕಾಯಿ ಹೊಡೆಯುವ ಪದ್ಧತಿ ಇದೆ. ಇದು ತಮ್ಮ ವಾಸಸ್ಥಳಕ್ಕೆ ದುಷ್ಪಶಕ್ತಿಗಳ ಪ್ರದೇಶ ತಡೆಯುದಕ್ಕಾಗಿ ಮಾಡುತ್ತಾರೆ. ಕುಡುಬಿಯರ ಆರಾಧನೆಯಲ್ಲಿ ಮೂರು ಅಲೌಕಿಕ ಶಕ್ತಿಗಳ ಆರಾಧನೆ ಇದೆ.

1. ಗೋಯೆ ದೈವ
2. ಗಡಿ ದೈವಗಳು
3. ಪಿತೃಗಳ ಆತ್ಮಗಳು[(10)].

ಕುಡುಬಿಯರ ವಾರ್ಷಿಕ ಆಚರಣೆಗಳು:

ಕುಡುಬಿಯರಲ್ಲಿ ಕೂಡ ತಮ್ಮದೇ ಆದ ವಿಶೇಷ ಆಚರಣೆಗಳಿವೆ. ಕುಡುಬಿಯರಲ್ಲಿ ಹೋಳಿ ಆಚರಣೆ ತುಂಬಾ ವಿಶೇಷವಾದದ್ದು. ಮುನ್ನೂರು ಗ್ರಾಮ ಪಂಚಾಯತ್ ವ್ಯಾಪ್ತಿಯ ಕೃಷ್ಣಕೋಡಿ ನಿವಾಸಿ ಶ್ರೀ ಪ್ರವೀಣ್ ರವರ ಪ್ರಕಾರ "ನಮ್ಮ ಸಮುದಾಯದಲ್ಲಿ ಧಾರ್ಮಿಕವಾಗಿ ವಾರ್ಷಿಕ ವಿಶೇಷ ಆಚರಣೆ ಎಂದರೆ ಅದು ಹೊಳಿ ಆಚರಣೆ ಅದನ್ನು ತುಂಬಾ ಅದ್ದೂರಿಯಾಗಿ ಆಚರಿಸಲಾಗುತ್ತದೆ. ಈ ಹೋಳಿ ಆಚರಣೆಯನ್ನು ನಾವು ತಪ್ಪದೆ ಆಚರಿಸುತ್ತೇವೆ".

ಕುಡುಬಿಯರ ವಾರ್ಷಿಕ ಆಚರಣೆಗಳು:

ಕುಡುಬಿಯರಲ್ಲಿ ಆರಾಧನಾ ಕ್ರಮ:

ಗೋವಾ ಕುಡುಬಿಯರಲ್ಲಿ ಪಿತೃ ಸಂಬಂಧಿ ಕೆಂಪಣ್ಣದೇವವನ್ನು ನಂಬುತ್ತಾರೆ. ತೃಪ್ತಿಯ ಜೊತೆಗೆ ಈ ದೇವರ ಆರಾಧನೆ ನಡೆಯುತ್ತದೆ. ಕೃಷಿಯ ಜೊತೆಗೆ ಈ ದೇವರ ಆರಾಧನೆ ನಡೆಯುತ್ತದೆ. ಕೃಷಿಯಲ್ಲಿ ಮೊದಲು ಕುಟುಂಬದ ಯಜಮಾನ ಕೆಂಪಣ್ಣದೇವನನ್ನು ಸುತ್ತಿಸಿ ಮೊದಲನೆಯದಾಗಿ ಬೀಜ ಬಿತ್ತನೆ ಮಾಡಬೇಕು. ಕುಟುಂಬದಲ್ಲಿ ಜಗಳವಿದ್ದರೆ ಅದನ್ನು ಹೋಳಿಹಬ್ಬದ ಸಂದರ್ಭದಲ್ಲಿಯೇ ಸರಿಪಡಿಸಲಾಗುತ್ತದೆ. ಈ ವೈಮನಸ್ಸಿನಿಂದ ಯಜಮಾನ ಬೀಜ ಬಿತ್ತನೆ ಮಾಡದಿದ್ದರೆ ಅದರ ಪರಿಣಾಮ ಇಡೀ ಕುಟುಂಬದ ಮೇಲಾಗುತ್ತದೆ. ಕೆಂಪಣ್ಣ ದೇವನ ಕುರಿತಾದ ಯಾವುದೇ ಕತೆ ಪುರಾಣ ಐತಿಹ್ಯಗಳು ಇಲ್ಲ.

ಕೆಂಪಣ್ಣ ದೇವನ ಕೃಷೆಯಿಂದ ಬೀಜ ಬಿತ್ತನೆ ಮಾಡಿ ಕಟಾವು ಮಾಡಿದ ನಂತರ ಅದನ್ನು ರಾಶಿಹಾಕಿ, ಈ ರಾಶಿಯಲ್ಲಿ ಕೋಳಿ ಹುಂಜವನ್ನು ತಂದು ಬಿಡುತ್ತಾರೆ. ಈ ಹುಂಜ ಒಂದು ತಿಂಗಳವರೆಗೆ ಈ ಕಣದಲ್ಲಿ ಇರಬೇಕು. ನಂತರ ಈ ಹುಂಜವನ್ನು ಗದ್ದೆಗೆ ಬಲಿಕೊಡುತ್ತಾರೆ. ಅ ನಂತರ ಕಟಾವು ಮಾಡಬಾರದು[11].

ಮಲ್ಲಿಕಾರ್ಜುನನ ಆರಾಧನೆ: ಕುಡುಬಿಯರಲ್ಲಿ ಮಲ್ಲಿಕಾರ್ಜುನ ಆರಾಧನೆ ಪ್ರಮುಖವಾದದ್ದು. ಈ ಆರಾಧನೆಯ ಬಗೆ ಅದಕ್ಕೆ ಅವರೇ ಅರ್ಚಕರಾದ ಬಗ್ಗೆ ಒಂದು ಪುರಾಣವಿದೆ. ಗೋವೆಯಲ್ಲಿ ಕುಡುಬಿಯರು ಕಾಡಿನಲ್ಲಿ ಪೊದೆಗಳನ್ನು ಮರಗಳನ್ನು ಕಡಿದು ಸಮತಟ್ಟುಗೊಳಿಸುವಾಗ ಒಂದು ಲಿಂಗ ದೊರೆಯಿತು. ಆ ಲಿಂಗವನ್ನು ಕುಡುಬಿಯರೆಲ್ಲ ಸೇರಿಕೊಂಡು, ದೇವಸ್ಥಾನ ಕಟ್ಟಿ ಅದರಲ್ಲಿ ಸ್ಥಾಪಿಸಿದರು[12].

ಕುಟುಂಬ ವ್ಯವಸ್ಥೆ: ಕುಡುಬಿಯರಲ್ಲಿ ಪಿತೃಪ್ರಧಾನ ಕುಟುಂಬ ವ್ಯವಸ್ಥೆ ಇದೆ. ಅವಿಭಕ್ತ ಕುಟುಂಬ ರಚನೆ. "ಸಾಮಾನ್ಯವಾಗಿ ವೈಯುಕ್ತಿಕ ಭಿನ್ನಾಭಿಪ್ರಾಯದ ಫಲವಾಗಿ ಮದುವೆಯಾದ ಮೇಲೆ ಗಂಡು ಮಗ ಒಂದೇ ಸೂರಿನಡಿ ಇನ್ನೊಂದು ಕೋಣೆಯಲ್ಲಿ ತಂದೆ ತಾಯಿಯರಿಂದ ಪ್ರತ್ಯೇಕವಾಗಿ ವಾಸ

ಮಾಡುತ್ತಾನೆ. ಇದನ್ನು 'ಬೇರೆ ಅಡುಗೆ' ಎಂದು ಅವರು ಕರೆಯುವುದು ಹೀಗೆ ಬೇರೆ ಅಡುಗೆ ಮಾಡಿಕೊಳ್ಳುವುದನ್ನು ಕುಟುಂಬದ ಹಿರಿಯರು ವಿರೋಧಿಸುವುದಿಲ್ಲ ಹೀಗೆ ಪ್ರತ್ಯೇಕವಾದವನಿಗೆ ತಂದೆಯ ಆಸ್ತಿಯಲ್ಲಿ ಪಾಲಿರುವುದಿಲ್ಲ. ಕುಡುಬಿಯರಲ್ಲಿ ಎಲ್ಲಾ ಪ್ರಮುಖ ನಿರ್ಧಾರಗಳನ್ನು ತೆಗೆಕೊಳ್ಳುವುದು ತಂದೆ ತಾಯಿ ಇಲ್ಲದಿದ್ದರೆ ಹಿರಿಯ ಮಗನಿಗೆ ಅಧಿಕಾರವಿರುತ್ತದೆ. ಕುಡುಬಿಯರಲ್ಲಿ ಮನೆಯ ಹಿರಿಯನ ಪಾತ್ರ ಪ್ರಮುಖವಾದದ್ದು[13].

ಒಳಾಡಳಿತ ವ್ಯವಸ್ಥೆ

ಕುಟುಂಬ ಮಟ್ಟದ ನ್ಯಾಯಗಳನ್ನು ಕುಟುಂಬದ ಯಜಮಾನನೇ ನಡೆಸುತ್ತಾರೆ. ಆದರೆ ಬುಡಕಟ್ಟಿಗೆ ಸಂಬಂಧಿಸಿದ ನ್ಯಾಯಗಳಿದ್ದರೆ ಅದನ್ನು ಮೂವರು ಗುರುಗಳ ಸಮ್ಮುಖದಲ್ಲಿಯೇ ಪರಿಹರಿಸಿಕೊಳ್ಳಬೇಕು. ಈ ಮೂವರು ಗುರುಗಳು ಕಲ್ಲಿನ ಮೇಲೆ ಕುಳಿತುಕೊಳ್ಳತ್ತಾರೆ. ಈ ಗುರುಗಳು ಮೂರು ಪ್ರದೇಶದ ಕುಡುಬಿಯರ ಕುಟುಂಬದ ಯಜಮಾನರೇ ಆಗಿರುತ್ತಾರೆ. ಯಾವುದೇ ಮಠಗಳಿಲ್ಲದಿರುವುದರಿಂದ ಧಾರ್ಮಿಕ ಪ್ರತಿನಿಧಿ ಈ ಪಂಚಾಯತಿಯಲ್ಲಿ ಇರುವುದಿಲ್ಲ[14].

ಕುಡುಬಿಯರ ಆಂತರಿಕ ಕಲಹಗಳು, ಹೋಳಿ ಸಂಬಂಧಿ ವ್ಯಾಜ್ಯಗಳು, ಅಕ್ರಮ ಸಂಬಂಧಗಳು, ಅನೈತಿಕ ಸಂಬಂಧ ಕೂದಲು ಕತ್ತರಿಸಿಕೊಂಡರೆ, ಧಾರ್ಮಿಕ ಆಚರಣೆಗಳಿಗೆ ಸಂಬಂಧಿಸಿದಂತೆ ಸಾಮಾನ್ಯವಾಗಿ ಪಂಚಾಯತಿಯನ್ನು ಕರೆಸುತ್ತಾರೆ. ತಿರ್ಮಾನಗಳು ದಂಡದ ರೂಪದಲ್ಲಿ, ಬಹಿಷ್ಕಾರ ರೂಪದಲ್ಲಿ ಇರುತ್ತದೆ. ಅಕ್ರಮ ಸಂಬಂಧದಂತಹ ಅಪರಾಧಕ್ಕೆ ಗಂಡು ಹೆಣ ಇಬ್ಬರಿಗೂ ಬಹಿಷ್ಕಾರದ ಶಿಕ್ಷೆ ಇರುತ್ತದೆ. ಪರಂಪರೆಯ ನಿಯಮವನ್ನು ಮೀರಿದರೆ ದಂಡ ವಿಧಿಸುತ್ತಿದ್ದರು. ಬಹಿಷ್ಕಾರ ಶಿಕ್ಷೆಗೆ ಒಳಗಾದ ಗಂಡನನ್ನು/ಗಂಡಸನ್ನು ಗುರುಗಳು ತೀರ್ಥ ಹಾಕಿ ಶುದ್ಧ ಮಾಡಿ ಒಳಗೆ ಸೇರಿಸಿಕೊಳ್ಳುತ್ತಾರೆ.

ಈ ಹಿಂದೆ ಗಂಡಂಸರಿಗೆ ತಲೆ ಬೋಳಿಸುವ ಶಿಕ್ಷೆ ವಿಧಿಸಲಾಗುತ್ತಿತ್ತು. ಕುಡುಬಿಯರಲ್ಲಿಯೂ ಇಂತಹ ಶಿಕ್ಷೆಯನ್ನು ನೀಡುವುದನ್ನು ಈಗ ನಿಲ್ಲಿಸಲಾಗಿದೆ [15].

ಹೋಳಿ ಹಬ್ಬ:

ಹೋಳಿಯು ಕುಡುಬಿಯರಿಗೆ ತುಂಬಾ ಪ್ರಿಯವಾದ ಹಬ್ಬ. ಗೋವೆ ದೇವರ ಪ್ರೀತಿಗಾಗಿ ಐದು ದಿನಗಳ ಕಾಲ ನಡೆಯುವ ಸಡಗರದ ಹಬ್ಬ ಇದು. ಇಲ್ಲಿ ಹಾಡು-ಕುಣಿತಗಳೊಂದಿಗೆ ದೇವರ ಸೇವೆ ಮಾಡಲಾಗುತ್ತದೆ. ಶಿವರಾತ್ರಿಯ ಮುಂದಿನ ಏಕಾದಶಿಯ ದಿನದಿಂದ ಈ ಹಬ್ಬ ಆರಂಭವಾಗುತ್ತದೆ. ಈ ಹಬ್ಬದು ವಾಡೆಯ ಬುದ್ಯಂತನ ಮನೆಯಲ್ಲಿ ನಡೆಯುತ್ತದೆ.

ಹಬ್ಬದ ಆಚರಣೆಯ ಬಗ್ಗೆ: ಮೇಳದ ಮನೆಯ ಯಜಮಾನ ತನ್ನ ಕುಟುಂಬದ ಬಾಂಧವರಿಗೆ ಮೇಳಕ್ಕೆ ಬರುವಂತೆ ಹೇಳಿ ಬಂದಿರುತ್ತಾನೆ. ಏಕದಶಿಯ ದಿನ ಸಾಯಂಕಾಲ ಹೋಳಿ ಕುಣಿತ ಮಾಡುವವರು

ಮಿಂದು ಮೇಳದ ಮನೆಗೆ ಬರುತ್ತಾರೆ. ಈ ಹಬ್ಬದಲ್ಲಿ ವೇಷ ಭೂಷಣ ವಿಶೇಷವಾಗಿರುತ್ತದೆ. ಆ ದಿನ ವಾಡೆಯ ಬುದ್ಯಂತನ ಮನೆಯಲ್ಲಿ ಅತಿಥಿಗಳಿಗೆ ಎಲ್ಲಾ ರೀತಿಯ ಉಪಚಾರ ಮಾಡಲಾಗುತ್ತದೆ. ಈ ಹಬ್ಬವು 5 ದಿನ ನಡೆದರೆ ಈ ಸಮಯದಲ್ಲಿ ಮಾಂಸ–ಮೀನು ಸೇವನೆ ನಿಷಿದ್ಧ.

ಹೋಳಿ ಕುಣಿತಗಾರರ ವೇಷಭೂಷಣ:

"ಮಂಡ್ಕಾರ (ಯಜಮಾನ–ಅರ್ಚಕ) ಮನೆಯ ನಡು ಅಂಗಳದಲ್ಲಿರುವ ತುಳಸಿಕಟ್ಟೆಯ ಎದುರು ಗೋವೆ ದೇವರನ್ನು ಇರಿಸಿ ಕಾಲುದೀಪ ಬೆಳಗಿ ಮಂಗಳಾರತಿ ಮಾಡುವರು. ಮೇಳದ ಕುಣಿತಗಾರರು ಅಲಂಕೃತರಾಗಿ ಕೈಯಲ್ಲಿ ಗುಮ್ಮಟೆ ಹಿಡಿದು ಸಿದ್ಧರಾಗುವರು. ಕಾಲಿಗೆ ಗೆಜ್ಜೆ, ಸೊಂಟದ ಕೆಳಗೆ ಕೆಂಪು ಅಥವಾ ನೀಲಿ ಬಣ್ಣದ ಜರಿ ಸೀರೆಯನ್ನು ಕಚ್ಚೆ ಹಾಕಿ ಉಡುವರು, ಎದೆಗೆ ಬಿಳಿ ಬಣ್ಣದ ರವಕೆ–ನೆರಿಯಂಗಿ, ಕೊರಳಿಗೆ ಬೆಳ್ಳಿಯ ನೇವಳ(ಮೂಳೆ ಸರ) ಬಿಳಿಯ ನೆರಿಯರಿಗಿಯ ಮೇಲೆ ಕತ್ತರಿಯ ಆಕಾರದಲ್ಲಿ ಇಳಿ ಬಿಟ್ಟು ಕೆಂಪು ಶಾಲು, ಸೊಂಟಕ್ಕೆ ಅಡ್ಡ ಬಿಗಿದು ಬಣ್ಣದ ಶಾಲು ಲೋಹದ ಬಳೆ, ತಲೆಗೆ ಕೆಂಪು ಪಟ್ಟಿಯ ಅದರ ಮೇಲೆ ಕನಕಾಂಬರದ ಹೂವಿನ ದಂಡೆ ಮುಂಡಾಸಿಗೆ, ಸಿಕ್ಕಿಸಿದ ಹಟ್ಟಿ ಬಳಿ ಮುಂಡಾಸು ಹಟ್ಟಿ ಮುದ್ದ ಹಕ್ಕಿಯ ಬಣ್ಣ ಬಣ್ಣದ ಗರಿ–ಇವಿಷ್ಟು ಅವರ ಅಲಂಕಾರ[16].

"ಹೋಳಿ ಕುಡುಬಿಯರ ಶ್ರೇಷ್ಠ ಹಬ್ಬ. ಬಹುಶಃ ಮರಾಠಿ ಮೂಲದ ಎಲ್ಲರಿಗೂ ಈ ಹೋಳಿ ಬಹುಮುಖ್ಯ ಹಬ್ಬ. ಆದರೆ ಈ ಹಬ್ಬದಲ್ಲಿ ಇವರು ಆಡುವ ಹೋಳಿ ಸಗ್ಮಾ ನೃತ್ಯ ಇವರ ಮೂಲದ್ದಾದರೂ ಆ ನೃತ್ಯಕ್ಕೆ ಬಳಸುವ ಗುಮಟೆ ಮಾತ್ರ ನಮ್ಮದು. ನಮ್ಮ ಹಾಲಕ್ಕಿ ಒಕ್ಕಲಿಗರಲ್ಲಿ ತುಂಬಾ ಜನ ಪ್ರಿಯವಾಗಿರುವ ಗುಮಟೆ ಕುಡುಬಿಯರ ನೃತ್ಯಕ್ಕೆ ಒಂದು ಹೊಸ ಅಯಾಮವನ್ನು ತಂದು ಕೊಟ್ಟಿದೆಯೆಂದರೆ ತಪ್ಪಲ್ಲ" [17].

ಈ ಹೋಳಿ ಹಬ್ಬದ ಸಂದರ್ಭದಲ್ಲಿ ಕೋಲಾಟವಾಡುತ್ತಾರೆ ಮನೆಯಲ್ಲಿ ಜೋಪಾನವಾಗಿಟ್ಟು ಕೊಂಡ ಸಂಗೀತ ಪರಿಕರ ಗುಮ್ಮಟೆಯನ್ನು ಈ ದಿನ ಹೊರಗೆ ತೆಗೆಯುತ್ತಾರೆ. ಈ ಕುಣಿತದಲ್ಲಿ ಬರುವ ಹಾಡಿನ ಆರಂಭದ ಸಾಲು (ಒಂದು ಸೊಲ್ಲು) ಕೋತ್ ಗುಲ್ಕಾರ ಮೊದಲಿಗೆ ಹೇಳುತ್ತಾನೆ. "ಗೋವೆ ಸಿರೋ ಹೂಮರಾವತಿ ರಾಮ ಪಿರಂಗೆಲ್ಲೆ ನಾಗರಿರೂ ಹೊರೆ ಪಿರೋಗೆ ಓ ಹೊರೆ ಪಿರಂಗೆ ಬಲವಂತ ಗಾಮ್ ಆನಿ ಪಿರಂಗೆ ಬಲವಂತಾ ಏರೇ ಬಯಸನು ನಳತಿ ಸೌದೇರಿ ರೋವತ್ತರೆಲ್ಲಾ[18].

ಈ ಸಾಲುಗಳನ್ನು ಗುರ್ಕಾರ ಹೇಳುತ್ತಾನೆ. ವೃತ್ತಾಕಾರದಲ್ಲಿ ಒಳಗೊಂದು ಸುತ್ತು, ಹೊರಗೊಂದು ಸುತ್ತು ಎದುರುಬದುರಾಗಿ ನಿಂತು ಹಳಡನ್ನು ಪುನರಾವೃತ್ತಿ ಮಾಡುತ್ತಾ ಕೋಲು ಹೊಯ್ಯುವರು. ಈ ಹಾಡಿನಲ್ಲಿ ಗೋವೆಯ ದವರ ಹೂಗಳಿಕೆ ಇರುತ್ತದೆ. ವಲಸೆ ಬಂದನಂತದಲ್ಲಿ ಈ ಪ್ರದೇಶದ ಮಂದರ್ತಿ, ಕೊಲ್ಲೂರು, ಬಾರ್ಕೂರು ದೇವರ ಸುತ್ತಿಯಾ ಇರುತ್ತದೆ. ಹಾಡಿನಲ್ಲಿನ ಏರಿಳಿತಕ್ಕೆ ತಕ್ಕಂತೆ ಕುಣಿತದ ವೇಗವು ಸಮಾನವಾಗಿ ಸಾಗುತ್ತದೆ[19].

ಈ ಹಾಡಿನಲ್ಲಿ ರಾಮಾಯಾಣ, ಮಹಾಭಾರತ, ಮೌಖಿಕವಾಗಿ ಬಂದಿರುವ ಅವರ ಪುರಾಣ ಇರುತ್ತದೆ. ಈ ಹಾಡುಗಳು ಕೊಂಕಣಿಯಲ್ಲಿರುತ್ತದೆ.

ಗುಮ್ಮಟೆ: ಗುಮ್ಮಟೆ ಅಥವಾ ಗುಮ್ಮಟ್ ಒಂದು ಚರ್ಮ ವಾದ್ಯ. ಆವೆ ಮಣ್ಣಿನಿಂದ ಮಾಡಿದ್ದು. ಒಂದೆಡೆ ಅಗಲ ಬಾಯಿಯಿರುತ್ತದೆ. ಇನ್ನೊಂದು ಕಡೆಯೂ ಬಾಯಿ ತೆರೆದಿರುತ್ತದೆ. ಅಗಲ ಬಾಯಿಗೆ ಉಡದ ಚರ್ಮವನ್ನು ಹೊದಿಸಲಾಗಿರುತ್ತದೆ. ಇನ್ನೊಂದು ಬದಿಯ ಸಣ್ಣ ಬಾಯಿ ಗಾಳಿ ಸಂಚಾರಕ್ಕೆ ಅ ಮೂಲಕ ಧ್ವನಿಯ ತರಂಗ ತಡೆಗೆ ಅವಕಾಶ ಮಾಡಿಕೊಡುತ್ತದೆ(20).

"ಹೋಳಿಯ ಮೇಳದಲ್ಲಿ ಕೆಲವೊಂದು ಕಟ್ಟುಪಾಡುಗಳಿವೆ. ಹೋಳಿ ಹಬ್ಬವು ಒಟ್ಟು ಹತ್ತು ದಿನಗಳ ವರೆಗೆ ನಡೆಯುತ್ತದೆ.

1. ಮೇಳ ಕಟ್ಟುವವರು ಒಂದೇ ಘರಕ್ಕೆ ಸಂಬಂಧಿಸಿದವರಾಗಿರಬೇಕು.
2. ಮೇಳದ ಯಜಮಾನನ ಮಾತನ್ನು ಉಳಿದವರು ಮೀರುವಂತಿಲ್ಲ.
3. ಹೋಳಿ ಆರಂಭದ ದಿನ ಅರಿಶಿನ ಸ್ನಾನದ ನಂತರ ಹೋಳಿ ಕುಣಿತ ಮುಗಿಯುವವರೆಗೆ ಅವರು ಸ್ನಾನ ಮಾಡಬಾರದು.
4. ಹೋಳಿ ಕುಣಿತ ಮುಗಿಯುವವರೆಗೆ ಮುಡಿದ ಹೂವನ್ನು ಬದಲಾಯಿಸಬಾರದು.
5. ಮೇಳದವರಿಗೆ ಬಸಳೆ ಸಾರಿನಲ್ಲಿ ಊಟ ನೀಡಬಾರದು.
6. ತಳಿಗೆಯಲ್ಲಿ ಸಿಕ್ಕಿರುವ ಕಾಯಿಯನ್ನು ಕದ್ದು ತಿನ್ನಬಾರದು ಆ ರೀತಿ ತಿಂದರೆ ಒಂದು ಕಾಯಿಗೆ ಇಂತಿಷ್ಟು ಕಾಯಿ ಎಂದು ದಂಡವನ್ನು ನೀಡಬೇಕು.
7. ಮೇಳ ಕಟ್ಟಿದವರಿಗೆ ಸೂ ತಕದ ಸುದ್ದಿಯನ್ನು ಹೇಳಬಾರದು(21).

ಮಂಗಳೂರು ತಾಲೂಕಿನ ನೇತ್ರಾವತಿ ನದಿಯ ತೀರದಲ್ಲಿನ ಕುತ್ತಾರ್ ಎಂಬ ಪ್ರದೇಶದ ಕೃಷ್ಣ ಕೋಡಿಯಲ್ಲಿ ಹೋಳಿ ತುಂಬಾ ವಿಶೇಷ ಇಲ್ಲಿ ಹಿಂದಿನ ಕಾಲದಿಂದಲೂ ಹೋಳಿಯಲ್ಲಿ ಮಹಿಳೆಯರ ಭಾಗವಹಿಸುವಿಕೆ ನಿಷೇಧವಿದೆ.

ಕುಡುಬಿಯರಲ್ಲಿ ದೈವಾರಾಧನೆ:

ಕೊಂಪದವು ನಿವಾಸಿ ಶ್ರೀ ಸುದರ್ಶನ್ ರವರ ಪ್ರಕಾರ "ನಮ್ಮ ಸಮುದಾಯ ಮೂಲದಲ್ಲಿ ದೈವಾರಾಧನೆ ಇಲ್ಲ. ಆದರೆ ತಾವು ಬಂದು ನಿಂತ ಪ್ರದೇಶದಲ್ಲಿ ಆಗಲೇ ಆರಾಧಿಸುವ ದೈವಗಳ ಆರಾಧನೆಯನ್ನು ತಾವು ಮುಂದುವರಿಸಿಕೊಂಡು ಹೋಗುತ್ತೇವೆ" ಎಂದಿದ್ದಾರೆ.

ಗೋವೆಯಿಂದ ವಲಸೆ ಬಂದ ಕುಡುಬಿಯರು ಸ್ಥಳೀಯ ಅಖಿಲಭಾರತೀಯ ದೇವ ದೇವರಿಗೆ ನಡೆದುಕೊಳ್ಳುವಂತೆ ಇಲ್ಲಿನ ಭೂತಗಳಿಗೂ ಆರಾಧನೆ ಸಲ್ಲಿಸುತ್ತಾರೆ. ತಮ್ಮ ಬದುಕಿನಲ್ಲಿ ಬರುವ ರೋಗರುಜಿನಗಳಿಂದ ಮುಕ್ತಿ ಪಡೆಯಲು ಭೂತಗಳನ್ನು ದೇವರ ಧೂತರುಗಳಾಗಿ ಆರಾಧಿಸುತ್ತಾರೆ. ಇವರಲ್ಲಿ ಸತ್ಯದೇವತೆ, ಶಿವರಾಯ, ರಾಹು, ಗುಳಿಗ, ಕೆಂಪಣ್ಣ, ಅಪ್ರಿಭೂತಳಿಗೆ ಬೇರೆಯವರಿಂದ

ಬಲಿಕೊಡಿಸುತ್ತಾರೆ. ಇವರು ತಾವು ವಾಸವಿರುವ ಮನೆಯ ಸರಹದ್ದಿನೊಳಗೆ ಸ್ಥಾಪಿಸದೆ ಅನಿಷ್ಟ ಶಕ್ತಿಗಳು ಪ್ರವೇಶಿಸಿದಂತೆ ಕಾವಲು ಕಾಯುವುದಕ್ಕಾಗಿ ಮನೆಯ ಹೊರ ವಲಯದಲ್ಲಿ ನೆಲೆ ನೀಡಿರುತ್ತಾರೆ[22].

ಕುಡುಬಿಯರ ಜೀವನಾವರ್ತನದ ಆಚರಣೆಗಳು

ಮದುವೆ ಪದ್ಧತಿ:

ಗೋವಾ ಕುಡುಬಿಯರ ಮದುವೆಗಳಲ್ಲಿ ವರನು ವಧುವನ್ನು ನೋಡುವ ಕ್ರಮವಿರಲಿಲ್ಲ. ಕುಟುಂಬದ ಹಿರಿಯರು ಹೆಣ್ಣನ್ನು ನೋಡಿ ಮದುವೆ ನಿರ್ಧರಿಸುತ್ತಾರೆ. ಕುಡುಬಿಯರಲ್ಲಿ ವಿಶೇಷವೆಂದರೆ ವಧುದಕ್ಷಿಣೆಯ ಪದ್ಧತಿ ಬಳಕೆಯಲ್ಲಿದೆ. ಕುಡುಬಿಯರಲ್ಲಿ ತೆರ (ವಧುದಕ್ಷಿಣೆ) ವಸ್ತುವಿನ ರೂಪದಲ್ಲಿ ಕೊಡುತ್ತಾರೆ. ಮತ್ತು ದೇವರ ಮಾರ್ಯಾದೆಯೆಂದು ಇಪ್ಪತ್ತೈದು ರೂಪಾಯಿಗಳನ್ನು ಹೆಣ್ಣಿನ ಕಡೆಯ ಯಜಮಾನನಲ್ಲಿ ಕೊಡುತ್ತಾರೆ.

ಗೋವಾ ಕುಡುಬಿಯರ ಮದುವೆಯಲ್ಲಿ ಈ ಕೆಲವು ನಿಯಮಗಳನ್ನು ಪಾಲಿಸುತ್ತಾರೆ.

1. ಸಮಾನ ಬಳಿಗಳಲ್ಲಿ ಮದುವೆ ನಿಷಿದ್ಧ
2. ಸಮಾನ ದೈವವನ್ನು ಆರಾಧನೆ ಮಾಡುವ ಕುಟುಂಬಗಳಲ್ಲಿ ಮದುವೆಯಾಗುವುದಿಲ್ಲ.
3. ಗಂಡು, ಹುಡುಗಿಯನ್ನು ನಿರ್ಧರಿಸಬಾರದು ತಂದೆ, ಮಾರಕ್ಕಾರ ಮತ್ತು ಹಿರಿಯರು ನಿರ್ಧರಿಸಬೇಕು.
4. ಹೋಳಿ ಕುಣಿತ ಮತ್ತು ತಮ್ಮ ಬುಡಕಟ್ಟಿನ ಇತರ ಕಲೆಗಳನ್ನು ತಿಳಿದಿರುವ ಹುಡುಗನನ್ನೇ ಆಯ್ಕೆ ಮಾಡುವುದು.
5. ಹುಡುಗ ಮತ್ತು ಹುಡುಗಿ ಬೇಟೆಯಾದರೆ ಮದುವೆ ಸಂಬಂಧ ಮುರಿದು ಬೀಳುತ್ತದೆ[23].
   ಕುಡುಬಿಯರ ಬಗ್ಗೆ ಬಹುತೇಕ ಅಧ್ಯಯನದಲ್ಲಿಯೂ ಬಾಲ್ಯ ವಿವಾಹವಿಲ್ಲ ಎಂದೇ ಹೇಳಲಾಗಿದೆ. ಇದಕ್ಕೆ ಕಾರಣ ಅವರಲ್ಲಿನ ತೆರಕೊಡುವ ಪದ್ಧತಿಯಂತೆ.

ಹುಟ್ಟು:

ಕುಡುಬಿಯರಲ್ಲಿ ಬೇರೆ ಸಮಾಜದಲ್ಲಿರುವಂತೆ ಚೊಚ್ಚಲ ಹೆರಿಗೆಗೂ ತಾಯಿಯ ಮನೆಗೆ ಹೋಗುವ ಕ್ರಮವಿಲ್ಲ ಗಂಡನ ಮನೆಯಲ್ಲಿಯೇ, ಕಟ್ಟಲಾದ ತಾತ್ಕಾಲಿಕ ಗುಡಿಸಲಿನಲ್ಲಿ ಇರಿಸಲಾಗುತ್ತೆ. ಅಲ್ಲಿಯೇ ಹೆರಿಗೆಯಾಗುತ್ತದೆ. ಇವರಲ್ಲಿ 11 ದಿನ ಹೆರಿಗೆಯ ಸೂತಕವಿರುತ್ತದೆ. ಅಷ್ಟು ದಿನ ಆಕೆಯು ಆ ಗುಡಿಸಲಿನಲ್ಲಿಯೇ ವಾಸವಾಗಿರಬೇಕು. 11ನೇ ದಿನ ಸ್ನಾನಮಾಡಿದ ಸಮುದಾಯದ ಗುರಿಗಾರನ ಮತ್ತು ದೇವಾಲಯಕ್ಕೆ ಹೋಗಿ ಬಂದ ನಂತರವೇ ಶುದ್ಧವಾಯಿತೆಂದು ನಂಬುತ್ತಾರೆ. ಬಾಣಂತಿಯ ತಾಯಿಯು ಒಂದಿನ ಕಾಲದಲ್ಲಿ ಮಗಳ ಮನೆಗೆ ಒಂದು ಅಕ್ಕಿ, ತೆಂಗಿನಕಾಯಿ, 5 ರೂಪಾಯಿ ವೀಳ್ಯಯದೆಲೆ, ಅಡಿಕೆ ಕೊಟ್ಟು ಹೋಗುತ್ತಿದ್ದರು. ಮಗುವಿಗೆ ಮೂರು ತಿಂಗಳ ಕೊನೆಯಲ್ಲಿ ಅಜ್ಜಿ ಮಗುವಿನ ಕಿವಿಯಲ್ಲಿ ಮೂರು ಸಲ ಹೆಸರನ್ನು ಹೇಳುವಳು[24].

ಸಾವು:

ಸಾವಿನ ಸುದ್ದಿಯನ್ನು ಕುಟುಂಬದ ಎಲ್ಲರಿಗೂ ತಿಳಿಸಲಾಗುತ್ತದೆ. ಹೆಣವನ್ನು ತೆಗೆಯ ಬೇಕಾದರೆ ಆ ಕುಟುಂಬದ ಹೊರ ಸಂಬಂಧಿಗಳು ಬರಲೇಬೇಕು. ಎಲ್ಲಾರು ಬಂದ ನಂತರವೇ ತುಳಸಿ ಕಟ್ಟೆಯ ಹತ್ತಿರ ಇರಿಸಿ ಎಣ್ಣೆ ಹಚ್ಚಿ, ಸ್ನಾನ ಮಾಡಿಸಿ ಬಟ್ಟೆ ತೊಡಿಸುತ್ತಾರೆ. ಗೋವಾ ಕುಡುಬಿಯರಲ್ಲಿ ಹೆಣವನ್ನು ಸುಡುವ ಕ್ರಮವಿದೆ. ಶವಸಂಸ್ಕಾರಕ್ಕೆ ಹೋದವರು ಹಿಂತಿರುಗಿ ಬರುವಾಗ ಕಾಲಿಗೆ ಹರಶಿನ ನೀರು ಹಾಕಿಕೊಂಡ ನಂತರವೇ ಮನೆಗೆ ಬರಬೇಕು. ಸತ್ತ ಏಳನೇ ದಿನಸಕ್ಕೆ ಗ್ರಾಮದವರು ಶವ ಸಂಸ್ಕಾರದಲ್ಲಿ ಭಾಗವಹಿಸಿದವರೆಲ್ಲರೂ ಬಂದು ಶುದ್ಧ ಕಾರ್ಯದಲ್ಲಿ ಭಾಗವಹಿಸಬೇಕು. ಒಂಭತ್ತನೇ ದಿವಸ ಪಾತ್ರಿಯನ್ನು ಕರೆಸಿ ಜರೆನಿಯನ್ನು ಬಂದೋಬಸ್ತು ಮಾಡುತ್ತಾರೆ. ಮೂರು ತಿಂಗಳು ಕಳೆದ ನಂತರ ಅದೇ ಪಾತ್ರಿಯನ್ನು ಕರೊ ಜಕಿನಿಯನ್ನು ಒಳ ಸೇರಿಸುವ ಕಾರ್ಯಕ್ರಮವನ್ನು ನಡೆಸುತ್ತಾರೆ.

ಪ್ರಸವ ಸಂದರ್ಭದಲ್ಲಿ ತೀರಿಕೊಂಡರೆ ಹೆಣವನ್ನು ಗಡಿಯಹೊರಗೆ ತೆಗೆದುಕೊಂಡು ಹೋಗಿ ಹೂಳುತ್ತಾರೆ(25).

ಕೊಲೆ-ಸತ್ತವರಿಗೆ ಹಬ್ಬ:

ಆಕಸ್ಮಿಕವಾಗಿ ಸಾವಿಗೆ ಒಳಗಾದವರು ಪ್ರೇತಗಳಾಗುತ್ತಾರೆ ಎಂಬ ನಂಬಿಕೆ ಕುಡುಬಿಯಲ್ಲಿಯೂ ಇದೆ. ಈ ಪ್ರೇತಗಳಿಗೆ 'ಕೊಲೆ' ಎಂಬ ಉಪಚಾರವನ್ನು ವರ್ಷಕ್ಕೊಮ್ಮೆ ನಡೆಸಲಾಗುತ್ತದೆ ಇದನ್ನು ಪ್ರೇತಗಳಿಗೆ ಉಣಬಡಿಸುವ ಹಬ್ಬ ಎಂದು ಕರೆಯಬಹುದು. ಇದಕ್ಕೆ ನಕ್ಷತ್ರ, ತಿಥಿ, ದಿನ ನೋಡುವ ಸಂಪ್ರದಾಯವಿಲ್ಲ. ಬೇಸಿಗೆಯಲ್ಲಿ ತಮ್ಮಗೆ ಅನುಕೂಲವಾದ ದಿನ ಈ ಹಬ್ಬವನ್ನು ನಡೆಸುತ್ತಾರೆ. ಕುಟುಂಬದಲ್ಲಿ ಸತ್ತಿರುವ ಸಂಖ್ಯೆಗೆ ಸಮಾನವಾಗಿ ಅಷ್ಟೇ ಸಂಖ್ಯೆಯ ಜನರನ್ನು 'ಕೊಲೆ'ಗೆ ನಿಲ್ಲಿಸಬೇಕು. ಇಲ್ಲಿ ಮುದುಕರಿಗೆ-ಮುದುಕರು, ಯುವಕರಿಗೆ-ಯುವಕರು, ಯುವತಿಯರಿಗೆ-ಯುವತಿಯರು ಮಕ್ಕಳಿಗೆ-ಮಕ್ಕಳು ಹೀಗೆ ಆದರೆ ಇವರು ಸತ್ತ ಕುಟುಂಬಕ್ಕೆ ಸೇರಿರಬಾರದು. ಇವರಿಗೆ ವಿಶೇಷ ಊಟವನ್ನು ಬಡಿಸಿ ಬಳಿಕ ಮೀಸಲೆಲೆಯನ್ನು ಹೊರಗಿಡಬೇಕು ಅದನ್ನು ಕಾಗೆ ತಿನ್ನಬೇಕು. ಕಾಗೆ ತಿಂದಾಗ ಪ್ರೇತಾತ್ಮಗಳಿಗೆ ತೃಪ್ತಿಯಾಗಿದೆ ಎಂಬುದು ನಂಬಿಕೆ(26).

ಕುಡುಬಿಯರಲ್ಲಿ ವಿಧಿನಿಷೇಧಗಳು:

ಪ್ರತಿಯೊಂದು ಬುಡಕಟ್ಟು ಸಮುದಾಯಗಳಲ್ಲಿ ಇರುವಂತೆ ಕುಡುಬಿಯರಲ್ಲಿಯೂ ಅನೇಕ ವಿಧಿ ನಿಷೇಧಗಳಿವೆ. ಇವುಗಳಿಗೆ ಹಿನ್ನಲೆಯಾಗಿ ಭೌಗೋಳಿಕ, ಪರಿಸರ, ಅಲೌಕಿಕ ನಂಬಿಕೆಗಳು, ಆರಾಧನೆಗಳು ಇತ್ಯಾದಿ ಈ ವಿಧಿನಿಷೇಧಗಳಿಗೆ ಆಯಾ ಸಂಸ್ಕೃತಿಯಲ್ಲಿ ತನ್ನದೇ ಕಾರಣ ಮತ್ತು ಅರ್ಥಗಳಿರುತ್ತದೆ.

ಗೋವಾ ಕುಡುಬಿಯರ ವಿಧಿನಿಷೇಧಗಳನ್ನು

1. ಪ್ರಾಣಿ ಸಂಬಂಧಿ, ನಿಷೇಧಗಳು
2. ಪಕ್ಷಿ ಸಂಬಂಧಿ, ನಿಷೇಧಗಳು

3. ವೃಕ್ಷಬಳ್ಳಿ, ಸಂಬಂಧಿ, ನಿಷೇಧಗಳು ಎಂದು ವರ್ಗೀಕರಿಸಬಹುದು(27).

ಗೋವಾ ಕುಡುಬಿಯರು ಮಿಶ್ರಹಾರಿಗಳಾಗಿದ್ದರು ಅವರಲ್ಲಿ ಅನೇಕ ಪ್ರಾಣಿಗಳ ಸೇವನೆಗೆ ನಿಷೇಧವಿದೆ. ಆ ಪಟ್ಟಿಯಲ್ಲಿ ಊರಹಂದಿ, ಮಂಗ, ಮುಸಿಯಗಳು, ಹುಲಿ, ಸಿಂಹ, ಕಾಡುಕೋಣ, ಚಿರತೆ ಆನೆ, ನರಿ, ಕೋಳ, ಹೆಬ್ಬಾವು ಮತ್ತು ಮನೆಯಲ್ಲಿ ಸಾಕುವ ಪ್ರಾಣಿಗಳು ಸೇರಿವೆ.

ಪಕ್ಷಿ ಸಂಬಂಧಿ ನಿಷೇಧಗಳಲ್ಲಿ ಮನೆಯಲ್ಲಿ ಸಾಕುವ ಕೋಳಿಯನ್ನು ಮತ್ತು ನವಿಲುಗಳ ಸೇವನೆಗೆ ನಿಷೇಧವಿದೆ. ಅಲ್ಲದೇ ಕೋಳಿ ಮೊಟ್ಟೆಯ ಸೇವನೆಯ ನಿಷೀದ್ಧವಾಗಿದೆ. ಆದರೆ ಆಕಸ್ಮಿಕವಾಗಿ ಬೇಟೆಯ ಸಂದರ್ಭದಲ್ಲಿ ನವಿಲು ಸತ್ತರೆ ತಿನ್ನಬಹುದು. ಬೇಟೆಯಾಡಿ ನವಿಲನ್ನು ತಿನ್ನುವಂತಿಲ್ಲ.

ವೃಕ್ಷ ಸಂಬಂಧಿ, ನಿಷೇಧಗಳಲ್ಲಿ ಕಾಸರ್ಕನ ಮರವನ್ನು ಮನೆಯಲ್ಲಿ ಸುಡಬಾರದು ಮತ್ತು ಮನೆಯೊಳಗೆ ತರಬಾರದು. ಮನೆಯ ಎಲ್ಲಾ ಸದಸ್ಯರಿಗೂ ಎಲ್ಲಾ ರೀತಿಯ ತರಕಾರಿಗಳನ್ನು ಬೆಳೆಸುವ ಅಧಿಕಾರವಿದೆ ಆದರೆ ತೊಂಡೆಕಾಯಿ ಬಳ್ಳಿಯನ್ನು ಮಾತ್ರ ಮನೆಯ ಯಜಮಾನ ನಡೆಬೇಕು.

ಕುಡುಬಿಯರಲ್ಲಿನ ಸಾಮಾಜಿಕ ಸಮಸ್ಯೆಗಳು:

1. ಕುಡುಬಿಯರು ಶೈಕ್ಷಣಿಕವಾಗಿ ತೀರಾ ಹಿಂದುಳಿದವರು
2. ಕುಡುಬಿ ಸಮುದಾಯವು ಗ್ರಾಮಾಂತರ ಪ್ರದೇಶದಲ್ಲಿ ಅಧಿಕವಾಗಿ ವಾಸವಾಗಿದ್ದು ಕೃಷಿ ಮತ್ತು ಕೂಲಿ ವೃತ್ತಿಯನ್ನು ಮಾಡುತ್ತಿದ್ದಾರೆ.
3. ಕುಡುಬಿ ಸಮುದಾಯ ಬಹುಪಾಲು ಜನರಲ್ಲಿ ತಮ್ಮ ಸಮುದಾಯ ಮತ್ತು ಅದರ ಅಭಿವೃದ್ಧಿಯ ದೂರದೃಷ್ಟಿ ಕೋನದ ಕೊರತೆ ಇದೆ.
4. ಕುಡುಬಿ ಸಮುದಾಯದಲ್ಲಿ ಶಿಕ್ಷಣದಿಂದ ದೂರವಾಗುತ್ತಿರುವವರ ಸಂಖ್ಯೆ ಅಧಿಕವಾಗಿಯೇ ಇದೆ.
5. ಈ ಸಮುದಾಯ ಜನರಲ್ಲಿ ಸಂಘಟನೆ ಬಗ್ಗೆ ಯಾವುದೇ ಬಲವು ವ್ಯಕ್ತವಾಗುತ್ತಿಲ್ಲ.

ಈ ರೀತಿಯಲ್ಲಿ ಕುಡುಬಿ ಸಮುದಾಯವು ಸಾಮಾಜಿಕವಾಗಿ ಅನೇಕ ಪ್ರದೇಶದಲ್ಲಿ ತಮ್ಮದೇ ಆದ ವ್ಯವಸ್ಥೆಯಲ್ಲಿ ಬದುಕುತ್ತಿದ್ದಾರೆ.

ಕೊನೆ ಟಿಪ್ಪಣಿ

1. ಕರ್ನಾಟಕ ಬುಡಕಟ್ಟುಗಳು ಸಂಪುಟ–1: ಕುಡುಬಿಯರು ಅಭಯ್ ಕುಮಾರ್ ಕೌಕ್ರಾಡಿ ಪುಟ ಸಂಖ್ಯೆ – 242
2. ಕೊಂಕಣದ ಕುಡುಬಿಯರು: ನಾವಡ.ಎ.ವಿ ಪುಟ ಸಂಖ್ಯೆ –17
3. ಕರ್ನಾಟಕ ಬುಡಕಟ್ಟುಗಳು: ಕುಡುಬಿಯರು: ಅಭಯ್ ಕುಮಾರ್ ಕೌಕ್ರಾಡಿ: ಪುಟ ಸಂಖ್ಯೆ 242
4. ಕೊಂಕಣದ ಕುಡುಬಿಯರು: ನಾವಡ.ಎ.ವಿ ಪುಟ ಸಂಖ್ಯೆ –17
5. ಕರ್ನಾಟಕ ಬುಡಕಟ್ಟುಗಳು: ಕುಡುಬಿಯರು: ಅಭಯ್ ಕುಮಾರ್ ಕೌಕ್ರಾಡಿ: ಪುಟ ಸಂಖ್ಯೆ 243
6. ಕರ್ನಾಟಕ ಬುಡಕಟ್ಟುಗಳು: ಕುಡುಬಿಯರು: ಅಭಯ್ ಕುಮಾರ್ ಕೌಕ್ರಾಡಿ: ಪುಟ ಸಂಖ್ಯೆ 256
7. ಕೊಂಕಣದ ಕುಡುಬಿಯರು: ನಾವಡ.ಎ.ವಿ ಪುಟ ಸಂಖ್ಯೆ –15
8. ಕರ್ನಾಟಕ ಬುಡಕಟ್ಟುಗಳು ಸಂಪುಟ–1 ಪುಟ ಸಂಖ್ಯೆ –256
9. ಕೊಂಕಣದ ಕುಡುಬಿಯರು: ನಾವಡ.ಎ.ವಿ ಪುಟ ಸಂಖ್ಯೆ –29
10. ಕರ್ನಾಟಕ ಬುಡಕಟ್ಟುಗಳು: ಕುಡುಬಿಯರು: ಅಭಯ್ ಕುಮಾರ್ ಕೌಕ್ರಾಡಿ: ಪುಟ ಸಂಖ್ಯೆ 257
11. ಕರ್ನಾಟಕ ಬುಡಕಟ್ಟುಗಳು ಕುಡುಬಿಯರು: ಪುಟ ಸಂಖ್ಯೆ –258
12. ಕರ್ನಾಟಕ ಬುಡಕಟ್ಟುಗಳು ಪುಟ ಸಂಖ್ಯೆ –259
13. ಕೊಂಕಣದ ಕುಡುಬಿಯರು: ನಾವಡ.ಎ.ವಿ ಪುಟ ಸಂಖ್ಯೆ –265
14. ಕರ್ನಾಟಕ ಬುಡಕಟ್ಟುಗಳು ಕುಡುಬಿಯರು: ಪುಟ ಸಂಖ್ಯೆ –265
15. ಕೊಂಕಣದ ಕುಡುಬಿಯರು: ನಾವಡ.ಎ.ವಿ ಪುಟ ಸಂಖ್ಯೆ –27
16. ಕುಡುಬಿಯರ ಜಾನಪದ ಮಾಲೆ–10: ನಾವಡ.ಎ.ವಿ ಪುಟ ಸಂಖ್ಯೆ –15
17. ಜಾನಪದ ಸಾಹಿತ್ಯ ದರ್ಶನ–17: ಕುಡುಬಿಯರು ಕುಣಬಿಯರು ಬೋರಲಿಂಗಯ್ಯ.ಹಿ.ಚ. ಪುಟ ಸಂಖ್ಯೆ–104 ಮತ್ತು 105
18. ಕುಡುಬಿಯರು ಜಾನಪದ ಮಾಲೆ–10: ನಾವಡ.ಎ.ವಿ ಪುಟ ಸಂಖ್ಯೆ –16
19. ಕುಡುಬಿಯರು ಜಾನಪದ ಮಾಲೆ–10: ನಾವಡ.ಎ.ವಿ ಪುಟ ಸಂಖ್ಯೆ –17
20. ಕುಡುಬಿಯರು ಜಾನಪದ ಮಾಲೆ–10: ನಾವಡ.ಎ.ವಿ ಪುಟ ಸಂಖ್ಯೆ –19
21. ಕರ್ನಾಟಕ ಬುಡಕಟ್ಟುಗಳು: ಕುಡುಬಿಯರು: ಪುಟ ಸಂಖ್ಯೆ –263
22. ಕೊಂಕಣದ ಕುಡುಬಿಯರು: ನಾವಡ.ಎ.ವಿ ಪುಟ ಸಂಖ್ಯೆ –37
23. ಕರ್ನಾಟಕ ಬುಡಕಟ್ಟುಗಳು: ಕುಡುಬಿಯರು: ಪುಟ ಸಂಖ್ಯೆ –251
24. ಕುಡುಬಿಯರು ಜಾನಪದ ಮಾಲೆ–10: ನಾವಡ.ಎ.ವಿ ಪುಟ ಸಂಖ್ಯೆ –06
25. ಕರ್ನಾಟಕ ಬುಡಕಟ್ಟುಗಳು: ಕುಡುಬಿಯರು: ಅಭಯ್ ಕುಮಾರ್ ಕೌಕ್ರಾಡಿ: ಪುಟ ಸಂಖ್ಯೆ 254

26. ಕುಡುಬಿಯರು ಜಾನಪದ ಮಾಲೆ–10: ನಾವಡ.ಎ.ವಿ ಪುಟ ಸಂಖ್ಯೆ –21 ಮತ್ತು 22
27. ಕರ್ನಾಟಕ ಬುಡಕಟ್ಟುಗಳು: ಕುಡುಬಿಯರು: ಅಭಯ್ ಕುಮಾರ್ ಕೌಕ್ರಾಡಿ: ಪುಟ ಸಂಖ್ಯೆ 264 ಮತ್ತು 265

ಅಧ್ಯಾಯ-೦೩

ಕುಡುಬಿ ಸಮುದಾಯದ

ಆರ್ಥಿಕ ಸ್ಥಿತಿಗತಿಗಳು

ಅಧ್ಯಾಯ–3

3.1 ಕುಡುಬಿ ಸಮುದಾಯದ ಆರ್ಥಿಕ ಸ್ಥಿತಿಗತಿ:

ಕುಡುಬಿ ಸಮುದಾಯದ ಬಹು ಸಂಖ್ಯೆಯ ಕುಟುಂಬಗಳು ಗ್ರಾಮಾಂತರ ಪ್ರದೇಶದಲ್ಲಿಯೇ ವಾಸಿಸುತ್ತಿದ್ದಾರೆ. ಇವರ ವೃತ್ತಿ ಕೃಷಿ ಮತ್ತು ಕೃಷಿ ಭೂಮಿಯಲ್ಲಿ ಕೂಲಿ ಕೆಲಸ ಮಾಡುವುದು ಇವರಲ್ಲಿ ಕೆಲವು ಜನರು ಸ್ವಂತ ವ್ಯಾಪಾರ ಮಾಡಿಕೊಂಡು ಸ್ಥಿತಿವಂತರಾಗಿದ್ದಾರೆ. ಕೆಲವರು ರಾಜಕೀಯ ಪ್ರವೇಶಿಸಿ ಪಂಚಾಯತ್ ಅಧ್ಯಕ್ಷರು, ಸದಸ್ಯರು ಜಿಲ್ಲಾ ಪಂಚಾಯತ್ ಮತ್ತು ತಾಲೂಕು ಪಂಚಾಯತ್ ಸದಸ್ಯರು ಕೂಡ ಆಗಿದ್ದಾರೆ.

ಬಹು ಸಂಖ್ಯಾತ ಕುಡುಬಿಯರು ಮಧ್ಯಮ ವರ್ಗದ ಜೀವನ ನಡೆಸುತ್ತಿದ್ದಾರೆ. ಆರ್ಥಿಕವಾಗಿ ಹಿಂದುಳಿಯಲು ಹೆಚ್ಚಿನ ಜನರಲ್ಲಿ ಕೇವಲ ನಿರ್ದೇಶನ ಮಾತ್ರವಿದೆ. ಮಂಗಳೂರಿನ ಕುತ್ತಾರ್ ಪದವು ಮುನ್ನೂರು ಪಂಚಾಯತ್ ವ್ಯಾಪ್ತಿಯ ಕೃಷ್ಣಕೋಡಿಯ ಅನೇಕ ಕುಟುಂಬಗಳು ಅನೇಕ ವರ್ಷಗಳಿಂದ ಅಲ್ಲಿ ನೆಲೆಸಿದ್ದರು ಹಕ್ಕು ಪತ್ರದ ವಿತರಣೆಯಾಗಲಿಲ್ಲ.

ಇನ್ನೊಂದು ಉದಾಹರಣೆ ನೀಡುವುದಾದರೆ ಕೊಂಪದವು ಹಾಲು ಉತ್ಪಾದಕರ ಕಟ್ಟಡದ ಹಿಂದೆ ಇರುವ ಕುಡುಬಿ ಸಮುದಾಯದವರಿಗೆ ಸರ್ಕಾರ ನಿವೇಶನ ನೀಡಿದರೂ ಅಲ್ಲಿಯೂ ಅವರಿಗೆ ಹಕ್ಕು ಪತ್ರ ವಿತರಣೆಯಾಗಲಿಲ್ಲ ಇಲ್ಲಿ ಗಾರೆಯಾಗದ ಮನೆಯಲ್ಲಿ ಅವರು ವಾಸಿಸುತ್ತಿದ್ದಾರೆ. ಕುಡುಬಿ ಸಮುದಾಯವು ಆರ್ಥಿಕವಾಗಿ ಹಿಂದುಳಿದ ಸಮುದಾಯವಾಗಿದೆ.

ಕುಡುಬಿಯರ ವೃತ್ತಿ: ಕುಡುಬಿಯರ ಮೂಲ ವೃತ್ತಿ ಕೃಷಿ. ಇವರ ವಾಸಸ್ಥಳವು ಕೃಷಿಯೋಗ್ಯ ಭೂಮಿಯ ಪಕ್ಕದಲ್ಲಿಯೇ ವಾಸಿಸುತ್ತಿದ್ದಾರೆ. ಆಧುನಿಕವಾಗಿ ತೆಂಗು, ಅಡಿಕೆ, ಬಾಳೆ ಕೃಷಿಯನ್ನು ಮಾಡುತ್ತಿದ್ದಾರೆ. ಕೊಂಪದವು ಗ್ರಾಮದಲ್ಲಿ ನೆಲೆಸಿರುವ ಕುಡುಬಿಯರು ಮಲ್ಲಿಗೆ ಹೂವಿನ ಕೃಷಿಯನ್ನು ಮಾಡುತ್ತಿದ್ದಾರೆ. ಮಹಿಳೆಯರಲ್ಲಿ ಹೆಚ್ಚಿನ ಮಹಿಳೆಯರು ಬೀಡಿ ಕಟ್ಟುವ ಕಾರ್ಯದಲ್ಲಿ ನಿರತರಾಗಿರುತ್ತಾರೆ. ವಿದ್ಯಾವಂತ ಯುವಕರು ಖಾಸಗಿ ಕಂಪೆನಿಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಆರ್ಥಿಕವಾಗಿ ಸ್ಥಿತಿವಂತರು ಸ್ವಂತ ವ್ಯಾಪಾರವನ್ನು ಮಾಡುತ್ತಾರೆ.

ಕುಡುಬಿ ಸಮುದಾಯ ಆರ್ಥಿಕವಾಗಿ ಹಿಂದುಳಿಯಲು ಕಾರಣಗಳು:

1. ಶಿಕ್ಷಣ ಪ್ರಾಮುಖ್ಯತೆ ಬಗ್ಗೆ ಕುಡುಬಿ ಸಮುದಾಯದ ಜನರಲ್ಲಿ ಸರಿಯಾಗಿ ಅರಿವಿಲ್ಲದೆ ಇರುವುದು.
2. ಸ್ವಂತ ಕೃಷಿ ಭೂಮಿ ಇಲ್ಲದೆ ಬೇರೆಯವರ ಕೃಷಿ ಭೂಮಿಯಲ್ಲಿ ಕೂಲಿ ಕೆಲಸ ಮಾಡುತ್ತಿರುವುದು.
3. ಹೆಣ್ಣು ಮಕ್ಕಳಲ್ಲಿ ಶಿಕ್ಷಣ ಪ್ರಮಾಣ ತೀರಾ ಕಡಿಮೆ

4. ಕುಡುಬಿ ಸಮುದಾಯದಲ್ಲಿ ಶಾಲೆಯನ್ನು ಅರ್ಧದಲ್ಲಿ ಬಿಡುವರ ಸಂಖ್ಯೆ ಅಧಿಕವಾಗಿದೆ.
5. ವಿದ್ಯಾರ್ಥಿಗಳಲ್ಲಿ ತಾಂತ್ರಿಕ ಶಿಕ್ಷಣ ಕಡೆಗೆ ಆಸಕ್ತಿ ಕಡಿಮೆ.
6. ಸರಕಾರದಿಂದ ಆರ್ಥಿಕವಾಗಿ ಯಾವುದೇ ಸಹಾಯ ಸಿಗದೇ ಇರುವುದು.
7. ಕುಡುಬಿಯರಿಗೆ ಬೇರೆ ಬುಡಕಟ್ಟು ಜನಾಂಗದಂತೆ ಆ ರೀತಿಯ ಆರ್ಥಿಕ, ಶೈಕ್ಷಣಿಕ ಸ್ಥಾನಮಾನ ಸಿಗದೆ ಇದ್ದದ್ದು.

ಅಧ್ಯಾಯ-೦೪

ಕುಡುಬಿ ಸಮುದಾಯದ

ಕ್ಷೇತ್ರಾಧಾರಿತ ಮಾಹಿತಿ ವಿಶ್ಲೇಷಣೆ

ಅಧ್ಯಾಯ 4

4.1 ಕ್ಷೇತ್ರಾಧಾರಿತ ಮಾಹಿತಿ ವಿಶ್ಲೇಷಣೆ.

1. ಸೂಚನೆದಾರರ ಮನೆ ಮಾಲಿಕತ್ವ ಮತ್ತು ಸ್ವರೂಪ

ಕ್ರಮ ಸಂಖ್ಯೆ	ಮನೆಯ ಸ್ವರೂಪ	ಮನೆಗಳ ಸಂಖ್ಯೆ	ಶೇಕಡಾ
01	ಆರ್.ಸಿ.ಸಿ	8	16%
02	ಹಂಚು	40	80%
03	ಗುಡಿಸಲು	–	–
04	ಅರ್ಧ ಹಂಚು/ಆರ್.ಸಿ.ಸಿ	2	4%
	ಒಟ್ಟು	50	100%

ಮೇಲೆ ನೀಡಿರುವ ಕೋಷ್ಟಕವನ್ನು ವಿಶ್ಲೇಷಣೆ ಮಾಡುವುದಾದರೆ ಕುಡುಬಿ ಸಮುದಾಯದ ಅಧ್ಯಾಯನದಲ್ಲಿ ಅಧ್ಯಾಯನ ಕೈಗೊಂಡ ಪ್ರದೇಶವು ಗ್ರಾಮಾಂತರ ಪ್ರದೇಶಗಳಾಗಿವೆ. ಇಲ್ಲಿ ಕುತ್ತಾರ್, ದೇರಳಕಟ್ಟೆ, ಎಡಪದವು, ಕೊಂಪದವು ಮತ್ತು ಮೂಚ್ಚೂರು ಗ್ರಾಮ ಪಂಚಾಯತ್ ವ್ಯಾಪ್ತಿಯ ಪ್ರದೇಶಗಳಾಗಿವೆ. ಅಧ್ಯಾಯನದ ನಡೆದ ಎಲ್ಲಾ ಪ್ರದೇಶದಲ್ಲಿ ಹಂಚು ಮನೆಗಳು ಕಂಡು ಬಂದಿದೆ. ಕಡಿಮೆ ಪ್ರಮಾಣದ ಆರ್.ಸಿ.ಸಿ ಮನೆಗಳು ಕೂಡ ಇದೆ. ಬೇರೆ ಪ್ರದೇಶಕ್ಕೆ ತುಲನೆ ಮಾಡಿದಾಗ ಕೊಂಪದವು ಗ್ರಾಮದ ಸರ್ಕಾರಿ ನಿವೇಶನದಲ್ಲಿ ವಾಸಿಸುತ್ತಿರುವ ಕುಡುಬಿಯರು ಆರ್ಥಿಕವಾಗಿ ತುಂಬಾ ಹಿಂದುಳಿದಿದ್ದಾರೆ.

2. ಸೂಚನದಾರರ ಮಹತ್ವ ತಿರ್ಮಾನ ತೆಗೆದುಕೊಳ್ಳುಬೇಕಾದಾಗ ಮನೆಯವರ ಸಲಹೆ ಕೇಳುವವರ ವಿವಿರ

ಹಿರಿಯರ ಸಲಹೆ ಕೇಳುತ್ತಾರೆ	ಸಲಹೆ ಕೇಳುವವರ ಸರಬು	ಶೇಕಡಾ
ಹೌದು	50	100%
ಇಲ್ಲ	00	00%
ಒಟ್ಟು	50	100%

ವಿವರಣೆ: ಕುಡುಬಿ ಸಮುದಾಯದ ಅಧ್ಯಯನದ ಸಂದರ್ಭದಲ್ಲಿ ಸೂಚನದಾರರಲ್ಲಿ ಪ್ರಮುಖ ತಿರ್ಮಾನ ಯಾರು ತೆಗೆದುಕೊಳ್ಳುತ್ತಾರೆ ಎಂದು ಕೇಳಿದಾಗ ತಂದೆ ಎಂಬ ಎಂಬ ಉತ್ತರ ಪ್ರಮುಖವಾಗಿ ಕೇಳಿ ಬಂದಿದೆ. ತಂದೆಯ ಅನುಪ ಸ್ಥಿತಿಯಲ್ಲಿ ಅ ಅಧಿಕಾರ ತಾಯಿಗೆ ನೀಡಲಾಗಿದೆ. ಕುಡುಬಿ ಸಮುದಾಯ ಪಿತೃ ಪ್ರದಾನ ಕುಟುಂಬ ವ್ಯವಸ್ಥೆಯನ್ನು ಹೊಂದಿದೆ

ಮಹತ್ವ ತಿರ್ಮಾನ ತೆಗೆದುಕೊಳ್ಳುವಾಗ ಯಾವ ಸಂದರ್ಭದಲ್ಲಿ ಕೇಳುತ್ತಾರೆ ಎಂಬ ಪ್ರಶ್ನೆನೆಗೆ ಪ್ರಮುಖವಾಗಿ.

ಎಲ್ಲಾ ಸಂದರ್ಭಗಳಲ್ಲಿ

ಕೆಲವು ಸಂದರ್ಭಗಳಲ್ಲಿ

ವಿಶೇಷ ಸಂದರ್ಭಗಳಲ್ಲಿ ಎಂಬಆಯ್ಕೆಯನ್ನು ನೀಡಲಾಗಿತ್ತು. ಇದರಲ್ಲಿ ಶೇ 100% ರಷ್ಟು ಜನರ ಅಭಿಪ್ರಾಯ ಎಲ್ಲಾ ಸಂದರ್ಭಗಳಲ್ಲಿ ಎಂಬುದೇ ಆಗಿತ್ತು.

3. ಸೂಚನದಾರರ ಹೆಣ್ಣು ಮಕ್ಕಳ ವಿವಾಹ ಮಾಡುವ ವಯಸ್ಸಿನ ವಿವರ

ಕ್ರ. ಸಂ	ಶಿಕ್ಷಣ	ವಿವಾಹ ಮಾಡುವ ವಯಸ್ಸು	ಶೇಕಡಾ
1	ಪ್ರಾಥಮಿಕ	00	00
2	ಹೈಸ್ಕೂಲು	00	00
3	ಪಿ ಯು ಸಿ	02	04%
4	ಕಾಲೇಜು	45	90%
5	ಸ್ನಾತಕೋತ್ತರ ಪದವಿ	03	6%
6	ಒಟ್ಟು	50	100%

ಮೇಲ್ಕಂಡ ಮಾಹಿತಿಯಂತೆ ಸೂಚನದಾರರಲ್ಲಿ ನಿಮ್ಮ ಹೆಣ್ಣು ಮಕ್ಕಳನ್ನು ಯಾವ ವಯಸ್ಸಿಗೆ ವಿವಾಹ ಮಾಡುತ್ತಿರಾ ಎಂಬುದನ್ನು ಕೇಳಿದಾಗ ಶೇ 90% ರಷ್ಟು ಜನರು 20ರ ನಂತರ ವಿವಾಹ ಮಾಡುತ್ತೇವೆ ಎಂದು ಉತ್ತರ ನೀಡುತ್ತಾರೆ. ಆದರೆ ಅವರಲ್ಲಿ ಹಿರಿಯರಲ್ಲಿ ಕೇಳಿದಾಗ ಹಿಂದೆ ಚಿಕ್ಕ ವಯಸ್ಸಿಗೆ ವಿವಾಹ ಮಾಡುತ್ತಿದ್ದಾರು, ಈ ಕಾಲ ಬದಲಾಗಿದೆ ಹಾಗಾಗಿ ವಯಸ್ಸಿನ ಮಿತಿಯಲ್ಲಿ ಏರಿಕೆಯಾಗಿದೆ ಎಂದು ಅಭಿಪ್ರಾಯ ಪಡುತ್ತಾರೆ. ಈ ಅಭಿಪ್ರಾಯ ಒಂದು ರೀತಿಯಲ್ಲಿ ಉತ್ತಮ ಬೆಳವಣಿಗೆಯೇ ಸರಿ.

4. ಸೂಚನದಾರರ ವಯಸ್ಸು ಮತ್ತು ವೃತ್ತಿ ವಿವರ

ವಯಸ್ಸು	ಸೂಚನದಾರರ ಸಂಖ್ಯೆ	ಶೇಕಡಾ ಪ್ರಮಾಣ
20-30	02	4%
30-40	5	10%
40-50	15	30%
50-60	16	32%
60ಕ್ಕಿಂತ ಮೆಲ್ಪಟ್ಟು	12	24%
ಒಟ್ಟು	50	100%

ಮೆಲ್ಕಂಡ ಕೋಷ್ಟಕದ ಮಾಹಿತಿಯಂತೆ ನಾವು ಅಧ್ಯಯನದ ಮಾಡಿದ ಪ್ರದೇಶವು ಗ್ರಾಮಾಂತರ ಪ್ರದೇಶವಾಗಿದರಿಂದ ಈ ರೀತಿಯ ದತ್ತಾಂಶಗಳು ಸಿಕ್ಕಿದೆ. ಇಲ್ಲಿ 20-40ರ ವಯಸ್ಸಿನ ವರೆಗಿನ ಪೋಷಕರ ಪ್ರಮಾಣ ಕಡಿಮೆ, ನಂತರ 40 ರಿಂದ 60ರ ವರೆಗಿನ ವಯಸ್ಸಿನವರ ಪ್ರಮಾಣ ಅಧಿಕವಾಗಿದೆ. ಸೂಚನದಾರರಲ್ಲಿ ಹೆಚ್ಚಿನ ದಾರರಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಶಿಕ್ಷಣ ಇಲ್ಲದೆ ಇರುವವರು ಮತ್ತು ಕೂಲಿ ವೃತಿಯನ್ನು ಮಾಡುತ್ತಿರುವರು ಇದು ಕುಡುಬಿಯರ ಅರ್ಥಿಕ ಮತ್ತು ಶಿಕ್ಷಣದಲ್ಲಿ ಹಿಂದುಳಿಯುವ ಒಂದು ಕಾರಣವಾಗಿತಬಹುದು.

5. ಸೂಚನದಾರರ ಶಿಕ್ಷಣ ಮತ್ತು ಲಿಂಗವಾರು ಹಂಚಿಕೆ ವಿವರ

ಕ್ರ.ಸಂ	ಶಿಕ್ಷಣ/ಲಿಂಗ	ಮಹಿಳೆ	ಪುರುಷ	ಒಟ್ಟು ಶೇಕಡಾ
01	ಅನಕ್ಷರಸ್ಥ	12	18	30(60%)
02	ಪ್ರಾಥಮಿಕ	00	11	11(22%)
03	ಪ್ರೌಡ	00	08	08(16%)
04	ಪಿಯುಸಿ	00	01	01(2%)
05	ಪದವಿ	00	00	00
06	ಒಟ್ಟು	12	38	50(100%)

ಮೇಲ್ಕಂಡ ದತ್ತಾಂಶಗಳ ಪ್ರಕಾರ ಕುಡುಬಿ ಸಮುದಾಯದ ತಂದೆ-ತಾಯಿಯರಲ್ಲಿ ಅಧಿಕ ಪ್ರಮಾಣದಲ್ಲಿ ಅನಕ್ಷರಸ್ಥರು ಕಂಡು ಬರುತ್ತಾರೆ. ಇಲ್ಲಿ ಮಹಿಳೆಯರ ಸಂಖ್ಯೆ ಕೂಡ ಅಧಿಕವಾಗಿದೆ ಅದರೆ ತಂದೆಯ ನಿಧನದ ನಂತರ ತಾಯಿ ಮಾತ್ರವಿರುವ ಮನೆಗಳ ಮಹಿಳೆಯರ ಶಿಕ್ಷಣದ ಮಾಹಿತಿ ಇಲ್ಲಿದೆ ಇದು ಕುಡುಬಿಯರಲ್ಲಿ ಹಿಂದಿನಿಂದಲೂ ಶಿಕ್ಷಣದ ಮಹತ್ವದ ಬಗ್ಗೆ ಅವರಗಿರುವ ತಿಳುವಳಿಕೆಯನ್ನು ಸೂಚಿಸುತ್ತದೆ. ಇದು ಪೋಷಕರ ಪರಿಸ್ಥಿತಿಯಾದರೆ ಅದುನಿಕವಾಗಿಯೂ ಯುವ ಜನರಲ್ಲಿ ಶೈಕ್ಷಣಿಕ ಪ್ರಗತಿ ಅಷ್ಟು ಅಶಾದಾಯಕವಾಗಿ ಇಲ್ಲ ಎಂಬುದು ವಿಷಾದನಿಯವಾಗಿದೆ.

6. ಸೂಚನದಾರರ ವೈವಾಹಿಕ ಸ್ಥಾನಮಾನ

ಕ್ರ.ಸಂ	ವೈವಾಹಿಕ ಸ್ಥಾನಮಾನ	ಒಟ್ಟು	ಶೇಕಡಾ
01	ವಿವಾಹಿತರು	38	76%
02	ವಿಧವೆಯರು	12	24%
03	ವಿಧುರರು	00	00
04	ಒಟ್ಟು	50	100%

ಪ್ರಸ್ತುತ ನಡೆಸಿದ ಅಧ್ಯಯನದಲ್ಲಿ ಶೇ100ರಷ್ಟು ವಿವಾಹಿತ ಸೂಚನದಾರರಲ್ಲಿಯೇ ಮಾಹಿತಿ ಸಂಗ್ರಹಿಸಲಾಗಿದೆ. ಇಲ್ಲಿ ಒಟ್ಟು ಶೇ 24% ಮಹಿಳಾ ಸೂಚನದಾರರು ಮತ್ತು ಶೇ 76%ರಷ್ಟು ಪುರುಷ ಸೂಚನದಾರರು ಇದ್ದಾರೆ. ಇದನ್ನು ಶೇ 76ರಷ್ಟು ಪುರುಷರು ಮನೆಯ ಮುಖ್ಯಸ್ಥರು ಮತ್ತು ಶೇ 24ರಷ್ಟು ಮಹಿಳಾ ಮುಖ್ಯಸ್ಥರು ಎಂದು ತಿಳಿಯಬಹುದು. ಈ ಶೇಕಡಾ 24ರಷ್ಟಿರುವ ಮಹಿಳಾ ಸೂಚನಾದಾರರು ವಿಧವೆಯರಾಗಿದ್ದಾರೆ.

ಈ ಸೂಚನದಾರರಲ್ಲಿ ಶೇ 24ರಷ್ಟಿರುವ ಮಹಿಳಾ ಸೂಚನದಾರರು ಅನಕ್ಷಸ್ಥರು ಮತ್ತು ಪುರುಷರಲ್ಲಿ ಶೇ 36ರಷ್ಟು ಅನಕ್ಷರಸ್ಥರು, ಶೇ 22ರಷ್ಟು ಪ್ರಾಥಮಿಕ ಶಿಕ್ಷಣವನ್ನು ಶೇ 16ರಷ್ಟು ಪ್ರೌಢಶಿಕ್ಷಣವನ್ನು ಹಾಗೂ ಶೇ 2ರಷ್ಟು ಪದವಿ ಪೂರ್ವ ಶಿಕ್ಷಣವನ್ನು ಪಡೆದವರನ್ನು ಒಳಗೊಂಡಿದೆ.

7. ಸೂಚನದಾರರ ಕುಡುಬಿ ಕುಟುಂಬದ ಜನರ ಸಂಖ್ಯೆ

ಕ್ರಸಂ	ಗಾತ್ರ	ಸದಸ್ಯರ ಸಂಖ್ಯೆ	ಶೇಕಡಾ
01	1–4	32	64%
02	5–8	17	34%
03	9–10	00	00
04	10ಕ್ಕಿಂತ ಜಾಸ್ತಿ	01	2%
05	ಒಟ್ಟು	50	100%

ಮೆಲ್ಕಂಡ ದತ್ತಾಂಶಗಳನ್ನು ಅಧಾರವಾಗಿಟ್ಟುಕೊಂಡು ಹೇಳುವುದಾದರೆ ಅದ್ಯುನಕ್ಕೆ ಒಳಗಾದ ಸೂಚನದಾರರ ಕುಟುಂಬದಲ್ಲಿ 1 ರಿಂದ 4 ಸದಸ್ಯರನ್ನು ಹೊಂದಿರುವ ಕುಟುಂಬಗಳ ಸಂಖ್ಯೆ 32 (ಶೇ 64) ರಷ್ಟು ಮತ್ತು 5 ರಿಂದ 8 ನಡುವೆ ಸದಸ್ಯರ ಸಂಖಿಗಯೆಯನ್ನು ಹೊಂದಿರುವವರ ಸಂಖ್ಯೆ ಶೇ 34% ಇನ್ನುಳಿದಂತೆ ಶೇ 2 ರಷ್ಟು 10 ಕ್ಕಿಂತ ಜಾಸ್ತಿ ಸದಸ್ಯರನ್ನು ಹೂಂದಿರುವ ಕುಟುಂಬಗಳನ್ನು ಹೂಂದಿದೆ.

8. ಸೂಚನದಾರರು ಹೆಣ್ಣು ಮಕ್ಕಳ ಸಮಾನ ಶಿಕ್ಷಣ ಅವಕಾಶ ವಿವರ

ಕ್ರ ಸಂಖ್ಯೆ	ಅವಕಾಶ	ಒಟ್ಟು	ಶೇಕಾಡ
01	ಒಪ್ಪುತ್ತೇವೆ	42	84%
02	ಒಪ್ಪುದಿಲ್ಲ	8	16%
03	ಒಟ್ಟು	50	100%
	ಒಪ್ಪುದಿಲ್ಲಕ್ಕೆ ಕಾರಣಗಳು	**ಒಟ್ಟು**	**ಶೇಕಡಾ**
01	ಹಿರಿಯರ ಅಸಹಕಾರ	12	24%
02	ಅರ್ಥಿಕ ಕಾರಣ	38	76%
03	ಒಟ್ಟು	50	100%

ಮೇಲ್ಕಂಡ ದತ್ತಾಂಶಕ್ಕೂ ನನ್ನ ಈ ವಿವರಣೆಗೂ ಸ್ವಲ್ಪ ವ್ಯತ್ಯಾಸವಿದೆ. ಕಾರಣ ಈ ಸಮುದಾಯದ ಸೂಚನದಾರರು ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಸಮಾನ ಅವಕಾಶ ನೀಡುತ್ತೇವೆ. ಆದರೆ ಅವರಲ್ಲಿ ಆಶಕ್ತಿ ಇಲ್ಲ ಎಂದು ತಿಳಿಸಿದರೆ. ಯುವ ಪೀಳಿಗೆಯ ಪ್ರಕಾರ ಇದಕ್ಕೆ ಹಿರಿಯರ ಅವಕಾಶ ನಿಡುತ್ತಿಲ್ಲ ಮತ್ತೊಂದು ಕಾರಣ ಆರ್ಥಿಕವಾಗಿ ಅಷ್ಟು ಶಕ್ತಿ ಇಲ್ಲ ಎಂದು ಅಭಿಪ್ರಾಯ ಪಡುತ್ತಾರೆ.

ಮೇಲಿನ ದತ್ತಾಂಶಗಳನ್ನು ವಿಶ್ಲೇಷಿಸಿದಾಗ ಶೆ 84% ಸೂಚನದಾರರು ಸಮಾನ ಶಿಕ್ಷಣದ ಅವಕಾಶವಿದೆ ಎಂದು ತಿಳಿಯುತ್ತದೆ. ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಅರ್ಥಿಕವಾಗಿ ಹಿಂದುಳಿದಿರುವಿಕೆಯೇ ಒಂದು ತೊಡಕ್ಕಾಗಿ ಕಾಣುತ್ತದೆ.

9. ಸೂಚನದಾರರ ಕುಟುಂಬ ಸದಸ್ಯರ ಶಿಕ್ಷಣ ಮಾಹಿತಿ

ಕ್ರ.ಸಂಖ್ಯೆ	ಶಿಕ್ಷಣ ಮಟ್ಟ	ಗಂಡು	ಹೆಣ್ಣು	ಒಟ್ಟು
01	ಪ್ರಾಥಮಿಕ	18	13	31
02	ಪ್ರೌಢ	23	08	31
03	ಪಿಯಿಸಿ	12	12	24
04	ಐಟಿಐ ಡಿಪ್ಲೋಮೊ ನರ್ಸಿಂಗ್ / ತಾಂತ್ರಿಕ	08	00	08
05	ಪದವಿ	05	12	17
06	ಸ್ನಾತಕೋತರ	01	01	02
07	ಒಟ್ಟು	67	46	113

ಮೇಲ್ಕಂಡ ಕೋಷ್ಟಕದಲ್ಲಿನ ದತ್ತಾಂಶ ಕುಡುಬಿ ಸಮುದಾಯದಲ್ಲಿ ಒಟ್ಟು 31ರಷ್ಟು ಪ್ರಥಮಿಕ ಹಂತದವರೆಗೂ ಒಟ್ಟು 31 ರಷ್ಟು ಪ್ರೌಢ ಹಂತರವರೆಗು ಶಿಕ್ಷಣ ಪಡೆದವರು ಸಿಗುತ್ತಾರೆ. ಇದರಲ್ಲಿ ಒಟ್ಟು 24 ರಷ್ಟು ಪಿಯುಸಿ. ವರೆಗೆ ಶಿಕ್ಷಣ ಪಡೆದವರು ಪದವಿ ಪಡೆದವರು ಸಂಖ್ಯೆ 17 ಹಾಗೂ ಸ್ನಾತಕೋತ್ತರ ಪದವಿ ಪಡೆದವ ಸಂಖ್ಯೆ ತೀರಾ ವಿರಳ ಅಂದರೆ 02 ಅಷ್ಟೇ ಅಗಿದೆ. ಈ ದತ್ತಾಂಶವು ನಾನು ನಡೆಸಿದ ಸಿಮೀತ ಕುಟುಂಬಗಳ ಸದಸ್ಯರ ಬಗ್ಗೆ ಮಾತ್ರವಾಗಿರುತ್ತದೆ.

10. ಸೂಚನದಾರರ ಅನಾರೋಗ್ಯ ಸಂದರ್ಭ ಚಿಕಿತ್ಸೆ

ಕ್ರ.ಸಂಖ್ಯೆ	ಸ್ಥಳ	ಒಟ್ಟು	ಶೇಕಡಾ
01	ಸರಕಾರಿ ಆಸ್ಪತ್ರೆ	32	64%
02	ಸ್ಥಳಿಯ ಖಾಸಗಿ ಆಸ್ಪತ್ರೆ	16	32%
03	ಗ್ರಾಮ ವೈದ್ಯರು	02	4%
04	ಮಾಂತ್ರಿಕರ ಬೇಟಿ	00	00
05	ಸ್ವಂತ ಮನೆ ಔಷಧಿ	00	00
06	ಒಟ್ಟು	20	100%

ಮೇಲ್ಕಂಡದತ್ತಾಂಶಗಳ ಪ್ರಕಾರ ಅನಾರೋಗ್ಯದ ಸಂದರ್ಭದಲ್ಲಿ ಸಮುದಾಯದ ಜನರು ಶೇ 64% ಜನರು ಸರಕಾರಿ ಆಸ್ಪತ್ರೆಯನ್ನು ಅವಲಂಬಿಸಿದರೆ ಇದರಲ್ಲಿ ಶೇ 32% ರಷ್ಟು ಜನರು ಖಾಸಗಿ ಆಸ್ಪತ್ರೆಯನ್ನು ಅವಲಂಬಿಸಿರುತ್ತಾರೆ ಅಥವಾ ಅಲ್ಲಿ ಚಿಕಿತ್ಸೆ ಪಡೆದಿರುತ್ತಾರೆ, ಶೇ 4% ಜನರು ತಮ್ಮ ವಾಸ ಸ್ಥಳದ ಸಮೀಪವಿರುವ ಗ್ರಾಮ ವೈದ್ಯರಲ್ಲಿ ಚಿಕಿತ್ಸೆ ಪಡೆಯುತೇವೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ.

11. ಸೂಚನದಾರರ ಸ್ವಂತ ಕೃಷಿ ಭೂಮಿಯ ಬಗ್ಗೆ ವಿವರ

ಕ್ರ.ಸಂಖ್ಯೆ	ಜಮೀನಿನ ಸ್ವರೂಪ	ಒಟ್ಟು
01	ಒಣ ಭೂಮಿ	00
02	ಕೃಷಿ ಭೂಮಿ	08
03	ಒಟ್ಟು	09

ಮೆಲ್ಕಂಡ ಮಾಹಿತಿಯಂತೆ ಕುಡುಬಿ ಸಮುದಾಯಸಲ್ಲಿ ಅಧಿಕ ಕುಟುಂಬಗಳಲ್ಲಿ ಕೃಷಿ ಭೂಮಿ ಇರುವುದಿಲ್ಲ. ಇವರು ನದಿ ತೀರ ಪ್ರದೇಶದಲ್ಲಿ ವಾಸಿಸುತ್ತಿದ್ದರು ಅನೇಕ ಜನರು ಕೇವಲ ಕೃಷಿ ಕಾರ್ಮಿಕರಾಗಿಯೇ ದುಡಿಯುತ್ತಿದ್ದಾರೆ. ಬಹುಪಾಲು ಕುಡುಬಿಯರಲ್ಲಿ ಕೇವಲ ನಿವೇಶನ ಮಾತ್ರ ಇದೆ. ಬೇರೆ ಭೂಮಿ ಇಲ್ಲ.

12. ಸ್ವಂತ ಜಮೀನು ಹೊಂದಿದವರ ವಿವರ

ಸ್ವಂತ ಜಮೀನು	ಒಟ್ಟು	ಶೇಕಡಾ
ಇದೆ	08	16%
ಇಲ್ಲ	42	84%
ಒಟ್ಟು	50	100%

ಇದೆಯಾದರೆ ಯಾವ ಸ್ವರೂಪದ್ದು

ಖರೀದಿ	03	6%
ಪಿತ್ರಾರ್ಜಿತ	05	10%
ಭೂಸುದಾರಣೆಯಿಂದ	00	00
ಸರಕಾರಿ ಭೂಮಿ	00	00
ಒಟ್ಟು	08	16%

ಮೆಲ್ಕಂಡ ದತ್ತಾಂಶಗಳ ಪ್ರಕಾರ ಅಧ್ಯಾಯ ನಡೆಸಿದ ಶೇ 100 ರಲ್ಲಿ ಕೇವಲ ಶೇ 16 ಜನರಲ್ಲಿ ಕೃಷಿ ಭೂಮಿ ಇದೆ. ಇನ್ನುಳಿದ ಶೇ 84 ರಷ್ಟು ಜನರಲ್ಲಿ ಯಾವುದೇ ರೀತಿಯ ಜಮೀನು ಹೊಂದಿಲ್ಲ. ಇದರಲ್ಲಿ ಶೇ 6% ರಷ್ಟು ಜನರು ಖರೀದಿಯಾಗಿಯೇ ಶೇ 10ರಷ್ಟು ಜನರಿಗೆ ಜಮೀನು ಪಿತ್ರಾರ್ಜಿತ ಮೂಲದಿಂದ ಬಂದಿರುತ್ತದೆ.

13. ಸೂಚನದಾರರು ಸಂಘಸಂಸ್ಥೆಯಲ್ಲಿ ಸದಸ್ಯತ್ವ ವಿವರ

ಸದಸ್ಯತ್ವ	ಮಹಿಳೆ	ಪುರುಷ	ಒಟ್ಟು
ಹೊಂದಿದ್ದೇವೆ	08	12	20
ಹೊಂದಿಲ್ಲ	2	08	30
ಒಟ್ಟು	30	20	50

ಯಾವ ಸಂಘಟನೆಯಲ್ಲಿ

ಯುವಕ/ ಯುವತಿ	00	02	02
ಸ್ವಸಹಾಯ	07	03	10
ಹಾಲಿನ ಡೈರಿ	00	04	04
ಪಂಚಾಯತ್	01	01	02
ರಾಜಕೀಯ ಪಕ್ಷ	00	02	02
ಒಟ್ಟು	08	12	20

ಮೆಲ್ಕಂಡ ದತ್ತಾಂಶ ಪ್ರಕಾರ ಕುಡುಬಿ ಸಮುದಾಯ ಶೇ 60ರಷ್ಟು ಜನರು ತಾವು ಯಾವುದೆ ಸಂಘಟನೆಯಲ್ಲಿ ಸದಸ್ಯರಾಗಿಲ್ಲ ಇಂದು ತಿಳಿಸಿದರೆ ಇನ್ನೂ ಶೇ 40ರಷ್ಟು ಜನರು ಬೇರೆ ಬೇರೆ ಸಂಘಟನೆಯಲ್ಲಿ ಸದಸ್ಯರಾಗಿದ್ದಾರೆ, ಇಲ್ಲಿ ಪ್ರಮುಖವಾಗಿ ಸ್ವಸಹಾಯ, ಹಾಲಿನ ಡೈರಿ, ಪಂಚಾಯತ್ ಮತ್ತು ರಾಜಕೀಯ ಪಕ್ಷಗಳಲ್ಲ ಸದಸ್ಯರಾಗಿರುತ್ತಾರೆ.

14. ಸೂಚನಾದಾರರ ಜಮೀನಿನ ಸ್ವರೂಪ

ಕ್ರ.ಸಂಖ್ಯೆ	ಸ್ವರೂಪ	ಒಟ್ಟು	ಶೇಕಾಡ
1	ಒಣ ಭೂಮಿ	00	00
2	ಕೃಷಿ ಭೂಮಿ	03	6%
3	ಇತರೆ	02	4%
4	ಒಟ್ಟು	5	10%

ಮೇಲ್ಕಂಡ ಮಾಹಿತಿಗೆ ಸಂಬಂಧಿಸಿದಂತೆ ಜಮೀನು ಹೊಂದಿರುವವರ ಸಂಖ್ಯಾ ತೀರಾ ಕಡಿಮೆ. ಇಲ್ಲಿ ಶೇ 10ರಷ್ಟು ಸೂಚನಾದಾರರು ಜಮೀನನ್ನು ಹೊಂದಿರುತ್ತಾರೆ. ಇದು ಕೃಷಿಭೂಮಿಯಾಗಿರುತ್ತದೆ. ಆಮೀನಿನ ಬಗ್ಗೆ ಕೇಳಿದಾಗ ಸದು ಪಿತ್ರಾರ್ಜಿತ ಎಂದೂ ಕೆಲವರು ಖರೀದಿಸಿದ್ದು ಎಂದಿ ಉತ್ತರಿಸಿದ್ದಾರೆ. ಇಲ್ಲಿ ಗಮನಿಸಬೇಕಾದ ಅಂಶವೇನೆಂದರೆ ಶೇ 90ರಷ್ಟು ಮಂದಿಯಲ್ಲಿ ಯಾವುದೇ ಜಮೀನು ಇಲ್ಲದಿರುವುದು.

15. ಸೂಚನದಾರರ ಅದಾಯ ಮೂಲದ ಬಗ್ಗೆ ವಿವರ

ಕ್ರಸಂಖ್ಯೆ	ಜಮೀನು ಆದಾಯದ ಮೂಲವೇ	ಒಟ್ಟು	ಶೇಕಡಾ
1	ಹೌದು	5	10%
2	ಇಲ್ಲ	45	90%
3	ಒಟ್ಟು	50	100%

ಮೇಲ್ಕಂಡ ದತಾಂಶಗಳಿಗೆ ಸಂಬಂಧಿಸಿದಂತೆ ಅಧ್ಯಾಯನ ನಡೆಸಿದ ಒಟ್ಟು ಕುಟುಂಬಗಳಲ್ಲಿ ಜಮೀನು ಇಲ್ಲ ಎಂದು ಉತ್ತರಿಸಿದವರ ಪ್ರಮಾಣ ಶೇ 90 ರಷ್ಟು ಇನ್ನುಳಿದ ಶೇ 10ರಷ್ಟು ಸೂಚನದಾರರು ಜಮೀನು ತಮ್ಮ ಆದಾಯದ ಮೂಲ ಎಂದಿದ್ದಾರೆ.

16. ಸೂಚನಾದರರಲ್ಲಿ ಹೆಣ್ಣು ಮಕ್ಕಳಿಗೆ ಆಸ್ತಿಯಲ್ಲಿ ಪಾಲು ನೀಡವ ಬಗ್ಗೆ ವಿವರಣೆ

ಕ್ರಸಂಖ್ಯೆ	ಆಸ್ತಿಯಲ್ಲಿ ಪಾಲು	ಒಟ್ಟು	ಶೇಕಡಾ
1	ನೀಡುತ್ತೇವೆ	50	100%
2	ನೀಡುವುದಿಲ್ಲ	00	00
3	ಒಟ್ಟು	50	100%

ಕುಡುಬಿ ಸಮುದಾಯವು ಮೂಲದಲ್ಲಿಯೇ ಮದುವೆಯಾದ ನಂತರ ಅಕೆಯನ್ನು ತಂದೆ – ತಾಯಿಯಿಂದ ಶಾಶ್ವತವಾಗಿ ಬೇರೆ ಮಾಡಲಾಗುತ್ತಿತ್ತು. ಅವರಿಗೆ ಯಾವುದೇ ರೀತಿಯ ಹಕ್ಕುಗಳಿರಲಿಲ್ಲ ಎಂದು ಹಿರಿಯ ಸೂಚನದಾರರ ವಾದ. ಆದರೆ ಆಸ್ತಿಯ ಹಕ್ಕು ಕಾನೂನು ಬಂದ ಮೇಲೆ ಆಸ್ತಿಯಲ್ಲಿ ಪಾಲು ಕೊಡುವ ಕ್ರಮ ಇದೆ ಎಂದು ಶೇ 50ರಷ್ಟು ಸಾಚನದಾರರು ಒಪ್ಪುತ್ತಾರೆ.

17. ಸೂಚಕನದಾರರ ಮಕ್ಕಳಿಗೆ ದೊರೆತಿರುವ ಸೌಲಭ್ಯದ ವಿವರ

ಕ್ರಸಂಖ್ಯೆ	ಸೌಲಭ್ಯಗಳು	ಒಟ್ಟು	ಶೇಕಡಾ
1	ಮಿಸಲಾತಿ	00	00
2	ವಿಧ್ಯಾರ್ಥಿ ವೇತನ	08	16%
3	ಶುಲ್ಕ ರಿಯಾಯಿತಿ	00	00
4	ಬ್ಯಾಂಕ್ ಸಾಲ	00	00
5	ಇತರೆ	06	12%
6	ಒಟ್ಟು	14	28%

ಕಲಿಯುವ ವಿಧ್ಯಾರ್ಥಿಗಳಿಗೆ ದೊರೆಯುವ ಸೌಲಭ್ಯಗಳ ಬಗ್ಗೆ ಸೂಚನದಾರರಲ್ಲಿ ಕೇಳಿದಾಗ ಶೇ 72 ರಷ್ಟು ಯಾವುದೇ ಸೌಲಭ್ಯ ದೊರೆಯುತಿಲ್ಲ. ಎಂದರೆ ಇನ್ನುಳಿದ 28ರಷ್ಟು ಮಂದಿ ಕೆಲವು ಸೌಲಭ್ಯ ದೊರೆಯುತ್ತದೆ ಎಂದು ಉತ್ತರಿಸಿದ್ದಾರೆ.

18. ಸೂಚನದಾರರ ವಾರ್ಷಿಕ ಆದಾಯದ ಬಗ್ಗೆ ವಿವರ

ಕ್ರ.ಸಂಖ್ಯೆ	ವಾರ್ಷಿಕ ಆದಾಯ	ಒಟ್ಟು	ಶೇಕಡಾ
1	20,000–40,000	47	97%
2	40,000/50,000	02	4%
3	50,000–80,000	01	02%
4	80,000+	00	00
5	ಒಟ್ಟು	50	100%

ಮೇಲ್ಕಂಡ ಮಾಹಿತಿಯಂತೆ ಸೂಚನದಾರರ ವಾರ್ಷಿಕ ಆದಯದಲ್ಲಿ ಶೇ 94ರಷ್ಟು ಕುಟುಂಬಗಳು 40,000 ದ ಒಳಗೆ ವಾರ್ಷಿಕ ಅದಾಯ ಎಂದು ತಿಳಿಸಿದರೆ ಮತ್ತು ಶೇ 4ರಷ್ಟು ಸೂಚನದಾರರ ರೂ 40,000 ರಿಂದ 50,000 ರದ ವರೆಗೆ ಹಾಗೂ ಶೇ 2% ಪ್ರಮಾಣದಲ್ಲಿ 50,000 ದಿಂದ 80,000 ದ ಮಧ್ಯ ಅದಾಯ ಹೊಂದಿರುವ ಬಗ್ಗೆ ಮಾಹಿತಿ ನೀಡಿರುತ್ತಾರೆ, ಈ ರೀತಿಯ ಫಲಿತಾಂಶಕ್ಕೆ ಮುಖ್ಯ ಕಾರಣ ಅವರ ಮಾಡು ವೃತ್ತಿ. ಇನ್ನು ಅನೇಕ ಕುಟುಂಬಗಳ ಕೂಲಿ ವೃತ್ತಿಯನ್ನು ಅವಲಂಬಿಸಿವೆ.

19. ಸೂಚನದಾರರಲ್ಲಿ ಹಣ ಉಳಿತಾಯದ ವಿವರ

ಕ್ರ.ಸಂಖ್ಯೆ	ಉಳಿತಯ ಮಾಡುವ ಸ್ಥಳ	ಒಟ್ಟು	ಶೇಕಡಾ
1	ಬ್ಯಾಂಕ್	140	80
2	ಅಂಚೆ ಕಛೇರಿ	08	16
3	ಜೀವ ವಿಮೆ	02	04
4	ಇತರೆ	00	00
5	ಒಟ್ಟು	50	100%

ಮೆಲ್ಕಂಡ ಮಾಹಿತಿಯಂತೆ ಸೂಚನದಾರರಲ್ಲಿ ಹಣದ ಉಳಿತಾಯದ ಬಗ್ಗೆ ಕೇಳಿದಾಗ ಮಾಡಲು ಇಷ್ಟ ಪಡುತ್ತೇವೆ ಎಂದಿದ್ದಾರೆ. .ಅವರಲ್ಲಿ ಬ್ಯಾಂಕ್ ಖಾತೆ ಇದೆ ಎಂದು ಉತ್ತರಿಸಿದ್ದಾರೆ. ಇಲ್ಲಿ ಶೇ 16 ರಷ್ಟು ಅಂಚೆ ಕಛೇರಿ ಮತ್ತು ಶೇ 4ರಷ್ಟು ಮಂದಿ ಜೀವ ವಿಮೆ ಕಂಪೆನಿಯಲ್ಲಿ ಉಳಿತಾಯ ಮಾಡಿದ ಇಚ್ಚೇಯನ್ನು ವ್ಯಕ್ತ ಪಡಿಸಿದ್ದಾರೆ. ಉಳಿತಾಯ ಮಾಡದ ಹಣದಲ್ಲಿ ಯಾವ ರೀತಿಯಲ್ಲಿ ವಿನಿಯೋಗಿಸುತ್ತೀರು ಕೆಲವರು ಮನೆಕಟ್ಟಲು ಉಪಯೊಗಿಸುತ್ತೇವೆ ಎಂದಿದ್ದಾರೆ.

20. ಸೂಚನದಾರರಲ್ಲಿ ನೀರಿನ ಆಶ್ರಯದ ವಿವರಣೆ

ಕ್ರ.ಸಂಖ್ಯೆ	ನೀರಿನ ಮೂಲ	ಒಟ್ಟು	ಶೇಕಡಾ
1	ಸ್ವಂತ ಬಾವಿ	18	36%
2	ಕೆರೆ	00	00
3	ಸಾರ್ವಜನಿಕ ಕೊಳವೆ ಬಾವಿ	30	60%
4	ನೆರೆಯವರ ಬಾವಿ	02	4%
5	ಒಟ್ಟು	50	100%

ಸೂಚನದಾರರಲ್ಲಿ ಕುಡಿಯುವ ನೀರಿನ ಮೂಲದ ಬಗ್ಗೆ ಕೇಳಿದಾಗ ಶೇ 36% ಜನರು ಸ್ವಂತ ಬಾವಿ ಇದೆ ಎಂದು ಉತ್ತರಿಸಿದ್ದಾರೆ. ಶೇ 60 ರಷ್ಟು ಜನರು ಸಾರ್ವಜನಿಕ ಕೊಳವೆ ಬಾವಿಯನ್ನು ಅವಲಂಬಿಸಿದ್ದಾರೆ, ಇನ್ನುಳಿದಂತೆ ಶೇ 4ರಷ್ಟು ಜನರು ನೆರೆ ಮನೆಯವರ ಬಾವಿಯನ್ನು ಕುಡಿಯುವ ನೀರಿನ ಮೂಲವಾಗಿ ಅವಲಂಬಿಸಿರುತ್ತಾರೆ.

21. ಸೂಚನದಾರರು ಪಡೆದ ಸರ್ಕಾರಿ ಸೌಲಭ್ಯದ ವಿವರಣೆ

ಕ್ರ.ಸಂಖ್ಯೆ	ಸರ್ಕಾರಿ ಸೌಲಭ್ಯದ	ಒಟ್ಟು	ಶೇಕಡಾ
1	ಹಂಚು	00	00
2	ಮನೆ	00	00
3	ನೀವೇಶನ	12	24%
4	ವಿದ್ಯುತ್ ಸಂಪರ್ಕ	00	00
5	ಶೌಚಾಲಯ ನಿರ್ಮಾಣ	02	04%
6	ಪಿಂಚಣಿ	04	04%
7	ಒಟ್ಟು	18	36%

ಮೆಲ್ಕಂಡ ಮಾಹಿತಿಯಂತೆ ಸೂಚನದಾರರಲ್ಲಿ ಸರಕಾರಿ ಸೌಲಭ್ಯದ ಬಗ್ಗೆ ಕೇಳಿದಾಗ ಶೇ 64ರಷ್ಟು ಜನರು ತಮ್ಮಗೆ ಸರಕಾರದಿಂದ ಯಾವುದೇ ಸವಲತ್ತು ಸಿಗುತ್ತಿಲ್ಲ ಎಂದಿದ್ದಾರೆ. ಇನ್ನುಳಿದಂತೆ ಶೇ 24 ರಷ್ಟು ಮಂದಿ ನಿವೇಶನ ಪಡೆದಿದ್ದಾರೆ. ಮತ್ತು ಶೇ 4ರಷ್ಟು ಮಂದಿ ಶೌಚಾಲಯ ನಿಮಾರ್ಣ ಹಾಗೂ ಶೇ 8%ರಷ್ಟು ಮಂದಿ ಪಿಂಚಣಿ ದೊರೆಯುತ್ತಿದೆ ಎಂದಿದ್ದಾರೆ. ಆದರೆ ಇಲ್ಲಿ ಗಮನಿಸಬೇಕಾದ ವಿಷಯವೆನೆಂದರೆ ಸರ್ಕಾರಿ ನಿವೇಶನ ದೊರೆತವರಿಗೆ ಇನ್ನು ಹಕ್ಕು ಪತ್ರ ದೊರೆತಿರುವುದಿಲ್ಲ.

22. ಸೂಚನದಾರರ ಕುಟುಂಬದಲ್ಲಿ ವಲಸೆಹೋದವರ ಬಗ್ಗೆ ವಿವರಣೆ

ಕ್ರ.ಸಂಖ್ಯೆ	ವಲಸೆ	ಒಟ್ಟು	ಶೇಕಡಾ
1	ಹೋಗಿದ್ದಾರೆ	04	8%
2	ಹೋಗಿಲ್ಲ	46	92%
3	ಒಟ್ಟು	50	100%

ವಲಸೆ ಸ್ವರೂಪ

ಕ್ರ.ಸಂಖ್ಯೆ	ವಲಸೆ ಸ್ವರೂಪ	ಒಟ್ಟು	ಶೇಕಡಾ
1	ಬೇರೆ ತಾಲೂಕು	2	4
2	ಬೇರೆ ಜಿಲ್ಲೆ	1	2
3	ಬೇರೆ ರಾಜ್ಯ	1	2
4	ಬೇರೆ ದೇಶ	00	00
5	ಒಟ್ಟು	4	8%

ಮೇಲ್ಕಂಡ ಮಾಹಿತಿಯಂತೆ ಸೂಚನದಾರರಲ್ಲಿ ವಲಸೆಯ ಬಗ್ಗೆ ಕೇಳಿದಾಗ ಶೇ 92% ಜನರು ವಲಸೆ ಹೋಗಿಲ್ಲ ಎಂದರೆ ಶೇ 8ರಷ್ಟು ತಮ್ಮ ಮನೆಯ ಸದಸ್ಯರು ವಲಸೆ ಹೋಗಿದ್ದಾರೆ. ಇದರಲ್ಲಿ ಶೇ 4ರಷ್ಟು ಜನ ಬೇರೆ ತಾಲೂಕಿಗೆ, ಶೇ 2%ರಷ್ಟು ಜನ ಬೇರೆ ಜಿಲ್ಲೆಗೂ ಮತ್ತು ಶೇ 2ರಷ್ಟು ಮಂದಿ ಬೇರೆ ರಾಜ್ಯಕ್ಕೂ ವಲಸೆ ಹೋಗಿರುವ ಬಗ್ಗೆ ಮಾಹಿತಿ ನೀಡಿರುತ್ತಾರೆ.

23. ಸೂಚನದಾರರಲ್ಲಿ ಪ್ರಮುಖ ನಿರ್ಧಾರ ಕೈಗೊಳ್ಳುವವರ ಬಗ್ಗೆ ವಿವರ

ಕ್ರ.ಸಂಖ್ಯೆ	ನಿರ್ದಾರ ಕೈಗೊಳ್ಳುವವರು	ಒಟ್ಟು	ಶೇಕಡಾ
1	ತಂದೆ	38	76%
2	ತಾಯಿ	12	24%
3	ಹಿರಿಯ ಮಗ	00	00
4	ಹಿರಿಯ ಮಗಳು	00	00
5	ಇತರರು	00	00
6	ಒಟ್ಟು	50	100%

ಮೆಲ್ಕಂಡ ದತ್ತಾಂಶಗಳನ್ನು ವಿಶ್ಲೇಷಣೆ ಮಾಡುದಾದರೆ. ಇಂದಿಗೂ ಕುಡುಬಿಯರಲ್ಲಿ ಪಿತೃಪ್ರದಾನ ಕುಟುಂಬ ವ್ಯವಸ್ಥೆ ಇದೆ ಎಂದು ತಿಳಿಯುತ್ತದೆ. ನಿಮ್ಮ ಮನೆಯಲ್ಲಿ ಪ್ರಮುಖ ನಿರ್ದಾರವನ್ನ ಯಾರು ತೆಗೆದು ಕೊಳ್ಳುತ್ತಾರೆ ಎಂಬ ಪ್ರಶ್ನೆಗೆ ಶೇ 76% ಮಂದಿ ತಂದೆಯ ಎಂದರೆ, ಶೇ24% ರಷ್ಟು ಮಂದಿ ತಾಯಿ ನಿರ್ದಾರ ತೆಗೆದುಕೊಳ್ಳುತ್ತಾರೆ ಎಂದು ಮಾಹಿತಿ ನೀಡಿದ್ದಾರೆ, ಇಲ್ಲಿ ಗಮನಿಸಬೇಕಾದ ಅಂಶವೆಂದರೆ ತಾಯಿ ನಿಧಾರಕ್ಕೆ 2ನೇ ಆಯ್ಕೆಯಾಗಿರುತ್ತದೆ. ತಂದೆಯ ಅನುಪಸ್ಥಿತಿಯಲ್ಲಿ ಮಾತ್ರ ತಾಯಿಯು ನಿರ್ಧಾರ ತೆಗೆದುಕೊಳ್ಳುತ್ತಾರೆ ಎಂಬುವುದು ತಿಳಿದು ಬರುತ್ತದೆ.

ಅಧ್ಯಾಯ–೦೫

ಸಾರಾಂಶ, ಸಲಹೆಗಳು, ಉಪಸಂಹಾರ, ಪ್ರಶ್ನಾವಳಿ, ಅನುಬಂಧಗಳು, ಆಕರ ಗ್ರಂಥಗಳು

ಅಧ್ಯಾಯ -5

5:1 ಸಾರಾಂಶ

"ಕುಡುಬಿ ಸಮುದಯದ ಸಮಾಜೋ-ಆರ್ಥಿಕ ಅಧ್ಯಯನ, ಮಂಗಳೂರು ತಾಳೂಕನ್ನು ಅನುಲಕ್ಷಿಸಿ" ಎಂಬ ಅಧ್ಯುನದಲ್ಲಿ ಕೊಂಕಣಿ ಕುಡುಬಿಯರ ಸಾಮಾಜಿಕ ಮತ್ತು ಅರ್ಥಿಕ ಸ್ಥಿತಿಗತಿಗ ಬಗ್ಗೆ ಅಧ್ಯಯನವನ್ನು ಮಾಡಲಾಗಿದೆ. ಈ ಅಧ್ಯಯನದ ಕಾಲಮಿತಿಯ ಕಾರಣದಿಂದಾಗಿ ಕುಡುಬಿ ಸಮುದಾಯ ಕೆಲವೊಂದು ಕುಡುಂಬಹಳ ಮನೆಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಲಾಗಿದೆ ಇಲ್ಲಿ ಕುಟುಂಬಗಳನ್ನು ಯಾದೃಚ್ಚಿಕವಾಗಿ ಆಯ್ಕೆಮಾಡಲಾಗಿದೆ. ಪ್ರಸ್ತುತ ಅಧ್ಯಯನದಲ್ಲಿ ಮಂಗಳೂರು ತಾಲೂಕಿನ ಕುತ್ತಾರ್‌ನ ಕೃಷ್ಣಕೋಡಿ, ದೇರಳಕಟ್ಟೆಯ ರೆಂಜಾಡಿ, ಎಡಪದವು ಮತ್ತು ಕೊಂಪದವು ಹಾಗೂ ಮೂಚ್ಚೂರು ಪ್ರದೇಶಗಳಿಗೆ ಬೇಟಿ ನೀಡಿ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

ಈ ಅಧ್ಯಯನದ ಪ್ರಮುಖ ಉದ್ದೇಶಗಳಾದ ಕುಡುಬಿ ಸಮುದಾಯದ ಹಿನ್ನೆಲೆ, ಸಂಸ್ಕೃತಿ ಮತ್ತು ಆಚರಣೆಗಳುಮತ್ತು ಕುಡುಬಿಯ ಸಮಾಜಿಕ- ಆರ್ಥಿಕ ಸ್ಥಿತಿಗತಿಗಳ ಹಾಗೂ ಅಧುನೀಕರಣ ಮತ್ತು ಶಿಕ್ಷಣ ಪ್ರಭಾವ ಬಗ್ಗೆ ಪ್ರಶ್ನೆಗಳ ಮೂಲಕ ಜನರಲ್ಲಿ ನೇರವಾಗಿ ಮಾಹಿತಿಯನ್ನು ಸಂಗ್ರಹಿಸಲಾಗಿದೆ ಅಲ್ಲದೆ ಕುಡುಬಿಯ ಬಗ್ಗೆ ಈ ಹಿಂದೆ ನಡೆದ ಹಲವು ಕೃತಿಯನ್ನು ಅವಲೋಕಿಸಲಾಗಿದೆ

ಈ ಸಂಶೋಧನಾ ಅಧ್ಯಯನವು ತಿಳಿಯ ಪಡಿಸುದೇನೆಂದರೆ ಒಟ್ಟು ಸೂಚನದಾರರಲ್ಲಿ ಬಹುಪಾಲು ಗ್ರಾಮೀಣ ಪ್ರದೇಶಕ್ಕೆ ಸೇರಿದರು ವಯಸ್ಸಿಗೆ ಸಂಬಂದಿಸಿದಂತೆ ಒಟ್ಟು ಶೇ 4% ರಷ್ಟು 20ರಿದ 30 ವರ್ಷದ ವರೆಗಿನ ಶೇ 10% ರಷ್ಟು 30 ರಿಂದ 40 ನಡುವಿನ ವಯೋಮಾನದವರು ಶೇ 30% ರಷ್ಟು 40 ರಿಂದ 50ರ ವಯೋ ಮಾನದವರು, 50 ರಿಂಧ 60ರವರ ವಯೋಮಾನದವರು ಶೇ 32% ರಷ್ಟು ಮತ್ತು 60ಕ್ಕಿಂತ ಮೆಲ್ಪಟ್ಟರು ಶೇ 24% ರಷ್ಟು ಸೂಚನದಾರರು ಸೇರಿದವರಾಗಿದ್ದಾರೆ. ಇದರಲ್ಲಿ ಶೇ 24 ರಷ್ಟು ಮಹಿಳಾ ಸೂಚನದಾರರು ಮತ್ತು ಶೇ 76 ರಷ್ಟು ಪುರುಷ ಸೂಚನದರರು ಇದ್ದಾರೆ, ಶೈಕ್ಷಣಿಕವಾಗಿ ಮತ್ತೆ ವಿಂಗಡಿಸುವುದಾದರೆ ಮಹಿಳೆಯರಲ್ಲಿ ಶೇ 24 ರಷ್ಟು ಅನಕ್ಷರಸ್ಥರು ಮತ್ತು ಪುರುಷರಲ್ಲಿ ಶೇ 36 ರಷ್ಟು ಅನಕ್ಷರಸ್ಥರು, ಪ್ರಾಥಮಿಕ ಶಿಕ್ಷಣ ಪಡೆದವರು ಶೇ 22 ಪ್ರೌಡ ಶಿಕ್ಷಣ ಪಡೆದವರು ಶೇ 16 ರಷ್ಟು ಹಾಗೂ ಶೇ 2ರಷ್ಟು ಪಿ.ಯು.ಸಿ ವರೆಗಿನ ಶಿಕ್ಷಣ ಪಡೆದವರನ್ನು ಒಳಗೊಂಡುದೆ, ವೈವಾಹಿಕ ಸ್ಥಿತಿಗತಿ ನೋಡುವುದಾದರೆ ಎಲ್ಲಾರು ವಿವಾಹಿತರಾಗಿದ್ದರು. ಇದರಲ್ಲಿ ಮಹಿಳಾ ಸೂಚನದಾರರಲ್ಲಿ ವಿಧವೆಯರನ್ನು ಆಧಿಕ ಪ್ರಮಾಣದಲ್ಲಿ ಕಾಣಬಹುದು ಕುಟುಂಬದ ಗಾತ್ರದಲ್ಲಿ ಶೇ 64 ರಷ್ಟು 1 ರಿಂದ 4 ಮಂದಿ ಸದಸ್ಯರನ್ನು ಹೊಂದಿದ್ದರೆ, ಶೇ 34 ರಷ್ಟು 5 ರಿಂದ 8 ಮಂದಿ ಸದಸ್ಯರನ್ನು ಹೂಂದಿರುತ್ತಾರೆ. ಸೂಚನದಾರರು ಹಂಚಿನ ಮನೆಯಲ್ಲಿ ವಾಸಿಸುತ್ತಿದ್ದಾರೆ.

ಸಾಮಾಜಿಕ ಸ್ಥಿತಿಗತಿಗಳು:

ಈ ಅಧ್ಯಯನದಲ್ಲಿ ಕುಟುಂಬದ ಪ್ರಮುಖ ನಿರ್ಧಾರದ ಬಗ್ಗೆ ಕೇಳಿದಾಗ ಶೇ 100 ರಷ್ಟು ಮಂದಿ ತಮ್ಮ ಎಲ್ಲಾ ನಿರ್ಧಾರಗಳನ್ನು ಪೋಷಕರಲ್ಲಿ ಕೇಳುತ್ತೇವೆ ಎಂದಿದ್ದಾರೆ. ಇದರಲ್ಲಿ ಶೇ 24 ಮಂದಿ ತಾಯಿಯ ಅಭಿಪ್ರಾಯ ಕೇಳುತ್ತೇವೆ ಎಂದರೆ ಶೇ 76 ರಷ್ಟು ಮಂದಿ ತಂದೆಯ ನಿರ್ಧಾರವೇ ಅಂತಿಮ ಎಂದಿದ್ದಾರೆ. ಶಿಕ್ಷಣದಲ್ಲಿ ಹೆಣ್ಣು ಮಕ್ಕಳಿಗೆ ಸಮಾನ ಅವಕಾಸ ವಿದೆಯೇ ಎಂದು ಕೇಳಿದಾಗ ಶೇ 90 ರಷ್ಟು ಮಂದಿ ಹೌದು ಎಂದು ಉತ್ತರಿಸಿದ್ದಾರೆ ಇನ್ನುಳಿದಂತೆ ಶೇ 10ರಷ್ಟು ಮಂದಿ ಇಲ್ಲ ಎಂದಿದ್ದಾರೆ.

ಈ ಅಧ್ಯಾಯನದಲ್ಲಿ ಹೆಣ್ಣು ಮಕ್ಕಳ ವಿವಾದ ಬಗ್ಗೆ ಕೇಳಿದಾಗ ಬಹುತೇಕರು 20 ರ ನಂತರವೇ ವಿವಾಹ ಮಾಡುವುದು ಸೂಕ್ತ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಹೆಣ್ಣು ಮಕ್ಕಳಿಗೆ ಅಸ್ತಿಯಲ್ಲಿ ಪಾಲು ಇದೆಯೇ ಎಂಬ ಪ್ರಶ್ನೆಗೆ ಹಿಂದೆ ಇರುತ್ತಿರಲಿಲ್ಲ ಆದರೆ ಈಗ ಶೇ100 ರಷ್ಟು ಇದೆ ಎಂಬ ಅಭಿಪ್ರಾಯವಿದೆ. ಹೆಣ್ಣು ಮಕ್ಕಳ ಶಿಕ್ಷಣದ ಬಗ್ಗೆ ಕೇಳಿದಾಗ ಬಹುತೇಕರು ಅವರು ಎಷ್ಟು ಕಲಿಯುತ್ತಾರೆ. ಅಲ್ಲಿಯವರೆಗೆ ಅವಕಾಶವಿದೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಈ ಸಮುದಾಯದಲ್ಲಿ ಹೆಣ್ಣು ಮಕ್ಕಳ ದೂರದ ಊರಲ್ಲಿ ಶಿಕ್ಷಣ ಪಡೆಯುವ ಬಗ್ಗೆ ಸಕಾರಾತ್ಮಕ ಅಭಿಪ್ರಾಯವಿಲ್ಲ.

ಆರ್ಥಿಕ ಸ್ಥಿತಿಗತಿಗಳು:

ಈ ಅಧ್ಯಯನದಲ್ಲಿ ತಿಳಿದು ಬಂದಂತೆ ಬಹುತೇಕರು ಸ್ವಂತ ನಿವಾಶವನ್ನು ಹೊಂದಿರುತ್ತಾರೆ. ಅದರೆ ಬಹುತೇಕರಲ್ಲಿ ಅಂದರೆ ಶೇ 90 ರಷ್ಟು ಮಂದಿಯಲ್ಲಿ ಸ್ವಂತ ಕೃಷಿ ಭೂಮಿ ಇಲ್ಲ ಈ ಸಮುದಾಯದ ಬಹುತೇಕರು ಕೂಲಿ ಕಾರ್ಮಿಕರಾಗಿದ್ದಾರೆ. ಹಣ ಉಳಿತಾಯದ ಬಗ್ಗೆ ಕೇಳಿದಾಗ ಬಹುತೇಕರು ಖಾತೆ ಇದೆ. ಎಂದು ಹೇಳಿದರೆ ಇವರಲ್ಲಿ ಹಣ ಉಳಿತಾಯ ಮಾಡುವ ಪ್ರಮಾಣ ಕಡಿಮೆ ಎಂದು ತಿಳಿಯುತ್ತದೆ. ಸೂಚನದಾರರಲ್ಲಿ ಸಾಮಾನ್ಯ ಗ್ರಹ ಬಳಕೆಯ ವಸ್ತುಗಳು ಕಂಡು ಬಂದಿದೆ. ಅದರೆ ಕೊಂಪದವು ಗ್ರಾಮದಲ್ಲಿನ ಸರಕಾರಿ ನಿವೇಶನದಲ್ಲಿ ವಾಸಿಸುವರ ಆರ್ಥಿಕವಾಗಿ ತುಂಬಾ ಹಿಂದುಳಿದಿರುವುದು ಕಂಡು ಬಂದಿದೆ. ಪ್ರಸ್ತುತ್ತ ಇವರಲ್ಲಿ ಪ್ರವರ್ಗ–1 ರಲ್ಲಿ ಇರುವುದರಿಂದ ಸರ್ಕಾರದ ವಿಶೇಷಯೋಜನೆಗಳು ಲಭ್ಯವಿಲ್ಲ ಎಂಬ ಅಭಿಪ್ರಾಯ ಪಟ್ಟಿದ್ದಾರೆ.

ಕ್ಷೇತ್ರಕಾರ್ಯ ಸಂದರ್ಭದಲ್ಲಿ ಸಂಶೋಧಕನು ಎದುರಿದ ಸಮಸ್ಯೆಗಳು:

ಕ್ಷೇತ್ರಕಾರ್ಯದ ಸಂದರ್ಭ ಸಂಶೋಧಕನು ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಯಿತು. ಅವುಗಳಲ್ಲಿ

1. ಅಧ್ಯಾಯನಕ್ಕೆ ಪಟ್ಟಿ ಮಾಡಿದ ಪ್ರದೇಶಕ್ಕೆ ತಲುಪುವುದು
2. ಸಂಶೋಧನೆಯ ಮಾಹಿತಿ ಸಂಗ್ರಹದ ಸಂದರ್ಭದಲ್ಲಿ ಅ ಸಮುದಾಯದ ಭಾಷೆಯ ಬಾರದೆ ಇದದ್ದು ಒಂದು ಆಡಚಣೆಯಾದರು ಸಂಶೋಧನಾ ಮನೋಭಾವದಿಂದ ಮಾಹಿತಿ ಸಂಗ್ರಹಿಸಲಾಗಿದೆ.
3. ಸಂಶೋಧನಾ ವಿಷಯದ ವ್ಯಾಪ್ತಿಯು ವಿಶಾಲವಾಗಿದ್ದರಿಂದ ಯಾದೃಚ್ಛಿಕವಾಗಿ ಕುಟುಂಬಗಳ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

ಸಲಹೆಗಳು:

ಕುಡುಬಿ ಸಮುದಾಯ ಬಗ್ಗೆ ನನ್ನಲ್ಲಿರುವ ಜ್ಞಾನ ಮೂಲಕ ನಾನು ಅವರಲ್ಲಿ ನಿರಾಕ್ಷಿಸುವ ಅಂಶಗಳು ಈ ಕೆಳಗಿನಂತೆ ಇವೆ.

1. ಕುಡುಬಿ ಸುಮುದಾಯ ಯುವ ಜನತೆ ಶಿಕ್ಷಣ ಪಡೆಯಬೇಕು ಮತ್ತು ಈ ಕ್ಷೇತ್ರದಲ್ಲಿ ಉನ್ನತ ಸಾಧನೆ ಮಾಡಬೇಕು.
2. ಕುಡುಬಿಯರ ಸಂಘಟಿತರಾಗಿ ತಮ್ಮ ಶಕ್ತಿಯನ್ನು ಹೆಚ್ಚಿಸಿ ಆ ಮೂಲಕ ತಮ್ಮ ಬೇಡಿಕೆಗಳನ್ನು ಇಡೇರಿಸಬೇಕು.
3. ಕುಡುಬಿಯರು ಬೇರೆ ಸಮುದಾಯದಂತೆ ಇನ್ನು ಮುಕ್ತವಾದ ಮನೋಭಾವ ಮತ್ತು ದೃಷ್ಟಿಕೋನವನ್ನು ಬೆಳೆಸಬೇಕು.
4. ಕುಡುಬಿ ಸಮುದಾಯದ ಯುವ ಜನತೆ ಸರಕಾರ ಯೋಜನೆಗಳನ್ನು ಮಾತ್ರ ಅವಲಂಬಿಸಿದ ತಮ್ಮ ವ್ಯಯುಕ್ತಿಕ ಸಾಮರ್ಥದಿಂದ ಸಮಾಜದ ಅಭಿವೃದ್ದಿಗೆ ಶ್ರಮಿಸಬೇಕು.

ಮುಖ್ಯ ಸಲಹೆಗಳು

ಪ್ರಸ್ತುತ ಕುಡುಬಿಯರ ಸಮುದಾಯದ ಸಮಾಜೋ-ಆರ್ಥಿಕ ಸ್ಥಿತಿಗತಿಗಳನ್ನು ಅಧ್ಯಯನ ಸಂಧರ್ಭದಲ್ಲಿ ಗಮನಿಸಿದಂತೆ ಸರಕಾರದ ವಿವಿಧ ಇಲಾಖೆಗೆ ಮತ್ತು ಗ್ರಾಮ ಪಂಚಾಯತಿಗಳಿಗೆ ಕೆಲವೊಂದು ಸಲಹೆಗಳು.

1. ಕುಡುಬಿ ಸಮುದಾಯದ ಮಕ್ಕಳಿಗೆ ಶಿಕ್ಷಣ ಮಹತ್ವದ ಬಗ್ಗೆ ಜಾಗೃತಿ ಮೂಡಿಸುವುದು.
2. ಆರ್ಥಿಕವಾಗಿ ಹಿಂದುಳಿದ ಕುಡುಬಿ ಸಮುದಾಯಕ್ಕೆ ವಿಧ್ಯಾರ್ಥಿಗಳಿಗೆ ಪರಿಣಾಮಕಾರಿಯಾಗಿ ವಿಧ್ಯಾರ್ಥಿ ವೇತನ ನೀಡುವುದು.
3. ಕುಡುಬಿ ಸಮುದಾಯದಲ್ಲಿ ಶಾಲೆಯಿಂದ ಹೊರಗಿರುವ ಮಕ್ಕಳನ್ನು ಗುರುತಿಸಿ ಕನಿಷ್ಠ ಪದವಿ ಪೂರ್ವ ಶಿಕ್ಷಣವನ್ನು ಪಡೆಯುವಂತೆ ಮಾಡುವುದು.

4. ಕುಡುಬಿ ಸಮುದಾಯದ ಪರಿಸರದಲ್ಲಿಯೇ ಅಂಗನವಾಡಿ ಕೇಂದ್ರಗಳನ್ನು ತೆಗೆಯುವುದು
5. ಸರಕಾರಿ ಭೂಮಿಯಲ್ಲಿ ವಾಸಿಸುತ್ತಿರುವ ಕುಡುಬಿ ಸಮುದಾಯಕ್ಕೆ ಹಕ್ಕು ಪತ್ರವನ್ನು ನೀಡುವುದು.
6. ಕುಡುಬಿ ಸಮುದಾಯದ ವಿಧ್ಯಾರ್ಥಿಗಳಿಗೆ ಸ್ವ ಉದ್ಯೋಗ ನೀಡುವುದು.
7. ಕುಡುಬಿ ಸಮುದಾಯ ಅರ್ಥಿಕ, ಶೈಕ್ಷಣಿಕ ಮತ್ತು ಸಾಂಪ್ರದಾಯಿಕ ಹಿನ್ನೆಲೆಯ ಬಗ್ಗೆ ಅವರಲ್ಲಿ ಜಾಗೃತಿ ಮೂಡಿಸುವುದು

ಸಮುದಾಯದ ಸಂಘಟನೆಗಳಿಗೆ ಕೆಲವೊಂದು ಸಲಹೆಗಳು

ಕುಡುಬಿ ಸಮುದಾಯದ ಯುವಕ/ಯುವತಿ ಮಂಡಲಗಳಿರಬಹುದು ಅಥವಾ ಯವುದೇ / ಧಾರ್ಮಿಕ ಸಂಘಟನೆಗಳಿರಬಹುದು ತಾವು ತಮ್ಮ ಸಮುದಾಯ ಮಕ್ಕಳ ಶಿಕ್ಷಣದ ಉನ್ನತೀಕರಣಕ್ಕೆ ಶ್ರಮಿಸಬೇಕು, ಶಿಕ್ಷಣ ಮತ್ತು ಸಹಕಾರ ಹಾಗೂ ಅಭಿವೃದ್ಧಿಯ ಬಗ್ಗೆ ಜಾಗೃತಿ ಉಂಟುಮಾಡುವ ಕಾರ್ಯ ಕ್ರಮಗಳನ್ನು ರೂಪಿಸಬೇಕು ಸಮುದಾಯದ ಯುವ ಜನರಲ್ಲಿ ಸಮುದಾಯದ ಬೆಳವಣಿಗೆಯ ಬಗ್ಗೆ ಮತ್ತು ಅವರ ಪಾತ್ರದ ಬಗ್ಗೆ ಜ್ಞಾನ ಮೂಡಿಸಬೇಕು ಸರಕಾರ ಸೌಲಭ್ಯಗಳನ್ನು ಪಡೆಯಲು ಸಮುದಾಯ ಜನರ ಧ್ರುವೀಕರಣ ಪ್ರಮುಖವಾದ್ದದು ಅ ದೃಷ್ಟಿಕೋನದಲ್ಲಿ ಕಾರ್ಯ ಪ್ರವೃತರಾಗಬೇಕು.

1. ಮಕ್ಕಳ ಶಿಕ್ಷಣದ ಮಹತ್ವದ ಬಗ್ಗೆ ಪೋಷಕರಲ್ಲಿ ಅರಿವು ಮೂಡಿಸುವುದು
2. ಮೌಲ್ಯಾಧಾರಿತ ಶಿಕ್ಷಣದ ಮಹತ್ವದ ಬಗ್ಗೆ ಪೋಷಕರಲ್ಲಿ ಅರಿವು ಮೂಡಿಸುವುದು.
3. ಸಮುದಾಯದಲ್ಲಿನ ಒಟ್ಟು ವಿಧ್ಯಾರ್ಥಿಗಳು ಮತ್ತು ಅವರ ಶಿಕ್ಷಣದ ಸ್ವರೂಪದ ಬಗ್ಗೆ ಮಾಹಿತಿ ಸಂಗ್ರಹಿಸುವುದು
4. ಸಮುದಾಯದಲ್ಲಿನ ಶಿಕ್ಷಣವನ್ನು ಅರ್ಧದಲ್ಲಿ ಮೊಟಕುಗೊಳಿಸಿದ ಮಕ್ಕಳ ಬಗ್ಗೆ ಮಾಹಿತಿ ಸಂಗ್ರಹಿಸಿ ಅದಕ್ಕೆ ಸೂಕ್ತ ಪರಿಹಾರ ದೊರೆಯುವಂತೆ ಮಾಡುವುದು
5. ಸಮುದಾಯದ ವಿಧ್ಯಾರ್ಥಿಗಳಲ್ಲಿ ತಾಂತ್ರಿಕ ಹಾಗೂ ಉನ್ನತ ಶಿಕ್ಷಣಕ್ಕೆ ಪ್ರೋತಾಹಿಸುವುದು.
6. ಸಮುದಾಯದ ಜನರಲ್ಲಿ ಸಮುದಾಯದ ಬೇಡಿಕೆಗಳು ಮತ್ತು ಅವುಗಳನ್ನು ಪಡೆಯುವ ಮಾರ್ಗದ ಬಗ್ಗೆ ಅರಿವು ಮೂಡಿಸುವುದು.
7. ಸಮುದಾಯದ ಜನರನ್ನು ಅಧಿಕ ಪ್ರಮಾಣದಲ್ಲಿ ಸಂಘಟನೆಯಲ್ಲಿ ಸದಸ್ಯರಾಗುವಂತೆ ಮಾಡುವುದು
8. ಸಮುದಾಯದ ಸಂಘಟನೆಗಳು ನಿರಂತರ ಕಾರ್ಯ ಚಟುವಟಿಕೆಯಲ್ಲಿ ತೊಡಗುವುದು.
9. ಮಕ್ಕಳ ರಜಾ ದಿನಗಳಲ್ಲಿ ಸಮುದಾಯ ಭವನಗಳಲ್ಲಿ ಯೋಗ, ಕ್ರೀಡಾ ಚಟುವಟಿಕೆ, ನೃತ್ಯ ಮತ್ತು ಸಂಗೀತ ಮುಂತಾದವುಗಳಲ್ಲಿ ಪಾಲುಗೊಳ್ಳುವಂತೆ ಅವಕಾಶ ಕಲ್ಪಿಸಿಕೊಡಬೇಕು

10. ಸಂಘಟನೆಗಳು ವರ್ಷದಲ್ಲಿ ಒಂದು ಬಾರಿಯಾದರು ಸಮುದಾಯ ವಿಧ್ಯಾರ್ಥಿಗಳೊಂದಿಗೆ ತನ್ನ ಸಮುದಾಯದಲ್ಲಿ ಬೇರೆ ಬೇರೆ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಗಣ್ಯರೊಂದಿಗೆ ಮುಕ್ತ ಸಂದರ್ಶನಕ್ಕೆ ಅವಕಾಶ ಮಾಡಿಕೊಡುವುದು.
11. ಸಮುದಾಯದ ಸಂಘಟನೆಗಳ ವಾರ್ಷಿಕೋತ್ಸವ ಸಂದರ್ಭದಲ್ಲಿ ಸಮುದಾಯದ ವಿಧ್ಯಾರ್ಥಿಗಳಿಂದ ಸಮುದಾಯದಕ್ಕೆ ಅಗತ್ಯ ಮಾಹಿತಿ ನಿಡುವ ಕಥೆಗಳನ್ನು ಅಯ್ಕೆ ಮಾಡಿ ನಾಟಕ ಅಥವಾ ಯಕ್ಷಗಾನ ಮಾಡಿಸುವುದು.
12. ಸಮುದಾಯದ ಮಕ್ಕಳಲ್ಲಿ ಶಿಕ್ಷಣ ಮತ್ತು ಸಾಮಾಜಿಕ ಜಾಲತಾಣಗಳ ಬಗ್ಗೆ ಒಳಿತು ಕೇಡುಕುಗಳ ಬಗ್ಗೆ ಅರಿವು ಮೂಡಿಸುವುದು.
13. ಸಮುದಾಯದ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಪ್ರೋತ್ಸಾಹಿಸುವುದು ಅವರ ರಕ್ಷಣೆಯ ಬಗ್ಗೆ ಅರಿವು ಮೂಡಿಸುವುದು.

ಉಪಸಂಹಾರ

ಕುಡುಬಿ ಸಮುದಾಯವು ವಲಸಿಗ ಸಮುದಾಯವಾದರೂ ಈ ಪ್ರದೇಶದಲ್ಲಿ ನೆಲೆ ನಿಂತು ಅನೇಕ ದಶಕಗಳೇ ಕಳೆದಿದ್ದಾರೆ. ಪ್ರಾದೇಶಿಕ ಭಾಷೆ ಮತ್ತು ಆಚರಣೆಗಳನ್ನು ತಮ್ಮಲ್ಲಿ ರೂಡಿಸಿಕೊಂಡಿರುತ್ತಾರೆ.

ಕರಾವಳಿ ಪ್ರದೇಶಕ್ಕೆ ವಲಸೆ ಬಂದು ಕಳೆದ ಅನೇಕ ದಶಕಗಳಿಂದ ಇಲ್ಲಿ ವಾಸವಾಗಿರುವ ಅನೇಕ ಸಮುದಾಯದಲ್ಲಿ ಕೊಂಕಣಿ ಕುಡುಬಿಯರು ಪ್ರಮುಖಕರು ಈ ಪ್ರದೇಶದಲ್ಲಿ ನೆಲೆ ನಿಂತು ಇಲ್ಲಿನ ಬಾಷೆ, ಸಂಸ್ಕøತಿ ಮತ್ತು ಸಂಪ್ರದಾಯಗಳನ್ನು ಆಚರಿಸುತ್ತಿರುವುದು ವಿಶೇಷವಾಗಿದೆ ಈ ಅಧ್ಯಾಯನದಲ್ಲಿ ಕುಡುಬಿಯರ ಸಂಪೂರ್ಣ ಮಾಹಿತಿಯನ್ನು ಹೊಂದಿಲ್ಲವಾಗಿದೆ. ಇನ್ನು ಮುಂದೆ ಅಧ್ಯಯನ ಮಾಡಬಹುದಾದ ಸಾಧ್ಯತೆಯನ್ನು ಗುರುತಿಸಿದೆ. ಈ ಅಧ್ಯಯನದಲ್ಲಿ ತಿಳಿದು ಬರುವ ಪ್ರಮುಖ ಅಂಶವೆಂದರೆ ಕುಡುಬಿಯರು ಅರ್ಥಿಕವಾಗಿ ಅಷ್ಟು ಉನ್ನತಿಯನ್ನು ಹೊಂದಿಲ್ಲ. ಈ ಸಮುದಾಯದ ಅನೇಕರು ಇನ್ನು ಕೃಷಿ ಮತ್ತು ಕೂಲಿ ಕಾರ್ಮಿಕರಾಗಿಯೇ ಜೀವನ ಮಾಡುತ್ತದ್ದಾರೆ.

ಈ ಸಮುದಾಯವು ಸಾಮಾಜಿಕವಾಗಿ, ರಾಜಕೀಯವಾಗಿ ಮತ್ತು ಶೈಕ್ಷಣಿಕವಾಗಿ ಇನ್ನು ಪ್ರಾಮುಖ್ಯತೆಯನ್ನು ಕಂಡುಕೊಂಡಿಲ್ಲ. ಶೈಕ್ಷಣಿಕವಾಗಿ ಈ ಸಮುದಾಯದಲ್ಲಿ ಖಾಲೆ ಬಿಡುವವರ ಸಂಖ್ಯೆಯು ಅಧಿಕವಾಗಿದೆ. ಇನ್ನುಳಿದಂತೆ ಸ್ನಾತಕೋತ್ತರ ಪದವಿ ಪಡೆದವರ ಸಂಖ್ಯೆ ತೀರಾ ಕಡಿಮೆ ಈ ಸಮುದಾಯದ ಪ್ರಮುಖರಲ್ಲಿ ತಮ್ಮನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಬೇಕೆಂಬ ಬೇಡಿಕೆ ಇದೆ.

ಈ ಅಧ್ಯಯನದಲ್ಲಿ ಕಂಡು ಬಂದ ಹಾಗೆ ಬಹುತೇಕ ಸೂಚನದಾರರು ಅವಿದ್ಯಾವಂತರು ಮತ್ತು ಮಕ್ಕಳಲ್ಲಿ ಕೂಡ 40 ಕ್ಕಿಂತ ಮೆಲ್ಪಟ್ಟವರಲ್ಲಿ ಶಿಕ್ಷಿತರ ಪ್ರಮಾಣ ತೀರಾ ಕಡಿಮೆ ಕುಡುಬಿ ಕುಡುಬಿ ಸಮುದಾಯವು ತಮ್ಮ ವಿಶಿಷ್ಟ ಸಂಪ್ರದಾಯದಿಂದ ವಿಶೇಷತೆಯನ್ನು ಹೊಂದಿದೆ. ಆದರೆ ಈ ಸಮಾಜವು ಇನ್ನುಳಿದ ಬುಡಕಟ್ಟ ಸಮುದಾಯಗಳಂತೆ ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಮತ್ತು ಅರ್ಥಿಕವಾಗಿ ಪ್ರಗತಿಯನ್ನು ಕಾಣಬೇಕಾಗಿದೆ.

ಪ್ರಶ್ನಾವಳಿ

ವಿಷಯ:– "ಕುಡುಬಿ ಸಮುದಾಯದ ಸಮಾಜೊ ಆರ್ಥಿಕ ಅಧ್ಯಯನ, ಮಂಗಳೂರು ತಾಲೂಕನ್ನು ಅನುಲಕ್ಷಿಸಿ"

ಸೂಚನದಾರರ ಮೂಲ ಮಾಹಿತಿ

1. ಹೆಸರು:
2. ವಯಸ್ಸು :
3. ಲಿಂಗ : ಗಂ / ಹೆ
4. ಶಿಕ್ಷಣ

(ಅ) ಅನಕ್ಷರಸ್ಥ (ಅ) ಪ್ರಾಥಮಿಕ (2) ಪ್ರೌಡ (ಈ) ಪಿ.ಯು.ಸಿ (ಎ) ಪದವಿ / ಸ್ನಾತಕೋತರ / ಐಟಿಐ / ಡಿಪ್ಲೋಮೊ / ನರ್ಸಿಂಗ್ / ತಾಂತ್ರಿಕ.

5. ಉದ್ಯೋಗ

(ಅ) ಕೂಲಿ ಕಾರ್ಮಿಕ (ಆ) ಸ್ವಂತ ಕೃಷಿ (ಇ) ಸ್ವಂತ ಉದ್ಯೋಗ (ಈ) ಖಾಸಗಿ ಉದ್ಯೋಗ (ಉ) ಸರಕಾರಿ ಉದ್ಯೋಗ.

6. ವಾರ್ಷಿಕ ಅದಾಯ

(ಅ) 20,20.000–40,000 (ಆ) 40,000–50,000

(ಇ) 50,000 –80.000 (ಈ) 80,000 ಕ್ಕಿಂತ ಜಾಸ್ತಿ

7. ಕುಟುಂಬದಲ್ಲಿ ವಾಸಿಸುವ ಜನರು

(ಅ) 1–4 (ಆ) 5–3 (ಇ)9–10 (ಈ) 10 ಕ್ಕಿಂತ ಜಾಸ್ತಿ

8. ಮನೆಯ ಮಾಲಿಕತ್ವ : 1. ಸ್ವಂತ 2. ಬಾಡಿಗೆ

ಸಾಮಾಜಿಕ ಸ್ಥಿತಿಗತಿಗಳು

9. ನಿಮ್ಮ ಕುಟುಂಬದ ಪ್ರಮುಖ ನಿರ್ಧಾರಗಳನ್ನು ಯಾರು ತೆಗೆದುಕೋಳ್ಳುತ್ತಾರೆ?

(ಅ) ತಂದೆ (ಆ) ತಾಯಿ (ಇ) ಹಿರಿಯಮಗ (ಈ) ಹಿರಿಯ ಮಗಳು (ಉ) ಇತರರು

10. ಪ್ರಮುಖ ನಿರ್ಧಾರ ತೆಗೆದುಕೊಳ್ಳುವಾಗ ಮನೆಯವರ ಸಲಹೆ ಕೇಳುತ್ತೀರಾ?

(ಅ) ಹೌದು (ಆ) ಇಲ್ಲ

ಕೇಳುವುದಾದರೆ ಯಾವ ಸಂದರ್ಭಗಳಲ್ಲಿ

(ಅ) ಎಲ್ಲಾ ಸಂದರ್ಭಗಳಲ್ಲಿ (ಆ) ಕೆಲವು ಸಂದರ್ಭಗಳಲ್ಲಿ

(ಇ) ವಿಶೇಷ ಸಂದರ್ಭಗಳಲ್ಲಿ

11. ನೀವು ನಿಮ್ಮ ಹೆಣ್ಣು ಮಕ್ಕಳಿಗೆ ಅಸ್ತಿಯನ್ನು ಪಾಲು ನೀಡುತ್ತೀರಾ?

(ಅ) ನೀಡುತ್ತೇವೆ (ಆ) ನೀಡುವುದಿಲ್ಲ

12. ನೀವು ನಿಮ್ಮ ಹೆಣ್ಣು ಮಕ್ಕಳನ್ನು ಎಷ್ಟನೇ ವಯಸ್ಸಿಗೆ ಮದುವೆ ಮಾಡಿಸುವುದು ಸೂಕ್ತವೆಂದು ಭಾವಿಸುತ್ತೀರ.

(ಅ) ಪ್ರಾಥಮಿಕ (ಆ) ಹೈಸ್ಕೂಲು (ಇ) ಪಿ.ಯು.ಸಿ

(ಈ) ಕಾಲೇಜು (ಉ) ಸ್ನಾತಕೋತ್ತರ ಪದವಿ

13. ನೀವು ಮಗನಿಗೂ ನೀಡುವಷ್ಟು ಶಿಕ್ಷಣಾವನ್ನು ಮಗಳಿಗೂ ನೀಡುವುದು ಸರಿಯೆಂಬುದನ್ನು ಒಪ್ಪುತ್ತೀರಾ?

(ಅ) ಒಪ್ಪುತ್ತೇವೆ (ಆ) ಒಪ್ಪುವುದಿಲ್ಲ

ಒಪ್ಪುದಿಲ್ಲವಾದರೆ ಯಾಕೆ:-

14. ನಿಮ್ಮ ಮಕ್ಕಳಿಗೆ ಈ ಕೆಳಗಿನ ಯಾವುದಾದರೂ ಸೌಲಭ್ಯ ದೊರೆತಿದೆಯಾ?

(ಅ) ಮಿಸಲಾತಿ (ಆ) ವಿದ್ಯಾರ್ಥಿವೇತನ (ಇ) ಶುಲ್ಕ ರಿಯಾಯಿತಿ

(ಈ) ಬ್ಯಾಂಕ್ ಸಾಲ (ಉ) ಇತರೆ:

15. ನಿಮ್ಮ ಮಗಳಿಗೆ ದೂರದ ಪ್ರದೇಶಲ್ಲಿ ಶಿಕ್ಷಣ ಪಡೆಯುವ ಅವಕಾಶ ದೊರೆತರೆ ಶಿಕ್ಷಣ ನೀಡಲು ನಿಮ್ಮ ಒಪ್ಪಿಗೆ ಇದೆಯಾ?

(ಅ) ಹೌದು (ಆ) ಇಲ್ಲ

ಇಲ್ಲವಾದರೆ ಕಾರಣ ತಿಳಿಸಿ:

16. ಅನರೋಗ್ಯದ ಸಂದರ್ಭದಲ್ಲಿ ಎಲ್ಲಿಂದ ಚಿಕಿತ್ಸೆ ಪಡೆಯುತ್ತೀರಿ?

(ಅ) ಸರಕಾರಿ ಅಸ್ಪತ್ರೆ (ಆ) ಸ್ಥಳಿಯ ಖಾಸಗಿ ಆಸ್ಪತ್ರೆ

(ಇ) ಗ್ರಾಮ ವೈದ್ಯರು (ಈ) ಮಾಂತ್ರಿಕರ ಭೇಟಿ (ಉ) ಸ್ವಂತ ಮನೆ ಔಷಧಿ

ಆರ್ಥಿಕ ಸ್ಥಿತಿಗಳು

17. ನಿಮಗೆ ಜಮೀನು / ಸಾಗುವಳಿ ಇದೆಯಾ?

(ಅ) ಇದೆ (ಆ) ಇಲ್ಲ

18. ಇದೆಯಾದರೆ ಹೇಗೆ ದೊರೆತದ್ದು

(ಅ) ಖರೀದಿಸಿದ್ದು (ಆ) ಪಿತ್ರಾರ್ಜಿತ (ಇ) ಭೂಸುಧಾರಣೆಯಿಂದ (ಈ) ಸರಕಾರಿ ಭೂಮಿ.

19. ನಿಮ್ಮ ಜಮೀನಿನ ಭೂಮಿ ಯಾವುದು?

(ಅ) ಒಣ ಭೂಮಿ (ಆ) ಕೃಷಿ ಭೂಮಿ (ಇ) ಒಣ ಭೂಮಿ

20. ನಿಮ್ಮ ಜಮೀನು ಆದಾಯದ ಮೂಲವೇ

(ಅ) ಹೌದು (ಆ) ಇಲ್ಲ

21. ನೀವು ಹಣ ಉಳಿತಾಯ ಎಲ್ಲಿ ಮಾಡುತ್ತೀರಿ?

(ಅ) ಬ್ಯಾಂಕ್ (ಆ) ಅಂಚೆ ಕಛೇರಿ (ಇ ಜೀವ ವಿಮೆ) (ಈ) ಇತರೆ.

22. ಉಳಿತಯ ಮಾಡಿದ ಹಣವನ್ನು ಯಾವ ಉದ್ದೇಶಕ್ಕಾಗಿ ಉಪಯೋಗಿಸಬೇಕೆಂದು ನಿರ್ಧರಿಸಿದ್ದೀರಿ?

(ಅ) ಮಕ್ಕಳ ವಿದ್ಯಾಭ್ಯಾಸ (ಆ) ವಿವಾಹಕ್ಕಾಗಿ (ಇ) ಮನೆಕಟ್ಟಲು (ಈ) ಸಾಲ ತೀರಿಸಲು (ಉ) ಭವಿಷ್ಯಕ್ಕಾಗಿ

23. ನಿಮ್ಮ ನೀರಿನ ಆಶ್ರಯ ಯಾವುದು?

(ಅ) ಸ್ವಂತ ಭಾವಿ (ಆ) ಕೆರೆ (ಇ) ಸಾರ್ವಜನಿಕ ಕೊಳವೆ ಬಾವಿ (ಈ) ನೆರೆಯವರ ಬಾವಿ

24. ಸಾಲ ಪಡೆಯುವುದಾದರೆ ಯಾರಿಂದ ಪಡೆಯುತ್ತೀರಿ?

(ಅ) ಬ್ಯಾಂಕ್ (ಆ) ಗಿರವಿದಾರರು (ಇ) ಕೈಸಾಲ (ಈ) ಇತರೆ

25. ಯಾವ ಕಾರಣಕ್ಕೆ ಸಾಲ ಮಾಡಿತ್ತೀರಿ?

(ಅ) ವಿವಾಹ (ಆ) ಮನೆಕಟ್ಟಲು (ಇ) ವಿದ್ಯಾಭ್ಯಾಸ (ಈ) ಅನಾರೋಗ್ಯ (ಉ) ಇತರೆ

26. ನಿಮ್ಮ ಕುಟುಂಬದಲ್ಲಿ ಯಾರಾದರು ವಲಸೆ ಹೋಗಿದ್ದಾರೆಯೇ?

(ಅ) ಬೇರೆ ತಾಲೂಕು (ಆ) ಬೇರೆ ಜಿಲ್ಲೆ (ಇ) ಬೇರೆ ರಾಜ್ಯ

(ಈ) ಬೇರೆ ದೇಶ

27. ನಾವು ಯಾವ ರೀತಿಯ ಸರ್ಕಾರಿ ಸೌಲಭ್ಯ ಪಡೆದಿದ್ದೀರಾ?

(ಅ) ಹಂಚು (ಆ) ಮನೆ (ಇ) ನೀವೇಶನ (ಈ) ವಿಧ್ಯುತ್ಸಂಪರ್ಕ (ಉ) ಶೌಚಾಲಯ ನಿರ್ಮಾಣ (ಊ) ಪಿಂಚಣೀ

28. ನೀವು ಯಾವ ಸಂಘಟಣೆಯಲ್ಲಿ ಸದಸ್ಯರಾಗಿದ್ದೀರಾ?

(ಅ) ಯುವಕ / ಯುವರಿ ಸಂಘ (ಆ) ಸ್ವಸಹಾಯ ಸಂಘ (ಇ) ಹಾಲಿನ ಡೈರಿ (ಈ) ಸಹಾಕಾರಿ ಸಂಘ (ಉ) ಪ್ರಜಾ ಪ್ರತಿನಿಧಿ (ಊ) ರಾಜಕೀಯ ಪಕ್ಷ

ಕುಟುಂಬದ ಇತರ ವಿವರಗಳು

ಸಂಖ್ಯೆ	ಯಜಮಾನ ನೊಂದಿಗಿರುವ ಸಂಬಂಧ	ಪ್ರಾಯ	ಶಿಕ್ಷಣ	ಮಾಧ್ಯಮ ಕನ್ನಡ/ಇಂಗ್ಲೀಷ್	ಉದ್ಯೋಗ	ಆದಾಯ
1						
2						
3						
4						
5						
6						
7						
8						
9						
10						

5:3 ಆಕರ ಗ್ರಂಥಗಳು

1. ಲಕ್ಕಪ್ಪಗೌಡ.ಎಚ್.ಜೆ. "ಕರ್ನಾಟಕ ಬುಡಕಟ್ಟುಗಳು" (1998) ಸಂಪಾದಕರು: ಕರ್ನಾಟಕ ಸಂಪುಟ-1 ಜಾನಪದ ಮತ್ತು ಯಕ್ಷಗಾನ ಸಕಾಡೆಮಿ ಪ್ರಕಾಶನ.
2. ನಾವಡ, ಎ.ವಿ. 2008, ಕೊಂಕಣದ ಕುಡುಬಿಯರು, ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ ಲಾಲ್‌ಭಾಗ್, ಮಂಗಳೂರು
3. ಗೋಪಾಲ ಗೌಡ. ಯಂ. ಕುಡುಬಿಯರ ಮದುವೆ, ಕುಡುಬಿ ಜಾನಪದ ಕಲಾ ವೇದಿಕೆ (ರಿ), ಎಡಪದವು, ಮಂಗಳೂರು
4. ನಾವಡ. ಎ.ವಿ. 1989, ಕುಡುಬಿಯರು, ಜಾನಪದ ಮಾಲೆ-10, ರಾಜ್ಯ ಸಂಪನ್ಮೂಲ ಕೇಂದ್ರ, ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ, ಮೈಸೂರು-23
5. ಮಾಡ್ತಾ, ವಿಲ್ಯಂ 1993 ಜಾನಪದ ಸಾಹಿತ್ಯ ದರ್ಶನ-17, ಕನ್ನಡ ಅಧ್ಯಾಯನ ಪೀಠ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ
6. Ravinranath Rao. Y. Trubal Tradition and Change - A Study of Kudubis of South Indian.
7. ಚಂದ್ರ ಪೂಜಾರಿ.ಎಂ 2011, ಸಂಶೋಧನ ಪ್ರಸ್ತಾವ, ಪ್ರಸಾರಾಂಗ ಕನ್ನಡ ವಿಶ್ವ ವಿದ್ಯಾಲಯ, ಹಂಪಿ.
8. ಮುನಿರಾಜು.ಎಸ್.ಬಿ. 2012, ಸಮಾಜಕಾಯ ಮತ್ತು ಸಮುದಾಯ ಅಭಿವೃದ್ಧಿ, ನಿರುತ ಪಬ್ಲಿಕೇಶನ್ಸ್ ಬೆಂಗಳೂರು.
9. ಪ್ರಭಾಕರ.ವಿ.ಎಸ್. 2000, ಬುಡಕಟ್ಟು ಬದುಕಿನ ಸ್ಥಿಂತರಕರು ಬುಡಕಟ್ಟು ಅಧ್ಯಾಯನ ಮಾಲೆ-3, ಪ್ರಸರಾಂಗ ಕನ್ನಡ ವಿಶ್ವವಿಧ್ಯಾಲಯ ಹಂಪಿ.
10. ಪುಟ್ಟಯ್ಯ.ಬಿ.ಎಂ. 2015, ಸಂಶೋಧನೆ ತಾತ್ವಿಕ ಅಯಾಮಗಳು, ಕನ್ನಡ ವಿಶ್ವಾ ವಿದ್ಯಾಲಯ, ಹಂಪಿ
11. ನಾವಡ.ಎ.ವಿ. 1993, ಕುಡುಬಿಯರು, ಹೊಸತು ಹಳತರ ಸಂಘರ್ಪದಲ್ಲಿ ಜಾನಪದ ಸಮಾಲೋಚನದಲ್ಲಿ ಪ್ರಕಟಿತ,ಮ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬೆಂಗಳೂರು.
12. ಕುಡುಬಿ ವಾಹಿನಿ ಮತ್ತು ಜ್ಞಾನ ದೀಪ್ತಿ ಪತ್ರಿಕೆಗಳು
13. ಬೇನಾಳ.ಎಚ್.ಎಸ್. ಹಿಂದುಳಿದ ವರ್ಗಗಳಿಗೆ ಡಾ. ಬಿ. ಆರ್ ಅಂಬೇಡ್ಕರರ ಕೊಡುಗೆ ಪ್ರಕಾಶಕರು ಸಹನಾ ಪ್ರಕಾಶನ, ಗುಲಬರ್ಗ, ವರ್ಷ: 2014.